ಹಂಪಿ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಎಂ.ಫಿಲ್. ಪದವಿಯ ಸಂಪ್ರಬಂಧ

"ಚದುರಂಗರ 'ವೈಶಾಖ' ಕಾದಂಬರಿಯ ಸಾಮಾಜಿಕ ಆಯಾಮಗಳು"

ನೋಂದಣಿ ಸಂಖ್ಯೆ:

೧೪೦೭೦೧೦೩೦೦೮೨

೨೦೧೪-೧೫

ಹಂಪಿ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಎಂ.ಫಿಲ್. ಪದವಿಯ ಸಂಪ್ರಬಂಧ

"ಚದುರಂಗರ 'ವೈಶಾಖ' ಕಾದಂಬರಿಯ ಸಾಮಾಜಿಕ ಆಯಾಮಗಳು"

ನೋಂದಣಿ ಸಂಖ್ಯೆ:

೧೪೦೭೦೧೦೩೦೦೮೨

ವಿದ್ಯಾರ್ಥಿ ಹೆಸರು
ಪುಷ್ಪ ಸಿ.

ಮಾರ್ಗದರ್ಶಕರು
ಡಾ. ಲೋಕೇಶ್ವರಪ್ಪ ಕೆ.ಬಿ.

೨೦೧೪-೧೫

“ಚದುರಂಗರ ‘ವೈಶಾಖ’ ಕಾದಂಬರಿಯ ಸಾಮಾಜಿಕ ಆಯಾಮಗಳು”

ಪರಿವಿಡಿ

ಅಧ್ಯಾಯ-೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಅಧ್ಯಾಯ-೧

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಹೊಸಗನ್ನಡ ಸಾಹಿತ್ಯ ಪ್ರಕಾರಗಳಲ್ಲಿ ಕಾದಂಬರಿಯು ಒಂದು ಮುಖ್ಯ ಪ್ರಕಾರವಾಗಿದೆ. ಕಾದಂಬರಿಗಳು ಕೇವಲ ಮನೋರಂಜನೆಯ ಸಾಧನಗಳಾಗದೆ ಬದುಕಿನ ಮಹಾಕಾವ್ಯಗಳಾಗಿವೆ. ವಾಸ್ತವಿಕವಾದ ಮನುಷ್ಯನ ಬದುಕಿನ ರಹಸ್ಯವನ್ನು ಬಿಡಿಸಿ ತೋರಿಸುವ ಸಾಹಿತ್ಯ ಪ್ರಕಾರ ಇದಾಗಿದೆ. ೧೯ನೇ ಶತಮಾನದಲ್ಲಿ ರೂಪುತಳೆದ ಈ ಸಾಹಿತ್ಯ ಪ್ರಕಾರಕ್ಕೆ ಒಂದು ಶತಮಾನದ ಇತಿಹಾಸವಿದೆ.

ಕಾದಂಬರಿ ಸ್ವರೂಪ ಕನ್ನಡದಲ್ಲಿ ರೂಪುಗೊಂಡದ್ದು ವೆಂಕಟಾಚಾರ್ಯರ ಅನುವಾದಗಳಿಂದ. ಮರಾಠಿ ಹರಿನಾರಾಯಣ ಅಪ್ಟೆಯವರ ಕಾದಂಬದರಿಗಳು ಗಳಗನಾಥರ ಮೂಲಕ, ಬಂಗಾಲಿಯ ಬಂಕಿಮಚಂದ್ರರ ಕಾದಂಬರಿಗಳು ವೆಂಟಚಾರ್ಯರ ಮೂಲಕ ಕನ್ನಡಕ್ಕೆ ಬಂದವು. ಬಂಗಾಲದಲ್ಲಿ ಬೀಸುತ್ತಿದ್ದ ರಾಷ್ಟ್ರೀಯತೆ ಮತ್ತು ಸುಧಾರಣೆಗಳು ಕನ್ನಡ ನಾಡಿನ ಜನರಿಗೆ ತಲುಪಿತು. ಈ ರೀತಿಯಾಗಿ ಕನ್ನಡ ಕಾದಂಬರಿಗೆ ನಿರ್ದಿಷ್ಟ ಆಕಾರ ನೀಡಲು ಯತ್ನಿಸಿದರು. ಸುಶಿಕ್ಷಿತ ಮಧ್ಯಮವರ್ಗದ ಜನರು ಕಾದಂಬರಿ ಓದುವ ಅಭ್ಯಾಸ ಮಾಡಿಕೊಂಡರು.

ಅನುವಾದದಿಂದ ಪ್ರಾರಂಭವಾದ ಕನ್ನಡ ಕಾದಂಬರಿಗಳು ಕಾಲಾಂತರದಲ್ಲಿ ಸ್ವತಂತ್ರವಾಗಿ ಕಾಣಿಸಿಕೊಂಡವು. ಗುಲ್ವಾಡಿ ವೆಂಕಟರಾಯರ 'ಇಂದಿರಾಬಾಯಿ', ಕೆರೂರು ವಾಸುದೇವಾಚಾರ್ಯರ ಇಂದಿರೆ, ಎಂ.ಎಸ್.ಪುಟ್ಟಣ್ಣ ನವರ 'ಮಾಡಿದ್ದುಣ್ಣೋ ಮಹಾರಾಯ', ಮುಖ್ಯವಾದ ಸ್ವತಂತ್ರ ಕಾದಂಬರಿಗಳಾಗಿವೆ. ಇಂದಿರಾಬಾಯಿ ಕನ್ನಡದ ಮೊದಲ ಹೆಜ್ಜೆಗಳಲ್ಲಿ ಹುಟ್ಟಿಕೊಂಡು ಈ ಕಾದಂಬರಿ, ವಿಧವಾ ಸಮಸ್ಯೆಯನ್ನು ಪ್ರಬುದ್ಧವಾಗಿ ಕಲಾತ್ಮಕವಾಗಿ ಚಿತ್ರಿಸುತ್ತದೆ.

ಮುಂದಿನ ದಶಕದಲ್ಲಿ ಕನ್ನಡ ಕಾದಂಬರಿಯು ಭಾರತೀಯ ಅಸ್ತಿತ್ವ ಪಡೆಯುವಷ್ಟೇ ಅಲ್ಲದೆ ಈ ಪ್ರಕಾರದ ಹಿರಿಮೆ-ಗರಿಮೆಗಳಿಗೆ ನಿರ್ಧಾರವಾಗಬಲ್ಲ ಕೃತಿಗಳನ್ನು ನೀಡಿತು. ಭಾರತೀಯ ಸ್ವಾತಂತ್ರ್ಯ ಹೋರಾಟ ಸ್ವದೇಶಿ ಆಂದೋಲನ ಗಂಭೀರೆಯವರ ವಿಚಾರಧಾರೆಗಳಿಂದ ಅಂದಿನ ಬರಹಗಾರರು ಒಂದಿಲ್ಲೊಂದು ತೆರನಾಗಿ ಪ್ರಭಾವಿತರಾಗಿದ್ದರು. ಶಿಕ್ಷಣದ ಪ್ರಸಾರದಿಂದಾಗಿ ಟಾಲ್‌ಸ್ಟಾಯ್ ಗಾರ್ಕಿಯಂತವರ ಕಾದಂಬರಿಕಾರರು ಮಾರ್ಗದರ್ಶಿಯಾಗಿದ್ದರು.

"ಶಿವರಾಮ ಕಾರಂತರ ದೇವದೂತರು, ಚೋಮನದುಡಿ, ಮೂಕಜ್ಜಿಯ ಕನಸುಗಳು, ಮರಳಿ ಮಣ್ಣಿಗೆ, ಅಳಿದ ಮೇಲೆ, ಅ.ನ.ಕೃ ಅವರ ಜೀವನ ಯಾತ್ರೆ, ಉದಯರಾಗ, ಸಂಧ್ಯಾರಾಗ, ಧರ್ಮಸೆರೆ, ಶ್ರೀರಂಗರ ವಿಶ್ವಾಮಿತ್ರ ಸೃಷ್ಟಿ, ರಂ.ಶ್ರೀ ಮುಗಳಿಯವರ ಚಾಳುರಿ, ಗೋಕಾಕರ ಇಜ್ಜೋಡು, ಕುವೆಂಪು ಅವರ ಕಾನೂರು ಸುಬ್ಬಮ್ಮ ಹೆಗ್ಗಡತಿ, ಮಲೆಗಳಲ್ಲಿ ಮದುಮಗಳು, ಹೀಗೆ ಕಾದಂಬರಿಯ ಯುಗವೇ ಪ್ರಾರಂಭವಾಯಿತು. ೧೯೨೦ ರಿಂದ ೧೯೪೫ರ ವರೆಗಿನ ಇಪ್ಪತ್ತೆರಡು ವರ್ಷಗಳಲ್ಲಿ ಸುಮಾರು ೮೦ ಕಾದಂಬರಿಗಳು ಪ್ರಕಟಗೊಂಡವು. ಇದನ್ನು ಬರೆದ ಕಾದಂಬರಿಕಾರರ ಸಂಖ್ಯೆ ಸುಮಾರು ೪೦".[೧]

ಕಾದಂಬರಿ ಸಾಹಿತ್ಯದ ಪ್ರಾಮುಖ್ಯತೆಯನ್ನು ನೋಡುವುದಾದರೆ ಈ ಸಾಹಿತ್ಯ ಪ್ರಕಾರ ಒಂದು ರೀತಿಯಿಂದ ಜನಪದ ಸಾಹಿತ್ಯದಂತೆ. ಸಾಮಾನ್ಯ ಜನರ ಆಶೋತ್ತರಗಳನ್ನು ಇದು ಸಮಕಾಲೀನ ಜೀವನಕ್ಕೆ ತೀರ ಯೋಗ್ಯವಾದ ರೂಪವಾಗಿದೆ. ೧೯ನೇ ಶತಮಾನದ ಮಧ್ಯ ಭಾಗದಲ್ಲಿ ಕಾಣಿಸಿಕೊಂಡ ಈ ಕಾದಂಬರಿ ಸಾಹಿತ್ಯ ನವೋದಯ, ಪ್ರಗತಿಶೀಲ, ನವ್ಯ ದಲಿತ-ಬಂಡಾಯಗಳೆಂಬ ವಿವಿಧ ಪ್ರಕಾರಗಳಾಗಿ ವಿಂಗಡಣೆಗೊಂಡು ೨೦ನೇ ಶತಮಾನದ ಆದಿಯಲ್ಲಿ ಸ್ವತಂತ್ರ ಅಸ್ತಿತ್ವವನ್ನು ಪಡೆದುಕೊಂಡಿದ್ದಲ್ಲದೆ ತನ್ನ ಹಿರಿಮೆ-ಗರಿಮೆಗಳಿಗೆ ನಿದರ್ಶನವಾಗಬಲ್ಲ ಕೃತಿಗಳನ್ನು ನೀಡಿತು.

---

೧) ಕನ್ನಡ ಸಾಹಿತ್ಯ ಸಂಸ್ಕೃತಿ ಕೋಶ-ಚಿ.ಸಿ.ನಿಂಗಣ್ಣ, ಪು.ಸಂ-೭೬

ಚದುರಸಂಗರ 'ವೈಶಾಖ' ಕಾದಂಬರಿಯ ಉದ್ದೇಶ ಮತ್ತು ವ್ಯಾಪ್ತಿಯನ್ನು ಕುರಿತು ಹೇಳುವುದಾದರೆ ಇವರು ನವೋದಯ, ಪ್ರಗತಿಶೀಲ, ನವ್ಯ ದಲಿತ- ಬಂಡಾಯ ಹೀಗೆ ಎಲ್ಲಾ ಕಾಲಘಟ್ಟಗಳಲ್ಲಿ ಕಸುವನ್ನು ಪಡೆದು ಅರಗಿಸಿಕೊಂಡಿದ್ದಾರೆ, 'ವೈಶಾಖ' ಕಾದಂಬರಿಯು ಚದುರಂಗರ ನವೋದಯದ ಆದರ್ಶ-ರಮ್ಯತೆ, ಪ್ರಗತಿಶೀಲರ ವಾಸ್ತವಿಕ ಪ್ರಜ್ಞೆ, ಇವುಗಳನೆಲ್ಲಾ ದಾಟಿ ನವ್ಯ ಮತ್ತು ದಲಿತ ಬಂಡಾಯ ಆಶಯಗಳನ್ನು ಮೈಗೂಡಿಸಿಕೊಂಡು ಪರಂಪರೆಯನ್ನು ಮುರಿದ ಮನುಷ್ಯನ ಒಳಹೊರಗುಗಳನ್ನು ಮುಲಾಜಿಲ್ಲದೆ ಹೊರಸೆಳೆಯುವ ಗ್ರಾಮೀಣ ಜಗತ್ತನ್ನು ಅನಾವರಣಗೊಳಿಸಿದ ಸಮರ್ಥ ಕಾದಂಬರಿ ಇದಾಗಿದೆ.

'ವೈಶಾಖ' ಕಾದಂಬರಿಯ ಕೇಂದ್ರ ದರುಮನಹಳ್ಳಿ. ಈ ದುರುಮನಹಳ್ಳಿಯೇ-ಧರ್ಮದಹಳ್ಳಿ, ಇದು ಅಂತಿಂತಹಳ್ಳಿಯಲ್ಲ ಮಹಾಭಾರತದ ಹಿನ್ನೆಲೆಯೇ ಇದಕ್ಕಿದೆ. ಮಹಾಭಾರತದ ಪ್ರಪಂಚ ರಾಮಾಯಣದ ಪ್ರಪಂಚದ ಹಾಗೆ ಆದರ್ಶದ ಪ್ರಪಂಚವಲ್ಲ. ಒಳಿತು-ಕೆಡಕು, ನ್ಯಾಯ-ಅನ್ಯಾಯ, ಧರ್ಮ-ಅಧರ್ಮ ಹಾಗೆ ಎಲ್ಲವನ್ನು ಅಡಗಿಸಿಕೊಂಡಿರುವಂಥ ಮನುಷ್ಯನ ಅಸ್ತಿತ್ವದಲ್ಲಿರುವ ಹಲವಾರು ಮುಖವಾಡಗಳನ್ನು ಬಿಚ್ಚಿಡುವ ಲೌಕಿಕ ಪ್ರಪಂಚ. ಅಂತಹ ಪ್ರಪಂಚದ ಜೊತೆಗೆ ದುರುಮನಹಳ್ಳಿಗೆ ಅವಿನಾಭಾವ ಸಂಬಂಧವಿದೆ. ಈ ಹಳ್ಳಿಯ ಪಕ್ಕದಲ್ಲಿಯೇ ಶಕುನಿ ಕೊಪ್ಪಲಿದೆ, ದ್ರೋಣಾಚಾರ್ಯ ಕುರುಕ್ಷೇತ್ರದ ಯುದ್ಧದಲ್ಲಿ ರಚಿಸಿದ ಚಕ್ರವ್ಯೂಹದ ಪ್ರಯೋಗ ಸ್ಥಳವಾಗಿರುವ ಚಿತ್ರಮೂಲನ ಕೋಟೆ ಇದೆ. ಪಾಂಡವರು ಕುದುರೆ ಕಟ್ಟುತ್ತಿದ್ದ ಕಂಬಗಳಿವೆ. ಇವೆಲ್ಲವೂ ಪೌರಾಣಿಕ ಕಥೆಯಾದರೂದರೂ ಹಳ್ಳಿಗರ ನೆನಪುಗಳಲ್ಲಿ ಮಾತ್ರ ಅದರ ಕೆಲವು ಅಂಶಗಳು ಅಸ್ತಿತ್ವವನ್ನು ಉಳಿಸಿಕೊಂಡಿದೆ. ತನ್ನ ಮೋಸ ವಂಚನೆಗಳ ಮೂಲಕವೇ ಮಹಾಭಾರತದಲ್ಲಿ ನಡೆಸಿದ ಶಕುನಿ, ಅಭಿಮನ್ಯುವಿನಂತಹ ಎಳೆಯನನ್ನು ಅತಿರಥ ಮಹಾರಥರು ಮೋಸ, ಕುಟಿಲತೆಗಳಿಂದ ಕೊಂದ ಚಕ್ರವ್ಯೂಹ ರಚನೆ ಅದನ್ನು ಸ್ಪಷ್ಟಪಡಿಸುತ್ತದೆ.

ಚದುರಂಗರ ವೈಶಾಖ ಕಾದಂಬರಿಯಲ್ಲಿ ಗ್ರಾಮೀಣ ಪ್ರದೇಶದ ಚಿತ್ರಣ ಅನಾವರಣಗೊಂಡಿದೆ. ದರುಮನಹಳ್ಳಿಯಲ್ಲಿ ನಡೆನುಡಿ, ಮಡಿ ಮೈಲಿಗೆ, ಹಬ್ಬ ಹರಿದಿನ,

ಅರ್ಥಕಳೆದುಕೊಂಡು ಜೀವಂತಿಕೆ ಇಲ್ಲದಂತಾಗಿದೆ. ವ್ಯಕ್ತಿಗಳ ಆಕ್ರಮಣ, ಅಸಾಹಕತೆಗಳು, ಅನ್ಯಾಯ-ಅತ್ಯಾಚಾರಗಳು, ಕಿತಾಪತಿ ಕಿರುಕುಳಗಳು, ದ್ವೇಷ ಅಸೂಯೆಗಳು ಜೊತೆಗೆ ಅಲ್ಲಲ್ಲಿ ವಾತ್ಸಲ್ಯ, ಅನುಕಂಪ, ಪರಹಿತನಿಷ್ಠೆ, ಉದಾತ್ತಗುಣ ಮುಂತಾದ ಮಾನವೀಯ ಮಿಡಿತಗಳು ಕೆಲ ಪಾತ್ರಗಳಲ್ಲಿ ಗೋಚರವಾಗುತ್ತದೆ. ಮನುಷ್ಯ ಲೋಕದ ಬಗೆ ಬಗೆಯ ಭಾವನೆ ಮತ್ತು ಕ್ರಿಯೆಗಳ ಪ್ರತಿರೂಪವೆಂಬಂತೆ ದುರ್ಬಲವಾದ ಹಾವು-ಮುಂಗುಸಿಗಳ ರೋಷ ಭೀಷಣ ಹೋರಾಟ, ಕಾಳಿಂಗ ಸರ್ಪ ಮತ್ತು ಕಟ್ಟಿರುವೆಗಳ ಬಲಾಬಲ ಪ್ರದರ್ಶನದ ಸೆಣಸಾಟ, ಆನೆಯೊಂದರ ಸೃಷ್ಟಿಕ್ರಿಯೆ ಉಳಿದ ಆನೆಗಳು ರಚಿಸಿದ ಚಕ್ರವ್ಯೂಹ, ಮುಂತಾದ ಚಿತ್ರಣಗಳು, ವಿಶಿಷ್ಟಾನುಭವಗಳು ಓದುಗರನ್ನು ವಿಸ್ಮಿತರನ್ನಾಗಿ ಮಾಡುತ್ತದೆ.

ನಿರೂಪಕರು ಮನುಷ್ಯ-ಸಮಾಜದ ಸಂಬಂಧಗಳನ್ನು ನಿಷ್ಠೂರವಾಗಿ ಮುಕ್ತವಾಗಿ ಭೂತ-ವರ್ತಮಾನ-ಭವಿಷ್ಯ ಕಾಲಗಳೊಂದಿಗೆ ಸಾಮಾಜಿಕ ಪ್ರಕ್ರಿಯೆಗಳ ಮೂಲ ಕಾರಣ ಹುಡುಕುವುದರೊಡನೆ, ಅವು ನಡೆಯುವ ಕ್ರಮದ ಶೋಧನೆಗೆ ತೊಡಗುವುದು ಮತ್ತು ಈ ಮೇಲಿನ ಅಂಶಗಳನ್ನು ಗಮನದಲ್ಲಿ ಇಟ್ಟುಕೊಂಡು ತಾತ್ವಿಕವಾಗಿ ಸಾಮಾಜಿಕ ಆಯಾಮಗಳನ್ನು ವಿವಿಧ ದೃಷ್ಟಿಕೋನದಲ್ಲಿ ಅಧ್ಯಯನ ನಡೆಸುವುದು ಸಂಶೋಧನೆಯ ಉದ್ದೇಶವಾಗಿದೆ.

ದುರುಮನಹಳ್ಳಿಯ ಪಂಚಾಯಿತಿಯ ನ್ಯಾಯ ಅನ್ಯಾಯದಿಂದ ಕೂಡಿದೆ. ಅನೈತಿಕ ಚಟುವಟಿಕೆಗಳು ಇಲ್ಲಿ ತಾಂಡವಾಡುತ್ತಿದೆ. ಮೇಲ್ವರ್ಗದವರಿಂದ ಕೆಳವರ್ಗದವರು ಅನ್ಯಾಯಕ್ಕೆ ಅಸಾಹಯಕ ಪರಿಸ್ಥಿತಿಗೆ ಒಳಪಡುವುದನ್ನು ಇಲ್ಲಿ ಕಾಣಬಹುದು ಹಾಗೂ ದಲಿತ ವರ್ಗದ ಲಕ್ಕನ ಕತೆಯನ್ನು ಹೇಳುವುದರಲ್ಲಿ ಚದುರಂಗರ ಆಶಯವೇನು? ಕಾದಂಬರಿಯ ಆಶಯ ಕೇವಲ ದಲಿತನೊಬ್ಬನ ಮನೋಜಗತ್ತನ್ನು ಚಿತ್ರಿಸುವುದೇ ಆಗಿದ್ದರೂ ಬ್ರಾಹ್ಮಣ ವರ್ಗಕ್ಕೆ ಸೇರಿದ ರುಕ್ಮಿಣಿಯನ್ನು ಕಾದಂಬರಿಯ ನಾಯಕಿಯನ್ನಾಗಿ ಚಿತ್ರಿಸುವಲ್ಲಿ, ಇಡೀ ಕಾದಂಬರಿಯ ಅಂತ್ಯ ಅವನತಿಗೊಳ್ಳುವ ರೀತಿಯಲ್ಲಿ ಅವಳ ಪ್ರಜ್ಞೆಯ ಮೂಲಕ ಕತೆ ಹೇಳಿಸುವುದರಲ್ಲಿ ಇರಬಹುದಾದ ಉದ್ದೇಶವಾದರೂ ಏನು? ಎಂಬ ಹಲವಾರು ಪ್ರಶ್ನೆಗಳನ್ನು ಮುಂದಿಟ್ಟುಕೊಂಡು ಅಧ್ಯಯನವನ್ನು ಮಾಡಲಾಗುವುದು.

ವೈಶಾಖವೂ ತನ್ನದೇ ಆದ ವಿನಾಶಕಾರಿ ಕೋಟೆಯನ್ನು ನಿರ್ಮಿಸಿಕೊಂಡಿದೆ. ಅದು ಬೇರೆ ಯಾವುದೂ ಅಲ್ಲ ಚಿತ್ರಮೂಲನ ಕೋಟೆ. ಈ ಕೋಟೆಯೊಳಗಡೆ ಒಮ್ಮೆ ಸಿಲುಕಿದರೆ ಮತ್ತೆ ಭೇದಿಸಿ ಹೊರಬರುವುದು ಅಸಾಧ್ಯ ಜಟಿಲತೆಯ ಸಾವಿನ ಪ್ರತಿಕ. ಇದರ ಸೂತ್ರ ಇರುವ ಚಕ್ರವ್ಯೂಹವು ಪೌರುಷ ಸತ್ತು ಹೇಡಿತನದ ಮತ್ತು ಧರ್ಮಗೇಡಿತನಗಳ ವಿಜೃಂಭಿಸುವವರ ಪ್ರತೀಕವೂ ಆಗುತ್ತದೆ. ಕತೆ ಬೆಳೆದಂತೆ ಇಡೀ ಹಳ್ಳಿಯೇ ಒಂದು ವಿಧವಾದ ಚಿತ್ರಮೂಲನ ಕೋಟೆಯಾಗಿ ಬಹಳ ಸಂಸಾರಗಳು ದುರಂತವನ್ನಪ್ಪುತ್ತದೆ. ಈ ಮೂಲಕ ಚದುರಂಗರೇ ವಿನಾಶವನ್ನು ಚಿತ್ರಿಸುವಲ್ಲಿ ಇಡೀ ದರುಮನಹಳ್ಳಿ ಪ್ಲೇಗಿಗೆ ಒಳಗಾಗುವಲ್ಲಿ ಕಾದಂಬರಿಯೂ ಕೂಡ ಅಂತ್ಯಗೊಳ್ಳುತ್ತದೆ. ಈ ಎಲ್ಲಾ ವಿಚಾರಗಳನ್ನು ಕುರಿತು ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಆದರೆ ಕಾದಂಬರಿಯ ಒಳಹೊಕ್ಕು ಅಧ್ಯಯನಕ್ಕೆ ಒಳಪಡಿಸಿದರೆ ನಿರೂಪಕರು ವಸ್ತು ನಿರ್ವಹಣೆ ಮತ್ತು ನಿರೂಪಣಾ ವಿಧಾನದಲ್ಲಿ ಹೊಸತವನ್ನು ಸಾಧಿಸಲು ಯತ್ನಿಸಿರುವುದು ಕಂಡುಬರುತ್ತದೆ. ಸಾಮಾಜಿಕವಾಗಿ ಕೆಳಸ್ತರದಲ್ಲಿರುವ ಶೋಷಿತ ವ್ಯಕ್ತಿಯೊಬ್ಬನು ವಿಕಸನಶೀಲ ಪ್ರಜ್ಞೆಯ ಮೂಲಕ ನಾಳೆಗೆ ಸಿದ್ಧನಾಗುವ ಪ್ರಕ್ರಿಯೆಯನ್ನು ಬಿಂಬಿಸುವಲ್ಲಿ ಸಮಕಾಲೀನ ಈ ದಶಕದ ಪ್ರಮುಖ ಸಾಹಿತ್ಯಿಕ ಆಶಯವೊಂದನ್ನು ಕೃತಿ ಪಡೆದಂತಾಗಿದೆ. ಸಾಂಪ್ರದಾಯಿಕ ಅರ್ಥದ ಬಂಧದಲ್ಲಿ ಸಾವಯವತೆ ಇಲ್ಲದಿದ್ದರೂ ಮಾನವ ಪ್ರಾಣಿ ಮತ್ತು ಪ್ರಾಕೃತಿಕ ಜಗತ್ತುಗಳ ವಿವರಗಳ ಮಂಡನೆಯ ಕ್ರಮದಿಂದ ಆಚರಣೆ, ನಂಬಿಕೆ, ಪುರಾಣಗಳ ಬಳಕೆಯಿಂದ ಬಂಧವೊಂದನ್ನು ಬೇರೊಂದು ನೆಲೆಯಲ್ಲಿ ಕೃತಿಗೆ ಒದಗಿಸಲಾಗಿದೆ. ಈ ಎಲ್ಲಾ ಅಂಶಗಳಿಂದ 'ವೈಶಾಖ' ಕನ್ನಡ ಕಾದಂಬರಿಗಳಲ್ಲಿ ಮಹತ್ವದ ಸ್ಥಾನವೊಂದನ್ನು ಗಳಿಸಿಕೊಂಡಿದೆ.

ವೈಶಾಖದ ಜೊತೆಗೆ ಕೆಲವು ದೃಷ್ಟಿಯಿಂದ ಕುವೆಂಪುರವರ 'ಕಾನೂರು ಹೆಗ್ಗಡತಿ' 'ಮಲೆಗಳಲ್ಲಿ ಮದುಮಗಳು', ಕಾರಂತರ ಮರಳಿ ಮಣ್ಣಿಗೆ, ರಾವ್ ಬಹದ್ದೂರರ 'ಗ್ರಾಮಾಯಣ', ಮುಂತಾದ ಅತ್ಯುತ್ತಮ ಪ್ರಾದೇಶಿಕ ಕಾದಂಬರಿಗಳ ಸಾಲಿಗೆ ಸೇರುವಂತದ್ದು ಎಂದು ಗುರುತಿಸಬಹುದು 'ವೈಶಾಖ' ಕಥಾಭಾಗದ ಬೃಹತ್ತು, ಅನುಭವಸಾಂದ್ರತೆಯ

ಮಹತ್ವ ಹಾಗೂ ವಸ್ತು ನಿರ್ವಹಣೆಯ ಕಲಾತ್ಮಕ ಕಿಮ್ಮತ್ತುಗಳ ದೃಷ್ಟಿಯಿಂದ ಕನ್ನಡ ಕಾದಂಬರಿ ಪರಂಪರೆಯ ಮುನ್ನಡೆಗೆ ಚಾಲನೆ ಕೊಡುವ ಹೊಸ ಕೊಡುಗೆ ಈ ಕಾದಂಬರಿ ಎಂದು ಹೆಮ್ಮೆಯಿಂದ ಹೇಳಬಹುದು.

ಒಟ್ಟಾರೆಯಾಗಿ ವೈಶಾಖ ಕಾದಂಬರಿಯು ನಿಸರ್ಗ ಸಹಜ ನಿಯಮಗಳನ್ನು ಮೀರುವ ಅವುಗಳಿಗೆ ನಿಯಂತ್ರಣವನ್ನು ಹೇರುವ ಮೂಲಕ ತಂದುಕೊಳ್ಳುವ ದುರಂತವನ್ನು ಚಿತ್ರಿಸುತ್ತದೆ. ಸಂಸ್ಕೃತಿಯಲ್ಲಿ ಕ್ರಿಯಾತ್ಮಕವಾಗಿರುವ ಜೀವಂತ ಹಾಗೂ ಸತ್ತ ನೆಲೆಗಳೆರಡರ ಸಂಘರ್ಷವನ್ನು ತೆರೆದಿಡುತ್ತಾ ಹೋಗುತ್ತದೆ. ಹೀಗೆ ದುರುಮನಹಳ್ಳಿಯ ದುರಂತವು ಹೊರಗಿನ ಕಾರಣಗಳಿಂದ ಘಟಿಸುವುದಿಲ್ಲ ತನ್ನೊಳಗಿನ ಕ್ರೌರ್ಯ, ಅಸಮಾನತೆ, ನಿಸರ್ಗದಿಂದ ದೂರ ಉಳಿದ ಜೀವನ ರೂಢಿಗಳು, ಜೀವ ಮೂಲಗಳ ಅಪವಿತ್ರೀಕರಣದಂತಹ ಕಾರಣಗಳಿಂದ ಸ್ಫೋಟಗೊಳ್ಳುವ ನೆಲೆಯದು. ಭಾರತೀಯ ಸಮಾಜದ ಎಲ್ಲಾ ಗ್ರಾಮೀಣ ಜೀವನ ಕ್ರಮಗಳು ಇಂದು ಈ ಬಗೆಯ ಒಳಗಿನ ಸ್ಫೋಟಗಳಿಂದ ಛಿದ್ರವಾಗುತ್ತಿರುವ ದುರಂತವನ್ನು ವೈಶಾಖ ಕಾದಂಬರಿಯು ಕಟ್ಟಿಕೊಡುತ್ತದೆ. ಈ ದುರಂತಗಳಿಂದ ಪಾರಾಗುವ ಪರ್ಯಾಯಗಳನ್ನು ತನ್ನ ಭಿತ್ತಿಯಲ್ಲಿ ಹುದುಗಿಸಿಕೊಂಡಿರುವುದು ಕಾದಂಬರಿಯ ವೈಶಿಷ್ಟ್ಯವಾಗಿದೆ. ಹಾಗಾಗಿ ಈ ಎಲ್ಲಾ ವಿಚಾರಗಳನ್ನು ಗಮನದಲ್ಲಿಟ್ಟುಕೊಂಡು ಸಾಮಾಜಿಕ ಆಯಾಮಗಳ ಹಿನ್ನೆಲೆಯಲ್ಲಿ ಚರ್ಚಿಸಲಾಗಿದೆ.

ಹಾಗಾಗಿ ಇಲ್ಲಿನ ಪ್ರತಿ ಘಟನೆಯನ್ನು ಆಧುನಿಕ ಸಂದರ್ಭದಲ್ಲಿ ವಾಸ್ತವಿಕತೆಗೆ, ಪ್ರಸ್ತುತಸ್ಥಿತಿಗೆ ಅನ್ವಯಿಸಿದರೂ ಕಾಲಾಂತರದಲ್ಲಿ ಅದರ ರೂಪ ಮಾತ್ರ ಬೇರೆಯೇ ತೆರನಾಗಿರುತ್ತದೆ. ೧೯೮೧ ರಲ್ಲಿ ಪ್ರಕಟಗೊಂಡ ಈ ಕಾದಂಬರಿಯು ೩೪ ವರ್ಷ ಕಳೆದರೂ ಸಮಾಜದಲ್ಲಿ ಬದಲಾವಣೆಯು ಸಂಪೂರ್ಣವಾಗಿ ಕಂಡು ಬಂದಿಲ್ಲ. ಎಷ್ಟೋ ಘಟನೆಗಳು ಎಲ್ಲಾ ಕಾಲದಲ್ಲಿ ಕಾಣಿಸುವಂತದ್ದೆ ಆಗಿರುವುದರಿಂದ ಮಾನವ ಸಂಬಂಧಗಳ ಸಂಘರ್ಷವನ್ನು ಆರ್ಥಿಕವಾಗಿ, ಸಾಮಾಜಿಕವಾಗಿ, ಧಾರ್ಮಿಕವಾಗಿ, ಶೈಕ್ಷಣಿಕವಾಗಿ, ರಾಜಕಿಯವಾಗಿ ವಿಶ್ಲೇಷಿಸಲಾಗಿದೆ. ಅಲ್ಲದೆ ಪಾತ್ರ ಚಿತ್ರಣ, ಗಂಡು-ಹೆಣ್ಣಿನ ಕಾಮ

ಸಂಬಂಧ, ಭಾಷಾ ಸ್ವರೂಪ, ವಸ್ತು ನಿರ್ವಹಣೆ, ತಂತ್ರ, ಇವುಗಳನ್ನು ಕುರಿತು ಅಧ್ಯಯನ ಮಾಡಲಾಗುವುದು. ಬ್ರಾಹ್ಮಣ ಮತ್ತು ಬ್ರಾಹ್ಮಣೇತರರ ಸಂವೇದನೆ ಸಾಮಾಜಿಕ ಸಾಂಸ್ಕೃತಿಕ ಚಿತ್ರಣದ ಅನಾವರಣ ಮೇಲ್ವರ್ಗ-ಕೆಳವರ್ಗದವರ ನಡುವಿನ ಸಂಘರ್ಷಗಳನ್ನು ಕುರಿತು ಎಂ.ಫಿಲ್. ಸಂಪ್ರಬಂಧದಲ್ಲಿ "ಚದುರಂಗರ 'ವೈಶಾಖ' ಕಾದಂಬರಿಯ ಸಾಮಾಜಿಕ ಆಯಾಮಗಳು" ಎಂಬ ಶೀರ್ಷಿಕೆ ಅಡಿಯಲ್ಲಿ ಚರ್ಚಿಸಲು ಬಯಸುತ್ತೇನೆ.

ಅಧ್ಯಾಯ-೨

ಚದುರಂಗರ ಬದುಕು-ಬರಹ

ಅಧ್ಯಾಯ–೨

ಚದುರಂಗರ ಬದುಕು–ಬರಹ

ಹೊಸಗನ್ನಡ ಸಾಹಿತ್ಯ ಲೋಕದಲ್ಲಿ ತಮ್ಮದೇ ಆದ ಹೊಸ ಛಾಪನ್ನು ಮೂಡಿಸಿದ 'ಎಂ ಸುಬ್ರಮಣ್ಯರಾಜೆ' ರವರು ತಮ್ಮ ಕಾವ್ಯನಾಮದ 'ಚದುರಂಗ' ಎಂಬ ನಾಮಧೇಯದ ಮೂಲಕವೇ ಜನಜನಿತರಾದವರು. ಕನ್ನಡ ಸಾಹಿತ್ಯ ಜಗತ್ತಿನ ವಿಭಿನ್ನ ಕಾಲಘಟ್ಟಗಳಿಂದ ನವೋದಯ, ಪ್ರಗತಿಶೀಲ, ನವ್ಯ ದಲಿತ–ಬಂಡಾಯ ಹೀಗೆ ಎಲ್ಲದರಲ್ಲೂ ಬರವಣಿಗೆಯ ಕೂಸನ್ನು ಲಾಲಿಸಿ ಪಾಲಿಸಿ ಆದಕ್ಕೆ ವಿಶಿಷ್ಟತೆಯ ಆಕಾರವನ್ನು ಕೊಟ್ಟವರು ಚದುರಂಗರು.

ಚದುರಂಗರು ಜನಿಸಿದ್ದು ೧೯೧೬ ರ ಜನವರಿ ಒಂದರಂದು. ಮೈಸೂರು ಜಿಲ್ಲೆಯ ಹುಣಸೂರು ತಾಲ್ಲೂಕಿನ ಕಲ್ಲಹಳ್ಳಿಯಲ್ಲಿ. ಮುದ್ದುರಾಜೇ ಅರಸರು ಚದುರಂಗರ ತಂದೆ. ಅರಸು ಮನೆತನಕ್ಕೆ ಸೇರಿದ ದೇವರಾಜೇ ಅರಸರ ಮಗಳು ಮರುದೇವಮ್ಮಣ್ಣಿ ಚದುರಂಗರ ತಾಯಿ ಇವರಿಬ್ಬರಿಗೆ ಹದಿಮೂರು ಮಂದಿ ಮಕ್ಕಳು ಜನಿಸಿದರಾದರೂ ಉಳಿದು ಬದುಕಿದ್ದು ನಾಲ್ಕು ಮಕ್ಕಳು ಮಾತ್ರ. ಆ ನಾಲ್ವರಲ್ಲಿ ಕೊನೆಯವರೇ ಚದುರಂಗರು.

ಚದುರಂಗರ ಪೂರ್ವಿಕರ ಇತಿಹಾಸವನ್ನು ಗಮನಿಸುವುದಾದರೆ ಪ್ರತಿಷ್ಠಿತ ಅರಸು ಮನೆತನಕ್ಕೆ ಸೇರಿದ ದೇವರಾಜೇ ಅರಸರ ಮಗಳು ಮರುದೇವಮ್ಮಣ್ಣಿ ಇವರ ತಾಯಿಯಾದರೂ ಸದಾ ಸರಳ ವ್ಯಕ್ತಿ ಎನಿಸಿಕೊಂಡವರು. ತಮ್ಮ ಬದುಕಿನುದ್ದಕ್ಕೂ ಕಂಡ ಸಿಹಿ–ಕಹಿ ತಮ್ಮ ಬಾಳೆಂಬ ವೈವಿಧ್ಯಮಯ ಕೋಲಾಜ್‌ನನ್ನು ಸಾಹಿತ್ಯದಲ್ಲಿ ಅರಳಿಸಿ ಸಾಹಿತ್ಯಕ್ಕೆ ಅನರ್ಘ್ಯಮೆರುಗನ್ನು ನೀಡಿದವರು ಹೆಮ್ಮೆಯ ಪ್ರೀತಿಯ ಚದುರಂಗರು.

ಚದುರಂಗರ ಕಾವ್ಯ ನಾಮಕ್ಕೆ ಸಂಬಂಧಿಸಿದಂತೆ ಒಂದು ಹಿನ್ನೆಲೆ ಇದೆ. ಮೈಸೂರು ಮಹಾರಾಜರಾದ ಮುಮ್ಮಡಿ ಕೃಷ್ಣರಾಜ ಒಡೆಯರ ಬಳಿ ಚದುರಂಗ ಆಟವನ್ನು ಚದುರಂಗರು ಆಡುತ್ತಿದ್ದರು. ಈ ಕಾರಣದಿಂದ 'ಚದುರಂಗ ಮನೆತನ'ವೆಂದು ಖ್ಯಾತಿ ಪಡೆದರು. ಈ ಖ್ಯಾತಿ ಸಾಹಿತ್ಯ ಲೋಕದಲ್ಲಿ ಅಪಾರವಾದ ಹೆಸರನ್ನು ಮಾಡಿತು.

ಚದುರಂಗರು ತಮ್ಮ ಬಾಲ್ಯವನ್ನು ಕಲ್ಲಹಳ್ಳಿಯ ಪರಿಸರದಲ್ಲಿಯೇ ಕಳೆದರು ಮನೋಜ್ಞನವಾಗಿದ್ದ ಹಚ್ಚ ಹಸಿರಿನ ದಟ್ಟಕಾಡುಗಳ ನಡುವಿನ ನಿಸರ್ಗಕ್ಕೆ ಹತ್ತಿರವಾದ ಬದುಕು ಅವರದಾಗಿತ್ತು. ಪ್ರಕೃತಿಯ ಸೌಂದರ್ಯನುಭವಗಳು, ಹಳ್ಳಿಯ ಬದುಕಿನ ಚಿತ್ರಣ ಇವೆರಡು ತನ್ನ ಸಾಹಿತ್ಯವನ್ನು ಶ್ರೀಮಂತಗೊಳಿಸಲು ಕಲ್ಲಹಳ್ಳಿಯ ಪರಿಸರ ಕೂಡ ಕಾರಣ ಎಂದರೆ ಅತಿಶಯೋಕ್ತಿ ಎನಿಸಲಾರದು. ಈ ಅನುಭವಗಳ 'ಸರ್ವಮಂಗಳಾ', 'ವೈಶಾಖ', 'ಹೆಜ್ಜಾಲ' ಹೀಗೆ ಅವರ ಹಲವು ಕಾದಂಬರಿಗಳಲ್ಲಿ ಅಕ್ಷರರೂಪ ತಳೆದಿದೆ.

ಚದುರಂಗರು ತಮ್ಮ ವಿದ್ಯಾಭ್ಯಾಸವನ್ನು ಕಲ್ಲಹಳ್ಳಿಯಲ್ಲಿಯೇ ಆರಂಭಿಸಿ ನಂತರದ ಶಿಕ್ಷಣವನ್ನು ಮೈಸೂರಿನಲ್ಲಿ ಪಡೆಯುತ್ತಾರೆ. ಆ ದಿನಗಳಲ್ಲಿಯೇ ಅರಸು ಮನೆತನದವರಿಗಾಗಿಯೇ ಮೀಸಲಿದ್ದ 'ರಾಯಲ್ ಸ್ಕೂಲಿನಲ್ಲಿ' ಓದುವ ಅವಕಾಶವು ಅವರನ್ನಾಗಿಸುತ್ತಾ ಬರುತ್ತದೆ. ಆದರೆ ಅಲ್ಲಿನ ಶ್ರೀಮಂತಿಕೆ ದೌಲು, ಜಾಪಚಾರಿಕ ಯಾಂತ್ರಿಕಮಯ ನಡೆನುಡಿಗಳು ಅವರನ್ನು ಅದರಿಂದ ವಿಮುಖರನ್ನಾಗಿ ಮಾಡಿ ಬಿಡುತ್ತದೆ. ಅಲ್ಲಿಂದ ಅವರು ಅರಸು ಬೋರ್ಡಿಂಗ್ ಶಾಲೆಗೆ ಬಂದು ಅಲ್ಲಿನ ಉಪಾಧ್ಯಾಯರಾದ ನಾಟಕಕಾರರೆಂದೇ ಪ್ರಸಿದ್ಧಿ ಹೊಂದಿದ್ದ ನಂಜನಗೂಡು ಶ್ರೀಕಂಠಶಾಸ್ತ್ರಿಗಳ ಪರಿಚಯ ಪ್ರಭಾವ ಚದುರಂಗರನ್ನು ನಾಟಕ ಬರೆಯಲು ಪ್ರೇರೇಪಿಸುತ್ತದೆ. ಹಾಗೂ ಅದರಲ್ಲಿ ಯಶಸ್ವಿಯನ್ನು ಗಳಿಸಿ ಮೆಚ್ಚುಗೆಕೂಡ ಪಡೆಯುತ್ತಾರೆ.

ಮಹಾರಾಜ ಕಾಲೇಜಿನಲ್ಲಿ ಹೈಸ್ಕೂಲ್ ಓದುತ್ತಿದ್ದ ಸಂದರ್ಭದಲೇ ಗಾಂಧೀಜಿಯ ತತ್ವಕ್ಕೆ ಮಾರುಹೋಗಿ, ಸಾಹಿತ್ಯ ವಿಷಯದೆಡೆಗೆ ಹೊರಳಿಸಿದ ಇವರು, ಮಾಸ್ತಿ, ಗೊರೂರರಂತಹ ಸಾಹಿತ್ಯ ಕಾನನದ ಮಹಾವೃಕ್ಷಗಳಾದಂತಹ, ಅ,ನ,ಕೃ, ತ,ರಾ,ಸು. ಅಂತೆಯೇ ಪಾಶ್ಚಾತ್ಯ ಲೇಖಕರಾದ ಟಾಲ್‌ಸ್ಟಾಯ್, ಗಾರ್ಕಿ, ದಾಸ್ಕೊವೆ, ಫ್ರೆಂಚ್ ಲೇಖಕರಾದ ಬಾಲ್ಜಾಕ್ ಇವರೆಲ್ಲರ ಪ್ರಭಾವವು ಚದುರಂಗರ ಸಾಹಿತ್ಯ ಕೃಷಿ ಭದ್ರ ನೆಲೆಗಟ್ಟನ್ನು ಕಟ್ಟಿಕೊಟ್ಟಿತು. ಬಿ.ಎಂ.ಶ್ರೀಕಂಠಯ್ಯವರಿಂದಲೂ ಕೂಡ ಶ್ಲಾಖನೆಗೆ ಒಳಗಾಗಿದ್ದ ಚದುರಂಗರಿಗೆ ಗದ್ಯ ಕ್ಷೇತ್ರದಲ್ಲಿಯೇ ಮುಂದುವರೆಯುವ ಸೂಚನೆಯನ್ನು ಕೊಟ್ಟು ಮಾರ್ಗದರ್ಶಿಯ ಪಾತ್ರವನ್ನು ನಿರ್ವಹಿಸಿದ್ದಾರೆ ಎಂದರೆ ಹೆಚ್ಚಾಗಲಾರದು.

ಕಾಲೇಜಿನ ಜೀವನದಲ್ಲೇ ತಮ್ಮನ್ನು ತಾವು ಕಮ್ಯುನಿಷ್ಟರ ತತ್ವಕ್ಕೆ ಒಳಪಡಿಸಿಕೊಂಡು ಅಖಿಲ ಮೈಸೂರು ವಿದ್ಯಾರ್ಥಿ ಫೇಡರೇಶನ್ನಿನ ಕಾರ್ಯದರ್ಶಿಯಾಗಿ ನಿಧಿಸಂಗ್ರಹ ಕಾರ್ಯಕ್ಕೆ ಮುಂದಾಳತ್ವವನ್ನು ವಹಿಸಿಕೊಂಡಿದ್ದು ಆ ವರ್ಷದಲ್ಲಿ ಅನಾರೋಗ್ಯದ ಕಾರಣ ಪರೀಕ್ಷೆಗೂ ಕೂಡ ಗೈರುಹಾಜರಾಗಿ ನಂತರದಲ್ಲಿ ಮೈಸೂರು ಕಾಲೇಜಿನಲ್ಲಿ ಬಿ.ಎ ಪದವಿಯನ್ನು ಪಡೆದರು. ನಂತರ ಪುಣೆಯಲ್ಲಿ ಕಾನೂನು ಮತ್ತು ಎಂ.ಎ ಪರೀಕ್ಷೆಯನ್ನು ಪಾಸು ಮಾಡಿದರು. ಇದೇ ವರ್ಷದಲ್ಲಿ ಚದುರಂಗರವರಿಗೆ ಮನೆಯಲ್ಲಿ ಮದುವೆಯ ಪ್ರಸ್ತಾಪ ಮಾಡುತ್ತಾರೆ. ಆದರೆ ಅದಾಗಲೇ ಸಂಬಂಧಿಕ ವರ್ಗದಲ್ಲೆ ಇದ್ದ ದೊಡ್ಡವಣ್ಣಿಯವರಲ್ಲಿ ಪ್ರೇಮಾಂಕುರಗೊಂಡು ಮನೆಯವರ ಇಚ್ಚೆಗೆ ವಿರುದ್ದವಾಗಿ ಮನೆಯಲ್ಲಿ ಗೊತ್ತು ಮಾಡಿದ ಹೆಣ್ಣನ್ನು ನಿರಾಕರಿಸಿ ಪ್ರೀತಿಸಿದವಳನ್ನು ಕೈಹಿಡಿದು, ವಿವಾಹವು ತರಬಹುದಾಗಿದ್ದ ಶ್ರೀಮಂತಿಕೆಗೆ ತೀಲಾಂಜಲಿ ಹೇಳಿ ತನ್ನ ನೆಚ್ಚಿಬಂದ ಗೆಳತಿಯ ಕೈಹಿಡಿದು ಒಲವೇ ಜೀವನ ಸಾಕ್ಷಾತ್ಕಾರ ವಾಗಿಸಿಕೊಂಡು ಕಲ್ಲು-ಮುಳ್ಳು, ನೋವು-ನಲಿವು ಎಲ್ಲವನ್ನು ಮೀರಿ ಬೆಳೆಯುವ ಮೂಲ ಸ್ಫೂರ್ತಿಯ ಸೆಲೆಯಾಗಿ ಮಾಡಿಕೊಂಡರು ತಮ್ಮ ಬದುಕನ್ನು.

ಶ್ರೀಮಂತ ಹಾಗು ಪ್ರತಿಷ್ಠಿತ ಕುಟುಂಬದಲ್ಲಿ ಹುಟ್ಟಿದ್ದಾದರೂ ತಮ್ಮ ಬದುಕಿನ ನಾವೆಯನ್ನು ತೇಲಿಸಿದ್ದು ಅದಕ್ಕೆ ವಿರುದ್ಧವಾದ ದಡದೆಡೆಗೆ, ಎಂತಹ ಕಠಿಣ ಪರಿಸ್ಥಿತಿಯಲ್ಲಿಯು ಒಂದೇ ಕಡೆ ಕೂತು ತಿನ್ನಲಿಕ್ಕೆ ಸಾಕಾಗುವಂತಹ ಉದ್ಯೋಗಕ್ಕೆ ಹಪಹಪಿಸದೆ, ತಾವು ನೆಚ್ಚಿಕೊಂಡ ಆಲೋಚನೆ, ಆದರ್ಶದ ಹಾದಿಯ ಸವೆಸಿದವರು ಚದುರಂಗರು.

ಕಮ್ಯುನಿಸಂ ತತ್ವಗಳಿಂದ ಸಾಕಷ್ಟು ಪ್ರಭಾವಿತರಾಗಿದ್ದ ಅವರು ಗಾಂಧೀಯ ವಿಚಾರಗಳಿಂದ ಪ್ರೇರೆಪಿತರಾಗಿ ಗಾಂಧೀಯ ಹೇಳಿಕೆಯಂತೆ 'ಕೃಷಿ ದೇಶದ ಬೆನ್ನೆಲುಬು' ಎಂಬುದನ್ನು ಅಕ್ಷರಶ: ಪಾಲಿಸಿ ೧೯೫೨ರ ಹೊತ್ತಿಗೆ ತಾವು ಆಡಿ ಬೆಳೆದಂತಹ ಕಲ್ಲಹಳ್ಳಿಗೆ ಹಿಂತಿರುಗಿ ಅಲ್ಲಿ ವ್ಯವಸಾಯವನ್ನು ಆರಂಭಿಸುತ್ತಾರೆ. ಬರವಣಿಗೆಯ ಮೂಲಕ ಬಂದ ಗೌರವ ಧನವನ್ನು ಕೃಷಿಗೆ ಬಳಸಿಕೊಳ್ಳುತ್ತಾರೆ. ಅಂತಹ ದುರ್ಗಮ ಪರಿಸ್ಥಿತಿಯಲೂ ಸಹ ಚದುರಂಗರ ಜೀವನ ಪ್ರೀತಿ ನಂಬಿಕೆ ಅದಮ್ಯವಾಗಿತ್ತು.

ಅಂದಿನ ಸಾಮಾಜಿಕ ಪಿಡುಗಾಗಿದ್ದ ಅಸ್ಪಶ್ಯತೆ, ಮೇಲು-ಕೀಳು, ಹಳೆಯ ಕಂದಾಚಾರವನ್ನು ಕ್ರಾಂತಿಯ ಕಿಡಿಯೆಬ್ಬಿಸಿ ಸಾಮಾಜಿಕ ನ್ಯಾಯಕ್ಕಾಗಿ ತುಡಿದ ಮಾನವತಾವಾದಿ, ತಾವು ಕೃಷಿಗಾಗಿ ತೋಡಿಸಿದ ನೀರು ತೆಗೆದುಕೊಳ್ಳಲು ಊರಿನ ಜನರಿಗೆ ಅವಕಾಶವಿತ್ತು. ಊರವರ ವಿರೋಧ ಕಟ್ಟಿಕೊಳ್ಳುತ್ತಾರೆ, ಆದರೆ ಅದೆಲ್ಲವನ್ನು ಮೀರಿ ಬೆಳೆದು ತನ್ನದೆ ವಿಚಾರ ಧಾರೆಗಳ ಹಾದಿಯನ್ನು ಅರಸಿ ಸ್ವಾತಂತ್ರ ಬದುಕನ್ನು ಆರಿಸಿ ಸಂಘರ್ಷದ 'ಊಯ್ಯಾಲೆ'ಯಲ್ಲೆ, ವೈಶಾಖ, ಬಿಸಿ ಅನುಭವಿಸಿದರು. ಆದರೂ ಪ್ರೀತಿಯ 'ಛಾಯೆ'ಯೇ ಅವರ 'ಸ್ವಪ್ನಸುಂದರಿ'ಯಾಗಿ,' ಅವರ ಬದುಕಿನ ಉತ್ಸಾಹವನ್ನು ಚಿಮ್ಮುವಂತೆ ಮಾಡುತ್ತದೆ.

ಕಾಲೇಜು ದಿನಗಳಿಂದಲೇ ಸಾಹಿತ್ಯಾಭಿರುಚಿಯನ್ನು ಬೆಳೆಸಿಕೊಂಡು ಸ್ವಾತಂತ್ರ್ಯ ಚಳುವಳಿ, ಗಾಂಧೀಯ ವಿಚಾರ, ಸಮಾಜವಾದ ಇದೆಲ್ಲ ಅವರನ್ನು ಮಹತ್ತರವಾಗಿ ಸೆಳೆದುಕೊಂಡಿತು. ತಮ್ಮನ್ನು ತಾವು ವಿವಿಧ ಸಾಹಿತ್ಯರಂಗದಲ್ಲಿ ಗುರುತಿಸಿಕೊಳ್ಳುವುದರ ಮೂಲಕ ಚದುರಂಗರು ತಮ್ಮನ್ನು ಸಮಾಜ ಮುಖಿಯನ್ನಾಗಿಸಿ ಕೊಳ್ಳುತ್ತಾರೆ. ಚದುರಂಗರವರು ವೈದ್ಯರಾಗ ಹೊರಟವರು ಅದೇಕೋ ಸಾಹಿತ್ಯಿಕ ಜೀವನದಿಂದ ಆಕರ್ಷಿತರಾಗಿ ಅದರಲ್ಲೆ ನೆಮ್ಮದಿ ಕಂಡುಕೊಂಡಂಥವರು. ಚದುರಂಗರು ಕವಿತೆ ಕವನದಿಂದಲೇ ತನ್ನ ಸಾಹಿತ್ಯ ಕೃಷಿಯನ್ನು ಆರಂಭಿಸಿದ್ದಾದರೂ ಮೂಲತ: ಕಥೆಗಾರರು, ನಾಟಕಕಾರರು ಹಾಗೂ ಕಾದಂಬರಿಕಾರರು, ಇವರು ಸರ್ವಮಂಗಳ, ಉಯ್ಯಾಲೆ, ವೈಶಾಖ, ಹೆಜ್ಜಾಲ, ಇವರ ಕಾದಂಬರಿಗಳು, ಸ್ವಪ್ನಸುಂದರಿ, ಶವದಮನೆ, ಇಣುಕುನೋಟ, ಬಂಗಾರದಹೆಜ್ಜೆ, ಕ್ವಾಟೆ, ಮೃಗಯಾ ಇವರ ಕಥಾಸಂಕಲನಗಳು, ಕುಮಾರರಾಮ, ಇಲಿಬೋನು, ಬಿಂಬ ಇವುಗಳು ನಾಟಕಗಳು, ಹಾಗೂ ನನ್ನ ರಸಿಕ ಗದ್ಯ ಗೀತೆ ಮತ್ತು ಅಲೆಗಳು ಎಂಬ ಕಾವ್ಯವನ್ನು ಕೂಡ ಇವರು ರಚಿಸಿದ್ದಾರೆ.

ವಿದ್ಯಾರ್ಥಿ ಜೀವನದಲ್ಲಿರುವಾಗ ಕಾಲೇಜು ಸಂಚಿಕೆಗಳಿಗಾಗಿ ಬರೆದ ಕವನಗಳ ಮೂಲಕ ಸಾಹಿತ್ಯ ಬರವಣಿಗೆಯನ್ನು ಆರಂಭಿಸಿದ ಇವರು ೧೯೪೪ರ ಸಮಯದಲ್ಲಿ ಸಣ್ಣ ಕಥೆಯನ್ನು ಬರೆಯಲಾರಂಭಿಸಿದರು. "ಹುಚ್ಚು ಯಾರಿಗೆ" "ಛಾಯಾ" ಎಂಬ ಕಥೆ

ಮೊದಲಿಗೆ ಮಾಸಪತ್ರಿಕೆಯಲ್ಲಿ ಪ್ರಕಟವಾಯಿತು. 'ಸ್ವಪ್ನ ಸುಂದರಿ' ಪ್ರಥಮ ಕಥಾಸಂಕಲನಕ್ಕೆ ಅ.ನ.ಕೃ ಮುನ್ನುಡಿ ಬರೆದರು. ಹೀಗೆ ಅವರ ಸಾಹಿತ್ಯ ಸಂಚಲನ ಪ್ರಾರಂಭವಾಯಿತು.

"ಚದುರಂಗರು ಪ್ರಗತಿಶೀಲ ಸಾಹಿತ್ಯ ಚಳುವಳಿಯ ಸಂದರ್ಭದಲ್ಲಿ ಸಾಹಿತ್ಯ ರಚನೆ ಆರಂಭಿಸಿದಾದರೂ ಅನಂತರದ ದಿನಗಳ ಬಂದ ನವ್ಯ, ದಲಿತ ಬಂಡಾಯ, ಸಾಹಿತ್ಯ ಘಟಗಳಿಗೆ ಅವರು ಸ್ಪಂದಿಸದೇ ಉಳಿಯಲಿಲ್ಲ. ಆಯಾ ಕಾಲಘಟ್ಟದ ಪ್ರಭಾವ ಪ್ರೇರಣೆಗಳನ್ನು ಸಮರ್ಥವಾಗಿ ತಮ್ಮ ಸಾಹಿತ್ಯ ಸೃಷ್ಟಿಯಲ್ಲಿ ಬಳಸಿಕೊಂಡರು. ತಮ್ಮ ನಿರಂತರ ಪ್ರಯೋಗಶೀಲತೆಯನ್ನು ಮೆರೆದರು. ಅವರ ಸರ್ವಮಂಗಳಾ ಕಾದಂಬರಿ ೧೯೫೦ರಲ್ಲಿ ಪ್ರಕಟವಾದ ವಸ್ತುಗಳನ್ನು ನಿರ್ವಹಿಸಿರುವ ರೀತಿಯಲ್ಲಿ ಪಾತ್ರಗಳ ಚಿತ್ರಣದಲ್ಲಿ ನವೋದಯದ ಪ್ರಭಾವಗಳನ್ನು ಗುರುತಿಸಬಹುದು. ಮೊದಲ ಕಾದಂಬರಿ ಬರೆದ ಹತ್ತು ವರ್ಷಗಳ ಅನಂತರ ೧೯೬೦ರಲ್ಲಿ ರಚಿತವಾದ 'ಉಯ್ಯಾಲೆ' ಕಾದಂಬರಿ ಪ್ರಗತಿಶೀಲ ಮತ್ತು ನವ್ಯ ಸಾಹಿತ್ಯ ಘಟ್ಟಗಳ ಪ್ರಭಾವಗಳನ್ನು ಅರಗಿಸಿಕೊಂಡು ಒಡಮೂಡಿದೆ. ಇಪ್ಪತ್ತು ವರ್ಷಗಳ ದೀರ್ಘ ಅಂತರದ ಮೇಲೆ ರಚಿತವಾದ 'ವೈಶಾಖ' ನವ್ಯ ಮತ್ತು ದಲಿತ ಬಂಡಾಯದ ಆಶಯಗಳನ್ನು ಸಶಕ್ತವಾಗಿ ಅಭಿವ್ಯಕ್ತಿಸಿದೆ. ಅವರ ಕೊನೆ ಕಾದಂಬರಿ 'ಹೆಜ್ಜಾಲ' ಸಾರ್ವಕಾಲಿಕ ಮಾನವೀಯ ಮೌಲ್ಯಗಳ ಅನ್ವೇಷಣೆಯಲ್ಲಿ ತಮ್ಮನ್ನು ಯಶಸ್ವಿಯಾಗಿ ತೊಡಗಿಸಿಕೊಂಡಿದೆ. ಪ್ರತಿ ಹಂತದಲ್ಲಿಯು ನಮಗೆ ಗೋಚರವಾಗುವುದು ಚದುರಂಗರ ತೆರೆದ ಸ್ಪಂದನದ ಪ್ರಯೋಗಶೀಲತೆ, ಕಲಾತ್ಮಕ ಕಥನದ ಬಗೆಗೆ ಅವರು ವಹಿಸುವ ಕಟ್ಟೆಚ್ಚರ ಮತ್ತು ಅವರು ಸಾಧಿಸಿದ ಸಾಫಲ್ಯ, ಸಣ್ಣ ಕಥೆಗಳು ನಾಟಕಗಳ ಸಂದರ್ಭದಲ್ಲಿಯೂ ನಾವು ಇದೇ ಆಶಯವನ್ನು ಕಾಣುತ್ತೇವ"[೩.೧]

ಚದುರಂಗರು ಕಥೆಗಾರರು, ಕಾದಂಬರಿಕಾರರು ಅಲ್ಲದೆ ನಾಟಕಕಾರರಾಗಿಯೂ ಕೂಡ ಪ್ರಯೋಗವನ್ನು ಮಾಡಿದವರು. ಅವರ ಮೊದಲ ನಾಟಕ 'ಕುಮಾರರಾಮ' ಇದು ಐತಿಹಾಸಿಕ ನಾಟಕವಾದರೆ, 'ಇಲಿಬೋನು' ಸಾಂಪ್ರದಾಯಕ ಧೋರಣೆಗೆ ಮತ್ತು ಮಣ್ಣಿನ ಅನುಭವಗಳನ್ನು ಒಳಗೊಂಡಿದೆ. ಅಸಂಗತ ನಾಟಕ ಪರಂಪರೆಗೆ ಚದುರಂಗರು ತಮ್ಮನ್ನು

---

೧)ಚದುರಂಗ–ಡಾ.ಎಂ.ಎಸ್.ವೇದ, ಪುಟ ಸಂಖ್ಯೆ–೨೧

ತೊಡಗಿಸಿಕೊಂಡರು. 'ಬಿಂಬ' ಉತ್ತರ ರಾಮಾಯಣ ಕಥೆಯ ವಸ್ತುವನ್ನು ವಿಭಿನ್ನ ನೆಲೆಯಲ್ಲಿ ನಿರ್ವಹಿಸುತ್ತದೆ. ಹೀಗೆ ಇವರ ಪ್ರಯೋಗಶೀಲತೆ ಓರ್ವ ನಾಟಕಕಾರನಾಗಿ ಮೆರೆಯುವಲ್ಲಿ ಮಹತ್ವದ ಪಾತ್ರವಹಿಸುತ್ತಾರೆ. ಜೊತೆಗೆ ಕವಿತೆಯ ರಚನೆಯನ್ನು ಕೂಡ ತಮ್ಮ ಒಡಮೂಡಿಸಿಕೊಳ್ಳುತ್ತಾರೆ. ಅವು 'ಆಹ್ವಾನ್' ಸಾನೆಟ್ ರೂಪದ ಪ್ರೇಮ ಕವಿತೆ, 'ಮನದ ಬಯಲು' ಮುಂತಾದವುಗಳನ್ನು ಪ್ರಕಟಿಸಿದ್ದಾರೆ. ಹೀಗೆ ಇವರ ಕೃತಿಗಳು ಒಂದಕ್ಕಿಂತ ಒಂದು ಭಿನ್ನವಾಗಿರುದು ಮತ್ತು ಅದು ಎಲ್ಲಾ ಕಾಲಕ್ಕೂ ಶಾಶ್ವತ ಮೈಲುಗಲ್ಲನ್ನು ಪಡೆದುಕೊಂಡಿದೆ

ಚಲನಚಿತ್ರ ಕ್ಷೇತ್ರದಲ್ಲಿಯೂ ಚದುರಂಗರು ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಪುಣೆಯಲ್ಲಿ ಓದುತ್ತಿದ್ದ ಸಂದರ್ಭದಲ್ಲಿ 'ರಾಜ್ ಅರ್ಸ' ಎಂಬ ಹೆಸರಿನ ಪತ್ರಿಕೆಗಳಿಗೆ ಹಿಂದಿ ಚಲನಚಿತ್ರಗಳನ್ನು ಬರೆಯುತ್ತಿದ್ದ ಅವರು ಮುಂದೆ ಈ ಪ್ರಯತ್ನವೂ ಅವರನ್ನೂ ಚಲನಚಿತ್ರ ನಿರ್ದೇಶಕರಾಗುವ ಮಟ್ಟಕ್ಕೆ ಕೊಂಡೊಯ್ಯುತ್ತದೆ. ೧೯೪೮ರಲ್ಲಿ ಮೈಸೂರಿನಲ್ಲಿ ತಯಾರಾದ 'ಭಕ್ತಿರಾಮದಾಸ' ಕನ್ನಡ ಚಲನಚಿತ್ರಕ್ಕೆ ಸಾಹಿತ್ಯ ಒದಗಿಸಿದ್ದಾರೆ. ಅಷ್ಟೆ ಅಲ್ಲದೆ ತಮ್ಮದೆ ಕಾದಂಬರಿ 'ಸರ್ವಮಂಗಳಾ'ವನ್ನು ೧೯೬೮ರಲ್ಲಿ ನಿರ್ದೇಶಿಸಿ ಕನ್ನಡದ ಪ್ರಪ್ರಥಮ ಸಾಹಿತಿ ಚಿತ್ರನಿರ್ದೇಶಕರೆಂಬ ಹೆಸರುಗಳಿಸಿದ್ದಾರೆ. ಉಯ್ಯಾಲೆಯೂ ಕೂಡ ಚಲನಚಿತ್ರವಾಗಿ ಕನ್ನಡ ಚಲನಚಿತ್ರ ಕ್ಷೇತ್ರದಲ್ಲಿ ಚದುರಂಗರ ಹೆಸರನ್ನು ಗಟ್ಟಿಗೊಳಿಸಿದೆ.

"ತಮ್ಮ ಕಾದಂಬರಿಗಳೇ ಅಲ್ಲದೆ ಕರ್ನಾಟಕ ರಾಜ್ಯವಾರ್ತಾ ಇಲಾಖೆಗಳಿಗೆ ರಾಷ್ಟ್ರಕವಿ ಕೆ.ವಿ.ಪುಟ್ಟಪ್ಪ, ಕರ್ನಾಟಕ ಮತ್ತು ವೆಂಕಟಲಕ್ಷ್ಮಮ್ಮ ಎಂಬ ಮೂರು ಸಾಕ್ಷ್ಯಚಿತ್ರಗಳನ್ನು ಚದುರಂಗ ತಯಾರಿಸಿಕೊಟ್ಟಿದ್ದಾರೆ. ಕುವೆಂಪು ಅವರನ್ನು ಕುರಿತಾದ ಅವರ ಸಾಕ್ಷ್ಯಚಿತ್ರ 'ಎ' ಪೊಯಮ್ ಇನ್ ಸೆಲ್ಯೂಲಾಯ್ಡ್" ಎಂಬ ಹೊಗಳಿಕೆ ಪಡೆದುಕೊಂಡಿರುವುದು ಈ ಮಾಧ್ಯಮದಲ್ಲಿ ಚದುರಂಗರಿಗೆ ಇದ್ದ ಕಲಾವಂತಿಕೆಯ ಮೇಲಿನ ಹಿಡಿತವನ್ನು ಪ್ರತಿಬಿಂಬಿಸುತ್ತದೆ".[೧]

---

೧)ಚದುರಂಗ ಸಾಹಿತ್ಯ-ಒಂದು ಅಧ್ಯಯನ-ಡಾ.ಎಸ್.ಸುಂದರಮ್ಮ,ಪು.ಸಂ-೪೨೭

ಸತ್ವಶಾಲಿ, ಬಹುಮುಖ ಪ್ರತಿಭೆಯುಳ್ಳ ಚದುರಂಗರಿಗೆ ಸಂದ ಸನ್ಮಾನ, ಪ್ರಶಸ್ತಿಗಳು, ಗೌರವಗಳು ಸಾಹಿತ್ಯ ಕ್ಷೇತ್ರದಲ್ಲಿ ಸಂಚಲನವನ್ನು ಉಂಟುಮಾಡುವಂತವು. ಈ ಪ್ರಶಸ್ತಿಗಳ ಹಿಂದೆ ಅಪಾರ ಪರಿಶ್ರಮ ಕೂಡ ಅಡಗಿದೆ. ೧೯೭೮ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ೧೯೮೨ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ೧೯೮೭ರಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ೧೯೯೩ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದಿಂದ ಗೌರವ ಡಾಕ್ಟರೇಟ್ ಪದವಿ, ೧೯೯೪ರಲ್ಲಿ, 'ಮೃಗಯಾ' ಕಥಾ ಸಂಕಲನಕ್ಕೆ, ೧೯೯೪ರ ಅತ್ಯುತ್ತಮ ಕಥಾ ಸಂಕಲನ ಪ್ರಶಸ್ತಿ, ೧೯೯೪ರಲ್ಲಿ ೬೩ನೇಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮೇಳನದ ಅಧ್ಯಕ್ಷಸ್ಥಾನ ಹೀಗೆ ಹಲವಾರು ಪ್ರಶಸ್ತಿಗಳನ್ನು ತಮ್ಮದಾಗಿಸಿಕೊಂಡಿದ್ದಾರೆ.

ಒಟ್ಟಾರೆಯಾಗಿ ಚದುರಂಗರ ಬದುಕು-ಬರಹ ಅದ್ಭುತವಾದದ್ದು. ಅವರ ಬದುಕು ಸಾಧನೆಗಳಂತೆಯೇ ವ್ಯಕ್ತಿತ್ವವೂ ಉನ್ನತವಾದದ್ದು. ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಅನನ್ಯ ಬಹಗಾರರು, ವಿಮರ್ಶಕರಾಗಿ ಓದುಗರನ್ನು ಬೆರಗುಗೊಳಿಸುವ ನಿರಂತರ ಪ್ರಕ್ರಿಯೆಯೂ ಅವರ ಸಾಹಿತ್ಯದಲ್ಲಿ ಸದ ಹಸನಾಗಿರುತ್ತದೆ. ಬತ್ತದ ಅನನ್ಯತೆ ಅವರ ಸಾಹಿತ್ಯದ ಮೂಲಗುಣ. ಸೃಜನಶೀಲ ಬರಹಗಾರರಾಗಿ ಅವರ ವ್ಯಕ್ತಿತ್ವವೂ ಕೂಡ ಸ್ವಾಭಿಮಾನ, ಸೌಜನ್ಯ, ಸ್ನೇಹ, ಪ್ರೀತಿ, ವಿಶ್ವಾಸ ಕಲಾವಂತಿಕೆಯಿಂದ ಶಾಶ್ವತ ಮೈಲಿಗಲ್ಲು ಅವರದಾಗಿದೆ.

ಅಧ್ಯಾಯ–೩

ಕಾದಂಬರಿಯಲ್ಲಿ ಕಂಡು ಬರುವ ಪಾತ್ರ ಚಿತ್ರಣ

ಅಧ್ಯಾಯ – ೩

ಕಾದಂಬರಿಯಲ್ಲಿ ಕಂಡುಬರುವ ಪಾತ್ರ ಚಿತ್ರಣ

ವೈಶಾಖ ಕಾದಂಬರಿಯಲ್ಲಿ ಕಂಡು ಬರುವ ಪಾತ್ರಸೃಷ್ಟಿಯಂತೂ ವೈವಿದ್ಯ ಪೂರ್ಣವಾಗಿದ್ದು ವಸ್ತು ನಿಷ್ಠತೆಯಿಂದ ಕೂಡಿದೆ. ಈ ಕಾದಂಬರಿಯ ಪಾತ್ರದ ಕೇಂದ್ರ ದರುಮನಹಳ್ಳಿ. 'ದರುಮನಹಳ್ಳಿ' ಎಂದು ಹೆಸರಾದ ಇಲ್ಲಿ ಹಲವಾರು ಪಾತ್ರಗಳು ಜಾತಿ, ಸಂಪ್ರದಾಯ, ಆಚಾರ, ಧರ್ಮ-ಕರ್ಮ ಒಳಿತು ಕೆಡುಕು, ನ್ಯಾಯ-ಅನ್ಯಾಯ, ಧರ್ಮ-ಅಧರ್ಮ ಹೀಗೆ ಎಲ್ಲದರ ಮಿಶ್ರಣದಲ್ಲಿ ಮನುಷ್ಯನ ಅಸ್ತಿತ್ವದಲ್ಲಿರುವ ಎಲ್ಲ ಮುಖಗಳನ್ನು ಅತ್ಯಂತ ವಾಸ್ತವ ನೆಲೆಯಲ್ಲಿ ತೆರೆದಿಡುವ ಲೌಕಿಕ ಪ್ರಪಂಚದ ಸುತ್ತ ವಿಚಿತ್ರ ಸಂಬಂಧಗಳು ಹೆಣೆದುಕೊಳ್ಳುತ್ತದೆ. ಪ್ರತಿ ಪಾತ್ರವೂ ಸಂದರ್ಭ ಸನ್ನಿವೇಶಕ್ಕನುಗುವಾಗಿ ಅದರದೇ ಆದ ವ್ಯಕ್ತಿತ್ವವನ್ನು ರೂಪಿಸಿಕೊಂಡಿದೆ. ಭಿನ್ನ ವರ್ಗಕ್ಕೆ ಸೇರಿದ ಪಾತ್ರಗಳ ಭಿನ್ನ ಜೀವನ ಶೈಲಿಯನ್ನು ಒಳಗೊಂಡಿದೆ.

ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಬ್ರಾಹ್ಮಣ, ಬ್ರಾಹ್ಮಣೇತರ ಮತ್ತು ದಲಿತವರ್ಗಕ್ಕೆ ಸೇರಿದ ಪಾತ್ರಗಳು ಒಂದಕ್ಕೊಂದು ಸರಪಳಿಯ ಹಾಗೆ ಸಂಬಂಧಗಳು ಹೆಣೆದುಕೊಂಡಿರುವುದನ್ನು ಕಾಣಬಹುದು. ಕೇಂದ್ರ ಪಾತ್ರವಾಗಿ ಕಂಡುಬರುವ ಬ್ರಾಹ್ಮಣ ವರ್ಗಕ್ಕೆ ಸೇರಿದ ರುಕ್ಮಿಣಿಯ ಪಾತ್ರ ಮತ್ತು ದಲಿತ ವರ್ಗಕ್ಕೆ ಸೇರಿದ ಲಕ್ಕನ ಪಾತ್ರ ವಿಶಿಷ್ಟವೆನಿಸುತ್ತದೆ. ಇವರ ಸುತ್ತವೇ ಇಡೀ ಕಾದಂಬರಿಯ ಭಿನ್ನ ನೆಲೆಗಳನ್ನು ಸಾಮಾಜಿಕ ಚಿತ್ರಣವನ್ನು ಪಡೆದುಕೊಳ್ಳುತ್ತದೆ. ಇದಷ್ಟೇ ಅಲ್ಲದೆ ಇದರ ಜೊತೆಗೆ ಇನ್ನೂ ಹತ್ತು ಹಲವು ಪಾತ್ರಗಳೂ ಬೆಸೆದುಕೊಂಡು ಈ ಕಾದಂಬರಿ ರೂಪುಗೊಂಡಿದೆ. ಕ್ರಿಯೆ ಪ್ರಕ್ರಿಯೆಯ ಮೂಲಕ ಪ್ರತಿಪಾತ್ರವೂ ಅದರದೇ ಆದ ಮಹತ್ವ ಮತ್ತು ವಿಭಿನ್ನ ರೂಪವನ್ನು ಪಡೆದುಕೊಂಡಿದೆ.

ದರುಮನಹಳ್ಳಿಯನ್ನು ಮುಖ್ಯ ಕೇಂದ್ರವನ್ನಾಗಿಟ್ಟುಕೊಂಡ ಕಾದಂಬರಿಯ ಪಾತ್ರಗಳು ಹಲವಾರು ಎಳೆಗಳೊಡನೆ ತನ್ನ ಪ್ರಪಂಚವನ್ನು ಅದರ ಆ ಎಲ್ಲಾ ಮುಖಗಳ ಜೊತೆಗೆ

ಅಭಿವ್ಯಕಿಸುತ್ತದೆ. ಹಾಗೆ ಅಭಿವ್ಯಕ್ತಿಸುವಲ್ಲಿ ಕಾದಂಬರಿ 'ಕ್ರಿಯೆ'ಯನ್ನು ಪ್ರಧಾನವಾಗಿ ಆಶ್ರಯಿಸುತ್ತದೆ. ಕ್ರಿಯೆಗಳನ್ನು ಸಂವಹನಗೊಳಿಸುವ ಮಾಧ್ಯಮಗಳಾಗಿ, ಕ್ರಿಯೆಯೊಳಗೆ ಪಾತ್ರಗಳು ಸ್ಥಾಪಿತಗೊಳ್ಳುತ್ತದೆ. ಕಾದಂಬರಿಯಲ್ಲೂ ನಡೆಯುವ ಘಟನೆಗಳಿಗೆ ಕ್ರಿಯೆಗಳಿಗೆ ಪಾತ್ರಗಳೂ ಮುಖ್ಯ ಕಾರಣಗಳಾಗಿರುತ್ತವೆ.

ಪ್ರತಿ ಪಾತ್ರಗಳೂ ಭೂತ-ವರ್ತಮಾನ ಮತ್ತು ಭವಿಷ್ಯತ್‌ಕಾಲಕ್ಕೆ ಸ್ಪಂದಿಸುವಲ್ಲಿ ಕ್ರಿಯಾ ಶಿಖರಗಳಾಗಿರುತ್ತದೆ. ಭೂತಕಾಲದಲ್ಲಿ ಪಲ್ಲಟಗೊಳ್ಳುವುದು, ವರ್ತಮಾನ ಮತ್ತು ಭವಿಷ್ಯತ್ ಕಾಲದಲ್ಲಿ ಸೋಲು, ಹೊಸ ಜಗತ್ತಿನ ಮೂಲಕ ಆದರ್ಶ ಬದುಕಿನ ಹುಡುಕಾಟ ಮುಂತಾದ ವಿಚಾರಗಳು ಪಾತ್ರಗಳಲ್ಲಿ ನಿರೂಪಿತವಾಗಿವೆ.

ಪ್ರಸ್ತುತ ದರುಮನಹಳ್ಳಿ ಪಾತ್ರಗಳಲ್ಲಿ ಅಧರ್ಮ-ಅಸತ್ಯ, ಅಮಾನವೀಯತೆಗಳು ಸಾಮಾಜಿಕವಾಗಿ, ಧಾರ್ಮಿಕವಾಗಿ, ಆರ್ಥಿಕವಾಗಿ, ಲೈಂಗಿಕವಾಗಿ ಶೋಷಣೆಯ ದುರಂತದ ನೆಲೆ ತಾಂಡವಾಡುತ್ತಿರುವುದನ್ನು ನಾವು ಇಲ್ಲಿ ಗಮನಿಸಬಹುದು. ಗ್ರಾಮೀಣ ಬದುಕಿನ ವಾಸ್ತವ ಚಿತ್ರಣವನ್ನು ಪಾತ್ರಗಳ ಮೂಲಕ ನಿರ್ವಹಿಸಿರುವುದು ಮನೋಜ್ಞವಾಗಿದೆ. ಇಲ್ಲಿನ ಪಾತ್ರಗಳನ್ನು ಬ್ರಾಹ್ಮಣ ಕುಟುಂಬ, ದಲಿತ ಕುಟುಂಬ ಮತ್ತು ಬ್ರಾಹ್ಮಣೇತರರಾದ ಪಂಚಾಯಿತಿ ಮುಖಂಡರ ಸ್ಥಾನಮಾನಗಳ ಚಿತ್ರಣವನ್ನು ಕೊಡಲಾಗುತ್ತದೆ.

ಕೃಷ್ಣಶಾಸ್ತ್ರಿಗಳು: ಬ್ರಾಹ್ಮಣ ಸಮಾಜದ ಪ್ರಮುಖ ವಿಭಿನ್ನ ಸ್ವಭಾವದ ಏಕೈಕ ವ್ಯಕ್ತಿ ಕೃಷ್ಣಶಾಸ್ತ್ರಿ. ಅಪೇಕ್ಷಿತ ಸಂಸ್ಕೃತಿಯ ಪ್ರತಿನಿಧಿಯಂತೆ ಕಾಣುವ ಇವನು ಕೆಲವು ಸಾಂಪ್ರದಾಯಿಕ ಆಚರಣೆಗಳನ್ನು ವಿಮರ್ಶಿಸಿ ಸುಧಾರಣೆಗಾಗಿ ತವಕಿಸುತ್ತಾನೆ. ಬ್ರಾಹ್ಮಣ ಸಮಾಜವನ್ನು ಎದುರುಹಾಕಿಕೊಳ್ಳುತ್ತಾನೆ. ಹೆಂಡತಿಯನ್ನು ಕಳೆದುಕೊಂಡ ಬಳಿಕ ದೇಹವನ್ನು ದಂಡಿಸುವ ಮೂಲಕ ಎಲ್ಲೋ ಒಂದು ಕಡೆ ಮನಸ್ಸನ್ನು ನಿಗ್ರಹಿಸಲಾರದೆ ಸಂಯಮವನ್ನು ಕಳೆದುಕೊಂಡು ಪರೀಕ್ಷೆಗೆ ಗುರಿಯಾಗಿ ಸೋಲನ್ನು ಅನುಭವಿಸುವ ಪಾತ್ರವಾಗಿ ಕಂಡು ಬರುತ್ತಾನೆ.

ಕೃಷ್ಣಶಾಸ್ತ್ರಿಗಳು ಒಂದು ಸಂದರ್ಭದಲ್ಲಿ ಮಗಳ ಸಮಾನವಾಗಿರುವ ಸೊಸೆ ರುಕ್ಮಿಣಿಯನ್ನು ಬಲತ್ಕಾರದಿಂದ ಸಂಭೋಗಿಸುತ್ತಾರೆ. ರುಕ್ಮಿಣಿ ಅವರನ್ನು ಪ್ರತಿಭಟಿಸಲಾಗದೆ

ಸಹಿಸಿಕೊಂಡು ಮೂಕಳಾಗುತ್ತಾಳೆ. ಇದಕ್ಕೆ ಕಾರಣ ಅವರ ಬಗ್ಗೆ ಇದ್ದ ಅಪಾರ ಗೌರವ ಮತ್ತು ಪೂಜ್ಯ ಭಾವನೆ. ಆದರೆ ಕೃಷ್ಣಶಾಸ್ತ್ರಿಗಳಿಗೆ ಮಾತ್ರ ಪಾಪಪ್ರಜ್ಞೆ ಕಾಡುತ್ತಲೇ ಇರುತ್ತದೆ. ಪಂಚಾಯಿತಿಯಲ್ಲಿ ತನ್ನ ತಪ್ಪನ್ನು ಒಪ್ಪಿಕೊಂಡರೂ ಊರ ಮುಖಂಡರೂ ಯಾರು ಇವರ ಮಾತನ್ನು ನಂಬದೇ ಇರುವುದು ವಿಪರ್ಯಾಸವಾಗಿದೆ.

ಇವರಲ್ಲಿ ಮೆಚ್ಚಬೇಕಾದ ಮತ್ತೊಂದು ಗುಣವೆಂದರೆ ತೋಟದಲ್ಲಿ ಕೇಶವಯ್ಯನ ಜೊತೆ ಮಾತನಾಡುತ್ತಿರಬೇಕಾದರೆ ಕೇಶವಯ್ಯನ ಅಕ್ಕನ ಗಂಡ ಸತ್ತಾಗ ಅಕ್ಕನ ತಲೆಬೋಳಿಸಿದ ಘಟನೆಯನ್ನು ಶಾಸ್ತ್ರಿಗಳ ಬಳಿ ಹೇಳುತ್ತಿದ್ದಾಗ, ಶಾಸ್ತ್ರಿಗಳು ಹೀಗೆ ಹೇಳುತ್ತಾರೆ.... "ಎಲ್ಲರ ಮನೇಲು ಇದೇ ಗೋಳು ಈ ಶಾಪದಿಂದ ನಮ್ಮ ಸಮಾಜಕ್ಕೆ ಎಂದು ಮುಕ್ತಿ ದೊರೆಯುತ್ತೋ? ಆ ಪರಮಾತ್ಮನಿಗೆ ಗೊತ್ತು".[೧] ಎಂದು ಒಂದೊಂದು ಮಾತನ್ನು ತಮ್ಮ ಹೃದಯದಲ್ಲಿ ತುಂಬಿದ್ದ ಅನುಕಂಪನದಲ್ಲಿ ಅದ್ದಿ ಅದ್ದಿ ತೆಗೆದಂತೆ ಶಾಸ್ತ್ರಿಗಳು ಆಡಿದ್ದರು. ಅಲ್ಲದೆ ರುಕ್ಮಿಣಿಯ ವಿಚಾರದಲ್ಲೂ ಕೂಡ ಘಟಶ್ರಾದ್ಧ ಮಾಡಿಸದೇ ಬ್ರಾಹ್ಮಣ ಸಮುದಾಯದಲ್ಲಿದ್ದರೂ ಕೆಲ ಗೊಡ್ಡು ಸಂಪ್ರದಾಯಗಳನ್ನು ಮೀರಿ ನಡೆಯಬಯಸಿದವರು. ಊರಿನ ಜನರ ಮುಂದೆ ನಿಷ್ಠೂರವಾಗಿ "ಈ ಎಳೆ ಪ್ರಾಯದ ತರುಣಿಯ ಮಂಡೆ ಬೋಳಿಸಿ ವಿರೂಪಗೊಳಿಸಲು ನಾನೆಂದು ಒಪ್ಪಲಾರೆ" ಎಂಬ ಮಾತಿನಲ್ಲಿ ಮಾನವೀಯತೆಯ ಸೌಂದರ್ಯ ಸಂಬಂಧಿ ಭಾವನೆಗಳನ್ನು ವ್ಯಕ್ತಪಡಿಸುವುದನ್ನು ಕಾಣಬಹುದು.

ಶಾಸ್ತ್ರಿಗಳ ತಂಗಿ ಸುಶೀಲೆಯ ಮಗಳು ಸರಸಿಯನ್ನು ತೋಟಕ್ಕೆ ಕರೆದಕೊಂಡು ಹೋಗುವುದು, ಅವಳೊಡನೆ ಪ್ರೀತಿವಾತ್ಸಲ್ಯದಿಂದ ಯಾವ ಕೊರತೆಯಿಲ್ಲದೆ ನೋಡಿಕೊಳ್ಳುತ್ತಿದ್ದರು. ಸುಶೀಲೆ ರುಕ್ಮಿಣಿಗೆ ಕೊಡುವ ಕಾಟವನ್ನು ಗಮನಿಸಿದ್ದ ಶಾಸ್ತ್ರಿಗಳು ರುಕ್ಮಿಣಿಯನ್ನು ಸ್ವಲ್ಪ ದಿನಗಳ ಕಾಲ ತೌರಿಗೆ ಕಳುಹಿಸುತ್ತಾರೆ. ರುಕ್ಮಿಣಿ ವಾಪಸ್ಸು ಬರುವುದು ಸುಶೀಲೆ ಸಾವಿನ ನಂತರವೇ. ಶಾಸ್ತ್ರಿಗಳು ರುಕ್ಮಿಣಿಯ ಮೇಲೆ ಆಕ್ರಮಣ ಮಾಡುವುದಕ್ಕೂ

---

೧)ಚದುರಂಗದ ಸಮಗ್ರ ಕಾದಂಬರಿಗಳು-ಚದರುಂಗ-ಸಂಪುಟ-೨, ಪು.ಸಂ-೪೯

ಸುಶೀಲತ್ತೆಯ ಗೈರುಹಾಜರಿಗೂ ಸಂಬಂಧ ಕಲ್ಪಿಸದೇ ಇರಲು ಸಾಧ್ಯವಿಲ್ಲ. ಏಕೆಂದರೆ ರುಕ್ಮಿಣಿಗೆ ಬಲತ್ಕಾರವಾಗುವುದೇ ಸುಶೀಲತ್ತೆ ಇಲ್ಲದ ಸಂದರ್ಭದಲ್ಲಿ. ನೈತಿಕತೆಗೆ ಹೆಸರಾಗಿದ್ದ ಇವರು ಅನೈತಿಕವರ್ತನೆಯಿಂದ ಕಾದಂಬರಿಯಲ್ಲಿ ಭಿನ್ನ ಪಾತ್ರವಾಗಿ ಬೆಳೆಯಬೇಕಾಗಿದ್ದ ಇವರು ಡೋಲಾಯಮಾನ ಪಾತ್ರವಾಗಿ ಬಿಡುತ್ತಾರೆ. ದೌರ್ಬಲವನ್ನು ಮೀರಲಾಗದ ಮನುಷ್ಯನಾಗಿಯೇ ಉಳಿದು ದರುಮನಹಳ್ಳಿಯ ಕೆಡುಕು ಕ್ರೌರ್ಯಗಳ ಅವಿಭಾಜ್ಯ ಅಂಗವಾಗಿ ಹೋಗುತ್ತಾರೆ.

ರುಕ್ಮಿಣಿ:- ಬ್ರಾಹ್ಮಣ ವರ್ಗಕ್ಕೆ ಸೇರಿದ ರುಕ್ಮಿಣಿ ಕೃಷ್ಣಶಾಸ್ತ್ರಿಗಳ ಸೊಸೆ ಕಾದಂಬರಿಯಲ್ಲಿ ಕೇಂದ್ರ ಪಾತ್ರವಾಗಿ ಕಂಡುಬರುತ್ತಾಳೆ. ಶಾಸ್ತ್ರಿಗಳ ಮಗ ವಿಶ್ವೇಶ್ವರನ್ನು ಮದುವೆಯಾಗಿ ಬಂದ ಸ್ವಲ್ಪದಿನಗಳಲ್ಲೆ ವಿಧವೆಯಾಗುತ್ತಾಳೆ, ವಿಧವೆಯಾದರೂ ಸಕೇಶಿ. ಗಂಡಸತ್ತನೆಂದು ಬಾವಿಗೆ ಬಿದ್ದು ಆತ್ಮಹತ್ಯೆ ಮಾಡಿಕೊಳ್ಳುವ ಸಂದರ್ಭದಲ್ಲಿ ದಲಿತ ವರ್ಗಕ್ಕೆ ಸೇರಿದ ಲಕ್ಕ ಇವಳನ್ನು ಕಾಪಾಡುತ್ತಾನೆ. ಇವಳು ಸಕೇಶಿಯಾಗಿದ್ದರೂ ಪುರುಷ ಪ್ರಧಾನ ಸಮಾಜ ಅವಳ ಸ್ಥಿತಿಗೆ ಕೊಟ್ಟಿರುವುದು ಮಾವನ ಪೂಜೆಗೆ ಅಣಿ ಮಾಡುವುದು, ನೈವೇದ್ಯ ತಯಾರಿಸುವುದು, ಅಡುಗೆ ಮಾಡುವುದು, ಮನೆಗೆಲಸ ಇವಿಷ್ಟೆ ಇವಳ ಪ್ರಪಂಚ. ಬ್ರಾಹ್ಮಣ ಸಮಾಜ ಈಕೆಯನ್ನು ಚೌಕಟ್ಟಿನಲ್ಲಿ ಬಂಧಿತಳನ್ನಾಗಿ ಮಾಡಿದೆ.

ನಾಲ್ಕು ಗೋಡೆಯ ನಡುವೆಯೇ ಸ್ವತಂತ್ರವಿಲ್ಲದೆ ಬದುಕು ನಡೆಸುತ್ತಿರುವ ಸಂದರ್ಭದಲ್ಲಿ ಒಮ್ಮೆ ಕೃಷ್ಣಶಾಸ್ತ್ರಿಗಳು ರುಕ್ಮಿಣಿಯನು ಬಲತ್ಕಾರದಿಂದ ಕೂಡುತ್ತಾರೆ. ಆದರೆ ಆಕ್ರಮಣ ಮಾಡಿದ ಮಾವನ ಮೇಲೆ ಪ್ರತಿಭಟಿಸಲಾಗದೆ ಅವರ ಮೇಲಿನ ಪೂಜ್ಯ ಭಾವನೆಯಿಂದ ಸಹಿಸಿಕೊಳ್ಳುತ್ತಾಳೆ. ಕಾಲಾಂತರದಲ್ಲಿ ಈ ಅನುಭವದಿಂದ ಪ್ರಚೋಧಿತಳಾದ ರುಕ್ಮಿಣಿ ತಡೆಹಿಡಿಯಲಾಗದ ಕಾಮದಿಂದ ಲಕ್ಕನ ಮೇಲೆ ಆಕ್ರಮಣ ಮಾಡುತ್ತಾಳೆ. ಎರಡು ಘಟನೆಗಳು ಕಾದಂಬರಿಯ ಸುತ್ತ ಚಿತ್ರಿಸಿರುವ ವರ್ತಮಾನ ಕಾಲದಲ್ಲಿ ನೇರವಾಗಿ ಘಟಿಸಿರುವ ನಿರೂಪಣೆಗೊಳ್ಳುವ ಪ್ರಮುಖ ಸಂದರ್ಭಗಳಾಗಿವೆ. ಅದಕ್ಕೆ ಕಾರಣ ಅವಳನ್ನು ಬ್ರಾಹ್ಮಣ ಸಮಾಜ ಅಂತ ಅನಿವಾರ್ಯಕ್ಕೆ ದೂರಿದೆ. ನಾಲ್ಕು ಗೋಡೆಯ ನಡುವೆ ತನ್ನೆಲ್ಲಾ

ಆಸೆಗಳನ್ನು ಅದುಮಿಟ್ಟುಕೊಂಡಿದ್ದ ಸಂದರ್ಭದಲ್ಲಿ ಇದ್ದಕ್ಕಿದ್ದಂತೆ ಆದ ಅನುಭವ ಅವಳನ್ನೇ ಮತ್ತೆ ಬಿಡುಗಡೆಗೆ ದಾರಿಮಾಡಿಕೊಟ್ಟಾಂತಾಗಿದೆ. ಬ್ರಾಹ್ಮಣ ಸಮುದಾಯಕ್ಕೆ ಸವಾಲೆಸುವ ಕಾರ್ಯವನ್ನು ನಿರೂಪಕರೂ ಇವಳ ಪಾತ್ರದ ಮೂಲಕ ಹೊರ ತಂದಿದ್ದಾರೆ.

"ಬ್ರಾಹ್ಮಣ ಸಂಸ್ಕಾರಗಳಿಂದ ತಪ್ಪಿಸಿಕೊಂಡರೂ ಅವಳ ಸ್ಥಾನ ಎಲ್ಲೋ ಒಂದು ಕಡೆ ಗೌಣವೆನಿಸುತ್ತದೆ. ಯಾವುದಕ್ಕೂ ಸ್ವಾತಂತ್ರ್ಯವಿಲ್ಲ ಸತ್ತು ಸಾಯುವ ಘೋರ ದುರಂತಕ್ಕಿಂತ ಇದ್ದು ಸಾಯುವ ಇನ್ನೂ ಘೋರ ದುರಂತದ ಅವಶ್ಯಕ ಪಾತ್ರವಾಗಿ ಉಳಿಯುತ್ತಾಳೆ".[೧] ಅವಳ ಪಾಲಿಗೆ ದರುಮನಹಳ್ಳಿ ಕತ್ತಲೆಯ ಕಾಡು ಕೇಶವಯ್ಯ, ಲಕ್ಷ್ಮಮ್ಮ, ವೆಂಕಟೇಶಜೋಯಿಸರು, ನಂಜೇಗೌಡ ಇವರೆಲ್ಲಾ ಒಂದಲ್ಲ ಒಂದು ರೀತಿ ಅವಳನ್ನು ಹರಿದು ತಿನ್ನಲು ಹವಣಿಸುವ ಹದ್ದುಗಳೇ ಧಾರ್ಮಿಕ ಸಂಕೋಲೆಯಲ್ಲಿ ಬಂಧಿತಳಾದ ಇವಳು ಅಸಹಾಯಕತೆಯ ಸಂಕೇತ ಯಾರ ಸಂಗಡ ಹೇಳಿಕೊಳ್ಳಲಿ? ಈ ಸಂದಿಗ್ದದಿಂದ ನನ್ನನ್ನು ಯಾರು ಪಾರು ಮಾಡಬಲ್ಲರು? ಎಂಬುದು ಅವಳ ಕೊರಗು.

ರುಕ್ಮಿಣಿ ಮಾನಸಿಕ ಮತ್ತು ದೈಹಿಕ ಎರಡು ಬಗೆಯ ನೋವುಗಳನ್ನು ಅನುಭವಿಸುತ್ತಾಳೆ. ಇದರಿಂದ ತಪ್ಪಿಸಿಕೊಳ್ಳಲು ಯಾವ ದಾರಿಯೂ ಕಾಣದು. ಈಗ ಅವಳು ಬಂಧಿ ಅನಾಥೆ, ಅವಳ ಒಳತುಡಿತಗಳು ಬ್ರಾಹ್ಮಣ ಸಮಾಜಕ್ಕೆ ಅರ್ಥವಾಗುತ್ತಿಲ್ಲ. ಹೊಸ ಬದುಕಿಗೆ ಕನಸು ಕಟ್ಟುವ ಅವಕಾಶವಿಲ್ಲ. ಪ್ರತಿ ಸಂದರ್ಭದಲ್ಲೂ ಅನ್ಯಾಯಕ್ಕೆ ಶೋಷಣೆಗೆ ಅತ್ಯಾಚಾರಕ್ಕೆ ಒಳಗಾಗುತ್ತಿರುತ್ತಾಳೆ. ಮಾವನಿಂದ ಬಲತ್ಕಾರಕ್ಕೆ ಒಳಗಾದರೂ ಅದನ್ನು ಪ್ರತಿಭಟಿಸುವ ಧೈರ್ಯ ಮಾಡದೆ ಮೂಕ ಅಸಹಾಯಕ ಪರಿಸ್ಥಿತಿಗೆ ಅತಂತ್ರ ಸ್ಥಿತಿಗೆ ಒಳಗಾಗುತ್ತಾಳೆ. ಬದುಕಿನ ಬಗ್ಗೆ ಭರವಸೆಯೇ ಇಲ್ಲದಂತಾಗುತ್ತದೆ.

ಮುಖ್ಯವಾಗಿ ರುಕ್ಮಿಣಿಯ ವ್ಯಕ್ತಿತ್ವದ ಬಗ್ಗೆ ಹೇಳುವುದಾದರೆ ಬದುಕಿನ ಒಂದು ಭಾಗವಾಗಿದ್ದ ಕಾಮ ಇದುವರೆಗೂ ಸುಪ್ತವಾಗಿದ್ದು ಆಕಸ್ಮಿಕವೆಂಬಂತೆ ಹೊರಬೀಳುತ್ತದೆ.

---

೧)ವೈಶಾಖ ವೈವಿದ್ಯ-ಡಾ. ಬಸವರಾಜ ಸಬರದ, ಪು.ಸ.೧೯೩

ಲೈಂಗಿಕ ತೃಷೆಗೆ ಒಳಗಾಗಿರುವ ಇವಳ ಪಾತ್ರ ಚಿತ್ರಣದಲ್ಲಿ ಕ್ಷಣಿಕ ಸೋಲಿಗೆ ಸಾಕಷ್ಟು ಪೂರ್ವಸಿದ್ಧತೆ ಇರುವಂತೆ ಕಾಣುವುದಿಲ್ಲ. ಅಲ್ಲದೆ ಜಾನಕಿಯ ಮೇಲೆ ಅತ್ಯಾಚಾರ ನಡೆದಾಗ ಅವಳು ಗರ್ಭಿಣಿಯಾದರೆ ಏನುಗತಿ ಎಂದು ಆತಂಕಪಡುತ್ತಿದ್ದ ರುಕ್ಮಿಣಿ ತನ್ನ ವಿಷಯದಲ್ಲಿ ಈ ಸಾಧ್ಯತೆಯನ್ನು ಚಿಂತಿಸದಿರುವುದು ಅಶ್ಚರ್ಯಕರ.

ಲಕ್ಕನೊಡನೆ ಕೂಡಿದ ಅನುಭವದಿಂದ ಉದ್ರಿಕ್ತಳಾದಳೆಂದು ಒಪ್ಪಿದರೂ ಅವಳಿಗೆ ಆಕ್ಷಣದ ಅನುಭವ ತಪ್ಪಾಗಿ ಕಾಣಿಸುವುದಿಲ್ಲ. ಮಾವ ತಂದೆ ಸಮಾನರೆಂಬ ಕಾರಣಕ್ಕೂ ಕೊರಗುತ್ತಾಳೆಯೇ ಹೊರತು ಲೆಕ್ಕದ ವಿಚಾರದಲ್ಲಿ ಎಲ್ಲೂ ಪಶ್ಚಾತಾಪ ಪಡುವ ಸನ್ನಿವೇಶ ಅಷ್ಟಾಗಿ ಕಾಣಿಸುವುದಿಲ್ಲ. ಏನೇ ಆದರೂ ವ್ಯವಸ್ಥೆ ಅವಳನ್ನು ಈ ರೀತಿ ದುಡುಕುವ ಹಾಗೆ ಮಾಡಿದೆಯೇ ಹೊರತು ಅವಳ ತಪ್ಪು ಸರಿ ಎಂದು ಸಮರ್ಥನೆಯನ್ನು ನೀಡುವುದು ಕಷ್ಟವೆನಿಸುತ್ತದೆ. ನಿರೂಪಕರು ಕೂಡ ಇವಳ ಪಾತ್ರದಲ್ಲಿ ಗೊಂದಲವನ್ನು ಉಂಟು ಮಾಡಿದ್ದಾರೆ.

ಕುಹಕ ಲಕ್ಷ್ಮಮ್ಮ, ರುಕ್ಮಿಣಿ ಗರ್ಭಿಣಿಗೆ ಲಕ್ಕನೆ ಕಾರಣನೆಂದು ಅವನನ್ನು ಪಂಚಾಯಿತಿಗೆ ಎಳೆ ತಂದಾಗ ಅವನು ನಿರಪರಾಧಿ ಎಂದು ಹೇಳುವ ಧೈರ್ಯ ಮಾಡುವುದೇ ಇಲ್ಲ. ಮೊದಲು ಮಾವನಿಂದ ಬಲತ್ಕಾರ ಅನಂತರ ಲಕ್ಕನನ್ನು ಕೂಡುವುದು ತನ್ನ ಗರ್ಭಕ್ಕೆ ಯಾರು ಕಾರಣವೆಂಬುದು ಅವಳಿಗೆ ಗೊಂದಲವಾಗಿದೆ. ಇದಕ್ಕೆ ಕಾರಣ ಯಾರು ಎಂದು ನಿರೂಪಕರು ಕಾದಂಬರಿಯಲ್ಲಿ ಬಯಲಿಗೆ ತರುವುದೇ ಇಲ್ಲ.

ರುಕ್ಮಿಣಿಗೆ ಘಟಶ್ರಾದ್ಧ ಮಾಡುವುದು ತಿಳಿದಾಗ ಊರು ಬಿಟ್ಟು ಹೋಗುತ್ತಾಳೆ. ಏನಾದಳೂ? ಎಲ್ಲಿಗೆ ಹೋದಳೂ? ಯಾರಿಗೂ ತಿಳಿಯುವುದಿಲ್ಲ. ಜನರ ಊಹಾ ಪೋಹಾ ಮಾತುಗಳಿಗೆ ಒಳಗಾಗಿ ಊರಿಗೆ ಪ್ಲೇಗು ತಗಲುತ್ತದೆ. ಈ ವಿನಾಶದೊಂದಿಗೆ ಊರಿನ ಸಂಸ್ಕೃತಿಯ ಪತನವನ್ನು ಸೂಚಿಸಿದಂತೆ ಈ ಪಾತ್ರ ದುರಂತದ ಕಥೆಯಾಗುತ್ತದೆ.

ವಿಶ್ವೇಶ್ವರ : ಇವನು ಕೃಷ್ಣ ಶಾಸ್ತ್ರಗಳ ಏಕೈಕ ಮಗ. ಗೌಣ ಪಾತ್ರವಾಗಿ ಕಂಡು ಬರುತ್ತಾನೆ. ಕಾದಂಬರಿಯಲ್ಲಿ ಇವನು ರುಕ್ಮೀಣಿಗಾಗಿ ನೆನಪಿನ ಪಾತ್ರವಾಗಿ

ಕಾಣಿಸಿಕೊಳ್ಳುತ್ತಾನೆ. ಅಷ್ಟಾಗಿ ಇವನಿಗೆ ಸಂಬಂಧ ಪಟ್ಟ ವಿವರಗಳು ಮೂಢಿಬರುವುದಿಲ್ಲ. ರುಕ್ಮಿಣಿಯನ್ನು ಮೆಚ್ಚಿ ಮದುವೆಯಾಗಿದ್ದ ಇವನು ಒಂದೂವರೆ ವರ್ಷಕ್ಕೆ ತೀರಿಕೊಳ್ಳುತ್ತಾನೆ. ಇದಷ್ಟು ದಿನಾಕೂಡ ಎಂದೂ ಯಾರಿಗೂ ಬೇಸರವನ್ನು ಉಂಟುಮಾಡಿದವನಲ್ಲ.

ಮೂಢನಂಬಿಕೆ, ಕಂದಾಚಾರ ಶಾಸ್ತ್ರಗಳ ಪರಿಪಾಟಲನ್ನು ತಪ್ಪಿಸಿ, ಎಷ್ಟು ಅಗತ್ಯವೋ ಅಷ್ಟನ್ನು ಮಾತ್ರ ಉಳಿಸಿ ವಿವಾಹವನ್ನು ಆಗಬಯಸಿದ ವೈಚಾರಿಕ ಮನೋಭಾವದವನು. ಋತುಮತಿಯಾಗುವುದಕ್ಕೆ ಮುಂಚೆಯೇ ಮದುವೆಯಾಗಿದ್ದ ರುಕ್ಮಿಣಿಯೂ ಇನ್ನೂ ಋತುಮತಿಯಾದ್ದಿದ್ದನ್ನು ಕಂಡ ವಿಶ್ವೇಶ್ವರನ ತಾಯಿ ಮಗನಿಗೆ ಬೇರೆ ಮದುವೆ ಮಾಡುವ ಯೋಜನೆಯನ್ನು ಹೂಡಿದಾಗ ಅದನ್ನು ತಡೆದು ತಾಯಿಗೆ ಬುದ್ದಿ ಹೇಳುವ ವಿಶಾಲ ಮನೋಭಾವದವನಾಗಿ ಕಂಡುಬರುತ್ತಾನೆ.

ಋತುಮತಿಯಾಗಿ ಮನೆಗೆ ಕರೆದುಕೊಂಡು ಬಂದಮೇಲೂ ಅಷ್ಟೇ ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದನು. “ನಮ್ಮ ತಾಯಿಯ ಹಟದಿಂದ ನಿನ್ನನ್ನು ಇಷ್ಟು ದಿನ ಅಲ್ಲೇ ಬಿಡಬೇಕಾಯಿತು”.[೧] ಎಂದು ರಮಿಸಿ ಮುದ್ದಿಸಿ ರುಕ್ಮಿಣಿಯನ್ನು ಸಮಾಧಾನಪಡಿಸಿದ್ದನು. ವಿಶ್ವೇಶ್ವರನ ಮೇಲೆ ಸುಶೀಲತ್ತೆ ರುಕ್ಮಿಣಿಗೆ ಕೇಳುವ ಹಾಗೆ ವಿಶ್ವ ಸಮಯ ಸಿಕ್ಕಾಗಲೆಲ್ಲಾ ತೋಟಕ್ಕೆ ಬರುವ ಸಣ್ಣಿಯನ್ನು ರಮಿಸುತ್ತಾನೆ ಎಂದು ಹೇಳಿದ ಮಾತನ್ನು ಕೇಳಿಸಿಕೊಂಡು ನೋವಿನಿಂದ ನರಳುತ್ತಿರುವುದನ್ನು ಗಮನಿಸಿ ಅವಳ ಮನಸ್ಥಿತಿಯನ್ನು ಅರ್ಥಮಾಡಿಕೊಂಡು ಅನುಮಾನವನ್ನು ತೆಗೆದುಕೊಂಡು ಸಮಾಧಾನ ಪಡಿಸಿ ನಿಜಸ್ಥಿತಿಯನ್ನು ಹೇಳಿದ ಮುಕ್ತ ಮನಸ್ಸಿನ ವ್ಯಕ್ತಿತ್ವದ ಪಾತ್ರವಾಗಿ ಕಾಣಿಸುತ್ತಾನೆ.

ಸುಶೀಲತ್ತೆ:- ಇವಳು ಕೃಷ್ಣಶಾಸ್ತ್ರಿಗಳ ತಂಗಿ ಬಹಳ ಹಿಂದೆಯೇ ಗಂಡನನ್ನು ಕಳೆದುಕೊಂಡು ತನ್ನ ಒಬ್ಬ ಮಗಳು ಸರಸಿಯೊಡನೆ ತೌರನ್ನೆ ನಂಬಿ ಅಣ್ಣನ ಮನೆಗೆ ಬಂದು ಠಿಕಾಣಿ ಹೂಡಿದ್ದಳು. ಗಂಡನ ಮನೆಯಲ್ಲಿ ಕೊಡುತ್ತಿದ್ದ ಕಿರುಕುಳ ಕಂಡು ಸಹಿಸಲಾರದೆ ಸ್ವತ: ಶಾಸ್ತ್ರಿಗಳೇ ಅವಳನ್ನು ಕರೆತಂದಿದ್ದರು. ರುಕ್ಮಿಣಿಗಿಂತ ನಾಲ್ಕೈದು ವರ್ಷ ಹಿರಿಯವಳಾದ

---
೧)ಚದುರಂಗರ ಸಮಗ್ರ ಕಾದಂಬರಿಗಳು-ಚದುರಂಗ-ಸಂಪುಟ-೨,ಪು.ಸಂ-೩೭

ಇವಳು ರುಕ್ಮಿಣಿಯ ಗಂಡ ಸತ್ತಾಗ ತನ್ನಂತೆಯೇ ಇವಳಿಗೆ ಕೇಶಮುಂಡನ ಮಾಡಲಿಲ್ಲವೆಂಬ ಸಿಟ್ಟು, ಉದಾಸೀನ, ಅಸಮಾಧಾನ ಸಣ್ಣತನದಿಂದ ವರ್ತಿಸುತ್ತಿದ್ದಳು. ಶಾಸ್ತ್ರಿಗಳು ಸುಶೀಲತೆಯನ್ನು ಮಮಕಾರದಿಂದ ಬೆಳೆಸಿದ್ದರಿಂದ ಮನೆಯ ಆಡಳಿತದ ಮೇಲೆ ತನ್ನ ಸಾರ್ವಭೌಮತ್ವವನ್ನು ಸ್ಥಾಪಿಸುವ ಪ್ರಯತ್ನವನ್ನು ಮಾಡುತ್ತಿದ್ದಳು.

ರುಕ್ಮಿಣಿಯೂ ತನ್ನಂತೆಯೇ ಗಂಡನನ್ನು ಕಳೆದುಕೊಂಡ ಒಂಟಿಹೆಣ್ಣು ಎಂಬ ಕರುಣೆ, ಕಾಳಜಿ, ನಂಬಿಕೆ, ಪ್ರೀತಿ ವಿಶ್ವಾಸವಿಲ್ಲದೆ ಅವಳೊಡನೆ ಸಣ್ಣಪುಟ್ಟ ವಿಷಯಕ್ಕೂ ಕಾಳೆಯುವ ಕೆಲಸ ಮಾಡುತ್ತಿದ್ದಳು. ಅಡುಗೆಯನ್ನು ಮಾಡಲು ಹೋದರೆ ಸಕೇಶಿಯಾದ ನೀನು ಮಾಡುವ ಅಡುಗೆಯನ್ನು ತಿನ್ನುವುದಿಲ್ಲ, ಎಲ್ಲರಿಗೂ ತಾನೇ ಅಡುಗೆ ಮಾಡುತ್ತೇನೆ ಎಂದು ಅಡುಗೆ ಕೋಣೆಯ ಯಜಮಾನಿಕೆಯನ್ನು ತಾನೇ ವಹಿಸಿಕೊಂಡಿದ್ದಳು. ಜೊತೆಗೆ ಶಾಸ್ತ್ರಿಗಳ ತಿಂಡಿ-ತೀರ್ಥ, ಊಟ ಉಪಚಾರ ಎಲ್ಲವೂ ಅವಳ ಕಾರುಬಾರಿಗೆ ವಹಿಸಿಕೊಂಡಳು. ಶಾಸ್ತ್ರಿಗಳಿಗೆ ಇವಳ ಸಣ್ಣತನ ಕುಹಕ ಗುಣ ಗೊತ್ತಿದ್ದರೂ ಗೊತ್ತಿಲ್ಲದಂತೆ ಸಹಿಸಿಕೊಂಡು ಸುಮ್ಮನಿರುತ್ತಿದ್ದರು.

ರುಕ್ಮಿಣಿಯು ಜೋಯಿಸರ ಮಗಳು ನಾಗಲಕ್ಷ್ಮೀಯ ಸಹಾನುಭೂತಿಯಿಂದ ಶುಭಸಮಾರಂಭಗಳಿಗೆ ಹೋಗಿಬರುತ್ತಿದ್ದನ್ನು ಗಮನಿಸಿದ ಸುಶೀಲತ್ತೆ ಅದನ್ನು ಸಹಿಸಲಾರದೆ "ನಿನ್ನಿಂದ ಕಣೆ ನಮ್ಮ ಮನೆಗೆ ಆಪತ್ತು ಬಂತು. ನೆಂಟರು ಇಷ್ಟರು ಎಲ್ಲರಿಂದಲೂ ಬಹಿಷ್ಕಾರ ಹಾಕಿಸಿಕೊಂಡ ಕಿಟ್ಟಣ್ಣ ಒಳಗೆ ಕೊರಗಿದ್ದಾನೆ. ನಿಂಗೇನು ಲಂಗಿಲ್ಲ ಲಗಾಮಿಲ್ಲ, ನೀನು ಹೂ ಅಂದಿದ್ದರೆ ಅವನೇನು ಬೇಡ ಅಂತಿದ್ದನೇ ಹರಾಮಿ, ಹರಾಮಿ, ನಿನ್ನೇ ಹರಾಮಕೋರತನದಿಂದ ನಮ್ಮಣ್ಣನ ಮನೆತನದ ಹೆಸರು ಮಣ್ಣು ಗೂಡಿಹೋಯ್ತು".[೧] ಎಂದು ದಿನ ನಿತ್ಯ ಮೂದಲಿಕೆಯ ಚುಚ್ಚುಮಾತುಗಳಿಂದ ತನ್ನಂತೆಯೇ ನೊಂದಿರುವ ಹೆಣ್ಣು ಎಂಬುದನ್ನು ಮರೆತು ನೋಯಿಸುತ್ತಿದ್ದಳು. ಬೇಕೆಂದು ಮುಂದಲೆ ಹಿಡಿದು ಜಗ್ಗುವುದು ಇವು ಸುಶೀಲತ್ತೆಯ ದಿನಚರಿಯಲ್ಲಿ ಸರ್ವೇ ಸಾಮಾನ್ಯವಾಗುತ್ತಾ ಬಂದವು. ಅವಳ ಅಸ್ವಸ್ಥತೆಯ ಮೂಲಕಾರಣ ಎಲ್ಲೆಂದರಲ್ಲಿ ಹೀಗೆ ಮೂರ್ತ ರೂಪ ತಾಳುತ್ತದೆ.

---

೧) ಚದುರಂಗರ ಸಮಗ್ರ ಕಾದಂಬರಿಗಳು –ಚದುರಂಗ–ಸಂಪುಟ–೨,ಪು.ಸಂ–೫೦

ಇಷ್ಟು ಕಾಟಕೊಡುತ್ತಿದ್ದ ಸುಶೀಲತ್ತೆ ರುಕ್ಮಿಣಿ ಊರಿನಲ್ಲಿ ಇಲ್ಲದಿದ್ದ ಸಂದರ್ಭದಲ್ಲಿ ಹಾವು ಕಚ್ಚಿ ಸತ್ತುಹೋಗುತ್ತಾಳೆ. ಇಲ್ಲಿ ಗಮನಿಸಬೇಕಾದ್ದು ನಿರೂಪಕರು ಇವರಿಬ್ಬರ ಪಾತ್ರಗಳು ಸ್ಥಿತಿಗತಿಗಳು ಒಂದೇ ಆದರೂ ವ್ಯಕ್ತಿತ್ವಮಾತ್ರ ಭಿನ್ನವಾಗಿದೆ. ಇಬ್ಬರೂ ಹೆಣ್ಣು ಅದರಲ್ಲೂ ಇಬ್ಬರೂ ಗಂಡನನ್ನು ಕಳೆದುಕೊಂಡು ಒಂಟಿಯಾಗಿ ಬಾಳುತ್ತಿರುವ ವಿಧವೆಯರು. ತಾಳ್ಮೆ ಸಹನೆಯಿಂದ ಮಮಕಾರದಿಂದಕೂಡಿದ ರುಕ್ಮಿಣಿ ಒಂದೆಡೆಯಾದರೆ, ಹೊಟ್ಟೆಕಿಚ್ಚು ದ್ವೇಷ, ಕ್ರೌರ್ಯದ ಹಲವು ರೂಪಗಳೇ ಪ್ರತಿನಿತ್ಯ ಅಭಿವ್ಯಕ್ತವಾಗುತ್ತಿರುವ ಸುಶೀಲೆ ಒಂದು ಕಡೆ. ನಾಲ್ಕುಗೋಡೆಯ ನಡುವೆ ಬದುಕು ಸೀಮಿತ ಎನ್ನುವ ಹಾಗೆ ಹೆಣ್ಣಿನ ಅಸ್ತಿತ್ವ ಗಂಡನ ನೆರಳಿನಲ್ಲಿಯೇ ಎನ್ನುವ ಸಮಾಜದಲ್ಲಿ ಗಂಡನಿಲ್ಲದೆ ವಿಧವೆಯಾಗಿ ಅಸ್ತಿತ್ವವನ್ನು ಕಳೆದುಕೊಂಡವರು. ಇಲ್ಲಿ ಸುಶೀಲತ್ತೆಯನ್ನು ನಿರೂಪಕರು ಬೇರೆಯಾಗಿ ಚಿತ್ರಿಸಿದ್ದಾರೆ. “ಪುರುಷ ಪ್ರಧಾನ ಸಮಾಜದ ಕ್ರೌರ್ಯಕ್ಕೆ ಒಳಗಾಗಿರುವ ಸುಶೀಲತ್ತೆ, ಅದೇ ಮೌಲ್ಯಗಳ ಮೂಲಕವೇ ರುಕ್ಮಿಣಿಯನ್ನು ಗ್ರಹಿಸಿ ಹೋಗುವುದು ಅವಳ ಈ ಚರ್ಚೆಗೆ ಕಾರಣವಾಗುವುದರ ಜೊತೆಗೆ ಅದು ಅವಳ ಮಾನಸಿಕ ಅಸ್ವಸ್ಥತೆಯನ್ನು ಪ್ರತಿಬಿಂಬಿಸುತ್ತದೆ”.[೧] ಇವರ ಪಾತ್ರದ ಮುಖಾಂತರ ಚದುರಂಗರು ಬ್ರಾಹ್ಮಣ ಸಮುದಾಯದಲ್ಲಿನ ಭಿನ್ನ ವ್ಯಕ್ತಿತ್ವದ ಪರಿಚಯವನ್ನು ಕಾದಂಬರಿಯಲ್ಲಿ ಸಂದರ್ಭೋಚಿತವಾಗಿ ನಿರೂಪಿಸಿದ್ದಾರೆ.

ಇಲ್ಲಿ ಹೆಣ್ಣಿಗೆ ಹೆಣ್ಣೆ ರಕ್ಷಣೆ ಎಂಬ ಮಾತು ಎಷ್ಟು ಸತ್ಯವೋ ಹೆಣ್ಣಿಗೆ ಹೆಣ್ಣೆ ಶತ್ರು ಎಂಬ ಮಾತುಕೂಡ ಅಷ್ಟೇ ಸತ್ಯವಾಗಿದೆ. ಸುಶೀಲತ್ತೆ ಎಷ್ಟೇ ಕಾಟಕೊಟ್ಟರೂ ಕೂಡ ಮರುಮಾತಾಡದೆ ಎಲ್ಲವನ್ನು ಸಹಿಸುವ ಸ್ವಭಾವವನ್ನು ಮೆಚ್ಚತಕ್ಕದ್ದು. ಸಂಪ್ರದಾಯಕ್ಕೆ ಬದ್ಧವಾಗಿರುವ ಸುಶೀಲತ್ತೆ ಅದರ ಮೌಲ್ಯಗಳನ್ನು. ಪಾಲಿಸುವ ಕ್ರೂರತನವನ್ನು ಪ್ರದರ್ಶಿಸುವುದು ಅವಳ ತಪ್ಪು ಎಂದರೆ ಸಮಂಜಸವಾಗುವುದಿಲ್ಲ. ಪುರುಷ ವ್ಯವಸ್ಥೆ ಅವಳನ್ನು ಅಂತಹ ಸ್ಥಿತಿಗೆ ತಲುಪಿದೆ. ಯಾವುದನ್ನು ಪ್ರತಿಭಟಿಸಲಾಗದೆ ಒಳಗಿನ ಸುಪ್ತ ಸಣ್ಣತನವೂ ಮತ್ತೊಂದು ರೂಪವನ್ನು ಪಡೆಯುವುದು ಹೆಣ್ಣಿನ ಸಹಜಸ್ಥಿತಿಯಾಗಿದೆ.

---

೧) ಚದುರಂಗ- ಡಾ.ಎಂ.ಎಸ್.ವೇದ, ಪುಟ ಸಂಖ್ಯೆ-೧೦೩

ಸರಸಿ:- ಇವಳು ಸುಶೀಲೆಯ ಮಗಳು. ಶಾಸ್ತ್ರಿಗಳು ಮತ್ತು ರುಕ್ಮಿಣಿಯ ಜೊತೆ ತಾಯಿಗಿಂತ ಹೆಚ್ಚಾಗಿ ಪ್ರೀತಿ ಮಮಕಾರದಿಂದ ಬೆಳೆದವಳು. ರುಕ್ಮಿಣಿ ಸರಸಿಯನ್ನು ಮಗಳಂತೆ ನೋಡಿಕೊಳ್ಳುತ್ತಿದ್ದಳು. ಕೆಲ ಸಂದರ್ಭಗಳಲ್ಲಿ ಸರಸಿ ಇಲ್ಲವೆಂದರೆ ಚಡಪಡಿಸುತ್ತಿದ್ದಳು. ಸರಸಿ ಊರಿನಲ್ಲಿ ತನ್ನ ಸಮ ವಯಸ್ಕರರೊಡನೆ ಆಟಪಾಠ, ಕುಣಿತದಲ್ಲೂ ಎಲ್ಲರೊಡನೆ ಬೆರೆತು ಸಂಭ್ರಮಿಸುತ್ತಿದ್ದಳು.

ಸರಸಿ ಏನೂ ಅರಿಯದ ಮುಗ್ಧ ಹುಡುಗಿ, ಅವಳದು ಎಂಥಾ ಒಳ್ಳೆಯ ಗುಣವೆಂದರೆ ಕೆಲಸಂದರ್ಭದಲ್ಲಿ ವಯಸ್ಸಿಗೆ ಮೀರಿದ ಅನುಭವದ ಮಾತುಗಳು ಅವಳಿಂದ ಹೊರ ಬರುತ್ತಿತ್ತು. ರುಕ್ಮಿಣಿಗೆ ಏನಾದರೂ ಅಳುತ್ತಾ ಕೂತರೆ ಪುಟ್ಟಲಂಗದಿಂದ ಕಣ್ಣೀರು ಒರೆಸಿ ಸಮಾಧಾನ ಮಾಡುತ್ತಾಳೆ. ಒಮ್ಮೆ ದೇವರ ಕೋಣೆಯಲ್ಲಿದ್ದ ಹೂವನ್ನು ರುಕ್ಷಿಣಿಗೆ ಮುಡಿಸುತ್ತಾಳೆ. ತಾನು ಮುಡಿಯುವ ಹಾಗಿಲ್ಲ ಎಂದಾಗ ಹಾಗಾದರೆ ನಮ್ಮಮ್ಮನ ಹಾಗೆ ನೀನು ತಲೆಕೂದಲನ್ನು ತೆಗಿಸಬೇಕಾಗಿತ್ತು ಅಲ್ವ? ಎಂದು ಹೇಳುವ ಮಾತಿಗೆ ಉತ್ತರಿಸಲಾಗದೆ ಮೂಕಳಾಗುತ್ತಾಳೆ.

ಮತ್ತೊಂದು ಬಾರಿ ಬಚ್ಚಲು ಮನೆಯಲ್ಲಿ ವಾಂತಿ ಮಾಡುತ್ತಿದ್ದಾಗ ಈಚೀಚ್ಗೆ ನೀನು ವಾಂತಿ ಮಾಡಿಕೊಳ್ತಾನೆ ಇರ್ತೀಯಲ್ಲ? ಯಾಕಕ್ಕಾ ಎಂದು ಮುಗ್ಧವಾಗಿ ಏನು ಅರಿಯದೆ ಕೇಳಿದ ಮಾತಿಂದ ಕಣ್ಣೀರು ತುಂಬಿಕೊಂಡಾಗ ಸರಸಿಯೂ ಕೂಡ ಅವಳನ್ನು ತಬ್ಬಿ ಅಳತೊಡಗಿದ್ದಳು. ಲಕ್ಕನನ್ನು ಹೊಡೆಯುವ ದೃಶ್ಯವನ್ನು ನೋಡಿಕೂಡ ಅಳು, ಭಯ ಅವಳನ್ನು ಆವರಿಸಿತ್ತು. ರುಕ್ಮಿಣಿಯಲ್ಲಿ ಏನೇ ಬದಲಾವಣೆಯಾದರೂ ಅದನ್ನು ಮುಗ್ಧವಾಗಿ ಪ್ರಶ್ನಿಸುವ ಪಾತ್ರವಾಗಿ ನಿರೂಪಕರು ತಂದಿದ್ದಾರೆ. ಒಟ್ಟಿನಲ್ಲಿ ಪುಟ್ಟ ಹುಡುಗಿ ಸರಸಿಯೂ ರುಕ್ಮಿಣಿಗೆ ಹತ್ತಿರವಾದ ಪಾತ್ರವಾಗಿ ಕಂಡು ಬರುತ್ತಾಳೆ.

ಸಾವಿತ್ರಿ:- ಈಕೆ ರುಕ್ಮಿಣಿಯ ಅತ್ತಿಗೆ. ಸನ್ನಿವೇಶಕ್ಕೆ ತಕ್ಕಂತೆ ಮಾತನ್ನು ಬದಲಾಯಿಸಿ, ಅವಕಾಶವಾದಿಯಂತೆ ವರ್ತಿಸುವ ಸ್ವಭಾವ ಇವಳದು. ಹಠಮಾರಿತನ ಸಮರ್ಥನೆಯ ಮಾತುಗಳು, ಗಂಡ ಅಶ್ವತ್ಥನಿಗೆ ಕೆಲ ವಿಚಾರಗಳಲ್ಲಿ ಹೆದರುತ್ತಿದ್ದಳಾದರೂ ಕೆಲವೊಂದರಲ್ಲಿ ಹಠಮಾರಿತನ ಹೆಚ್ಚು. ಅಲ್ಲದೆ ರುಕ್ಮಿಣಿಯಿಂದ ತನ್ನ ಮಗಳ ಮದುವೆಗೆ ಎಲ್ಲಿ

ತೊಂದರೆಯಾಗುತ್ತದೋ ಎಂದು ಅವಳಿಗೆ ಕೇಳುವ ಹಾಗೆ "ಹೀಗಾಗುತ್ತೆ ಅಂತಾನೇ ಆಗಲೇ ಅವಳ ಮಂಡೆ ಬೋಳಿಸಿ ಅಂತಿದ್ದದ್ದು ನಾನು, ನನ್ನ ಮಾತಿಗೆ ನೀವು ಗಮನ ಕೊಡಲಿಲ್ಲ, ಈ ಚಿಂತೆ ನನ್ನೊಳಗೆ ಅವಲಕ್ಕಿ ಕುಟ್ಟಿದ ಹಾಗೆ ಕುಟ್ಟುತ್ತಾ ಇದೆ".[೧] ಎಂದು ಕಠೋರವಾಗಿ ನುಡಿಯುತ್ತಾಳೆ.

ರುಕ್ಮಿಣಿಯು ತನ್ನ ನಾದಿನಿ ಎಂಬುವುದನ್ನು ಮರೆತು ಮನೆಕೆಲಸದವಳಂತೆ ಅವಳನ್ನು ನೋಡುತ್ತಿದ್ದಳು, ಅಧಿಕಾರದಿಂದಲೇ ವರ್ತಿಸುತ್ತಿದ್ದಳು. ಮಗ ಶೇಷನ ವಿಷಯದಲ್ಲಿ ರುಕ್ಮಿಣಿ ಬೈದು ಬುದ್ಧಿ ಹೇಳಿದಾಗ ಮಗನ ಮೇಲೆ ಚಾಡಿ ಹೇಳ್ತೀಯಾ ಎಂದು ಅವಳನ್ನು ಗದರುತ್ತಿದ್ದಳು. ಮಗಳು ಬಲತ್ಕಾರಕ್ಕೆ ಒಳಪಟ್ಟು ಮಾನಸಿಕವಾಗಿ ಕುಗ್ಗಿದಾಗ ಅವಳನ್ನು ಗುಣಪಡಿಸುವಾಗ, ಸಂತೋಷ ಸಮಾಧಾನ ಪಡಿಸುವಾಗ ರುಕ್ಮಿಣಿಯ ಅವಶ್ಯಕತೆ, ವೈಣಿಕಶ್ಯಾಮನ ಅವಶ್ಯಕತೆ ಸಹಾಯಬೇಕಿತ್ತು. ಆದರೆ ಜಾನಕಿಯ ಮದುವೆ ಸಂದರ್ಭದಲ್ಲಿ ನಾಯಿ ಮುಟ್ಟಿದ ಮಡಿಕೆ ಎಂದು ಅವಳಿಗೆ ಅವಮಾನಿಸಿ ಶುಭಕಾರ್ಯಕ್ಕೆ ಬೆರೆಸೋದು ಬೇಡವೆಂದು ನಿಯ್ಯತ್ತು ಮನುಷ್ಯತ್ವವಿಲ್ಲದೆ ಮಾತನ್ನು ಆಡುವ ಸ್ವಭಾವದವಳಾಗಿ ಕಾದಂಬರಿಯಲ್ಲಿ ನಿರೂಪಿತಳಾಗಿದ್ದಾಳೆ. ಚದುರಂಗರು ಇವಳ ವ್ಯಕ್ತಿತ್ವವನ್ನು ಹೆಣ್ಣಿನ ಸಣ್ಣತನ ಸ್ವಭಾವ ಕ್ರೂರ ಮುಖವಾಡವನ್ನು ತೆರೆದಿಟ್ಟಿದ್ದಾರೆ.

ಅಶ್ವತ್ಥ:- ಇವನು ರುಕ್ಮಿಣಿಯ ಅಣ್ಣ. ಸಾವಿತ್ರಿಯನ್ನು ಮದುವೆಯಾಗಿ ಸುಖವಾಗಿ ಸಂಸಾರ ಮಾಡಿಕೊಂಡಿರುವವನು. ಸಂಸಾರದಲ್ಲಿ ಸಾವಿತ್ರಿಯದೇ ಮೇಲುಗೈ ಆಗಿದ್ದರೂ, ಇವನ ಮಾತನ್ನು ಕೆಲ ಸಂದರ್ಭಗಳಲ್ಲಿ ಮೀರುವ ಹಾಗಿಲ್ಲ. ಅಶ್ವತ್ಥ ಭೋಜನದಲ್ಲಿ ಎಲ್ಲರನ್ನು ಮೀರಿಸುಮ ನಿಸ್ಸೀಮ. ಇಡೀ ರುದ್ರ ಪಟ್ಟಣದಲ್ಲಿ ಇವನ ಹಾಗೆ ಊಟಮಾಡುವವನು ಯಾರು ಇಲ್ಲ ಎನ್ನುವ ಹಾಗೆ ಎಲ್ಲರ ಗಮನದಲ್ಲಿರುವವನು.

ಅಶ್ವತ್ಥ ಒಳ್ಳೆಯ ಸ್ವಭಾವದವನಾದರೂ ಮಗಳು ಜಾನಕಿಯ ಮದುವೆ ಸಂದರ್ಭದಲ್ಲಿ ರುಕ್ಮಿಣಿ ಕಾಮ ವಿಚಾರದಲ್ಲಿ ದುಡುಕಿದ್ದಾಳೆ ಇವಳಿಂದ ಮನೆತನಕ್ಕೆ, ಜಾನಕಿಯ ಮದುವೆಗೆ

---

೧) ಚದುರಂಗರ ಸಮಗ್ರ ಕಾದಂಬರಿಗಳು–ಚದುರಂಗ–ಸಂಪುಟ–೨, ಪು.ಸಂ–೨೫೦

ತೊಂದರೆ ಆಗಬಹುದೆಂಬ ಕಾರಣದಿಂದ ಹೆಂಡತಿ ಮಾತು ಕೇಳಿ ಕೆಲ ಸಂದರ್ಭದಲ್ಲಿ ತಂಗಿ ಎನ್ನುವುದನ್ನು ಮರೆತು ಅನ್ನಬಾರದ ಮಾತನ್ನು ಅಂದು ಬಿಡುತ್ತಾನೆ, ಹುಡುಗನ ಮನೆಯವರು ಏನಾದರೂ ಕೇಳಿದರೆ "ನಮಗೂ ರುಕ್ಕುಗೂ ಯಾವ ಸಂಬಂಧವೂ ಇಲ್ಲ, ಅವಳೀಗ ನಾಯಿ ಮುಟ್ಟಿದ ಮಡಿಕೆ, ಅದು ಇನ್ನೂ ನಮ್ಮ ಮನೆ ಹೊಸಿಲು ದಾಟಿ ಒಳಗೆ ಬರುವ ಆಗಿಲ್ಲ"[೧] ಎಂದು ನಿಷ್ಠೂರವಾಗಿ ಚುಚ್ಚು ಮಾತುಗಳನ್ನು ಆಡುತ್ತಾನೆ. ತಂಗಿ ಎನ್ನುವುದನ್ನು ಮರೆತು ಸ್ವಾರ್ಥಿಯಂತೆ ಹೆಂಗಸರಂತೆ ಸಣ್ಣತನದ ಮಾತುಗಳನ್ನು ಆಡುತ್ತಾನೆ. ಕೆಲ ಸನ್ನಿವೇಶಗಳಲ್ಲಿ ಹೆಂಡತಿಯ ಕೈಗೊಂಬೆಯಾಗಿ ವರ್ತಿಸುತ್ತಾನೆ. ನಿರೂಪಕರು ಇವನ ಪಾತ್ರದ ಮೂಲಕ ಪುರುಷನ ಕೆಲ ಧೋರಣೆಗಳು ಸಂಬಂಧವನ್ನು ಕಳೆದು ಕೊಳ್ಳುವುದಕ್ಕೂ ಹಿಂಜರಿಯುವುದಿಲ್ಲ ಎಂಬುವುದನ್ನು ತೋರಿಸಿಕೊಟ್ಟಿದ್ದಾರೆ.

ಜಾನಕಿ:- ಇವಳು ಸಾವಿತ್ರಿ ಮತ್ತು ಅಶ್ವತ್ಥನ ಮಗಳು. ಇವಳದೂ ಕೂಡ ತಾಯಿ ಸಾವಿತ್ರಿಯಂತೆ ಸಣ್ಣತನದ ಮತ್ತು ಸ್ವಾರ್ಥ ವ್ಯಕ್ತಿತ್ವದವಳು. ಒಮ್ಮೆ ಶಾಲೆಯಿಂದ ಬರುತ್ತಿದ್ದ ಸಂದರ್ಭದಲ್ಲಿ ಪುಂಡರು ಅತ್ಯಾಚಾರವೆಸಗುತ್ತಾರೆ. ಆಗ ವೈಣಿಕ ಶ್ಯಾಮ ಕಾಪಾಡಿ ರುಕ್ಮಿಣಿ ನಡೆದದ್ದೆಲ್ಲಾ ಹೇಳಿ ಸಮಾಧಾನ ಪಡಿಸುತ್ತಾರೆ. ಜಾನಕಿ ಮನಸಿಕವಾಗಿ ದೈಹಿಕವಾಗಿ ನೊಂದಿದ್ದಾಗ ಶ್ಯಾಮ-ರುಕ್ಮಿಣಿಯರೇ ಸಮಾಧಾನ ತುಂಬಿದ್ದವರು. ಇವಳಿಗೆ ಸೀತಾರಾಮುವಿನ ಜೊತೆಗೆ ಮದುವೆ ನಿಶ್ಚಯವಾಗುತ್ತದೆ. ಅದಕ್ಕೆ ಕಾರಣ ರುಕ್ಮಿಣಿ. ಅದನ್ನು ಮರೆತು ದಿನಕಳೆದಂತೆ ರುಕ್ಮಿಣಿ ಕಾಲುಜಾರಿದ ಹೆಣ್ಣು ಎಂದು ಅವಳು ಮಾಡಿದ ಸಹಾಯವನ್ನು ಮರೆತು ಚುಚ್ಚಿ ಮಾತನಾಡುತ್ತಿದ್ದಳು. ಸಲುಗೆಯಿಂದ ವರ್ತಿಸದೆ, ತಾನೇ ಮೇಲು ಎನ್ನುವ ರೀತಿ ಸೊಕ್ಕಿನಿಂದ ಮೆರೆಯುತ್ತಿದ್ದಳು.

ಇಲ್ಲಿ ಇಬ್ಬರೂ ಶೋಷಣೆಗೆ ಒಳಪಟ್ಟವರಾದರೂ ಸರಸಿ ಬಾಳು ದಡಸೇರಿತು. ಆದರೆ ವಿಧವೆ ಆದ ರುಕ್ಮಿಣಿ ಯಾವುದನ್ನು ಪ್ರತಿಭಟಿಸಲಾಗದೆ, ಯಾವುದನ್ನು ದಕ್ಕಿಸಿಕೊಳ್ಳಲಾಗದೆ, ಅಸಾಹಯಕಳಾಗಿರುವ ಅವಳ ಮನಸ್ಥಿತಿಯನ್ನು ಹೀಯಾಳಿಸುವುದರಲ್ಲಿ ಹೆಣ್ಣಿನ

೧) ಚದುರಂಗರ ಸಮಗ್ರ ಕಾದಂಬರಿಗಳು-ಚದುರಂಗ-ಸಂಪುಟ-೨, ಪುಟ ಸಂಖ್ಯೆ-೨೫೦

ಆಂತರ್ಯದಲ್ಲಿರುವ ಸಣ್ಣತನದ ಮುಖವಾಡದ ಪರದೆಯು ಈ ರೀತಿಯಾಗಿ ತೆರೆದುಕೊಳ್ಳುವುದು.

ಲಕ್ಷ್ಮಮ್ಮ:– ಇವಳು ಬ್ರಾಹ್ಮಣ ವರ್ಗಕ್ಕೆ ಸೇರಿದವಳು. ಇಡೀ ಕಾದಂಬರಿಯಲ್ಲಿ ರುಕ್ಮಿಣಿ ಊರು ಬಿಟ್ಟು ಹೋಗುವುದಕ್ಕೂ ಮತ್ತು ಲಕ್ಕನಿಗೆ ಪಂಚಾಯಿತಿಯಲ್ಲಿ ಗಡಿಪಾರು ಆಗುವುದಕ್ಕೆ ಮೂಲ ಕಾರಣ ಇವಳೇ. ಇವಳಿಂದ ಗುಟ್ಟು ಬಯಲಾಗುವ ಮೂಲಕ ಕಾದಂಬರಿಯಲ್ಲಿನ ಘಟನೆಗಳು ಬೇರೆ ತಿರುವನ್ನು ಪಡೆದು ಕೊಳ್ಳುತ್ತದೆ. ಓದುಗರಲ್ಲಿ ಆತಂಕವೂ ಹುಟ್ಟಿಕೊಳ್ಳುತ್ತದೆ. ರುಕ್ಮಿಣಿಯ ನಾಲ್ಕು ಗೋಡೆಯ ಒಳಗಿನ ಪ್ರಪಂಚದ ಮತ್ತೊಂದು ಅನುಭವ ಲಕ್ಷ್ಮಮ್ಮ. ತನಗೆ ಬೇಕಾದದ್ದನ್ನು ಸಾಲ ತೆಗೆದುಕೊಂಡು ಹೋಗಲು ಬರುವ ಲಕ್ಷ್ಮಮ್ಮ ರುಕ್ಮಿಣಿಗೆ ಬಿಟ್ಟಿ ಸಲಹೆಗಳನ್ನು ಕೊಟ್ಟುಹೋಗುವ ಚಾಳಿ, "ರುಕ್ಕು ಆ ಕೇಶವಯ್ಯನ ಮನೆಗೆ ವಿಶೇಷವಾಗಿ ಹೋಗಬೇಡಮ್ಮ, ನೆರೆಮನೆ ಹೆಂಗಸಿಗೆ ನೆಗೆದು ಮುತ್ತು ಕೊಡುವ ಜಾತಿ". "ಹಾಲು ಕುಡಿಯ ಬೇಡವೇ ರುಕ್ಕು ಹಾದರ ಮಾಡುವ ಹಾಗಾಗುತ್ತೆ" ಲಕ್ಷ್ಮಮ್ಮನ ಕಾಮಸಂಬಂಧವಾದ ಸಲಹೆಗಳು ಆರಂಭದಲ್ಲಿ ರುಕ್ಮಿಣಿಗೆ ಯಾವ ಸಂಬಂಧವೂ ಕಾಣಿಸುವುದಿಲ್ಲ. ಆದರೆ ಮುಂದೆ ಈ ಮಾತುಗಳು ಅವಳ ಜೀವನದಲ್ಲಿ ನಿಜವೆನ್ನುವ ಹಾಗೆ ಘಟಿಸುತ್ತಾ ಹೋಗುತ್ತದೆ. ಅವಳ ಬದುಕಿಗೆ ಮುಳ್ಳಾಗುತ್ತದೆ.

ಸುಶೀಲತ್ತೆಯ ಸಾವಿನ ಅನಂತರದಲ್ಲಿ ಹೆಣ್ಣು-ಗಂಡುಗಳ ಸಂಬಂಧಗಳ ಅರಿವನ್ನು ಬಲ್ಲ ಲಕ್ಷ್ಮಮ್ಮನಲ್ಲಿ "ಗಂಡಸು ಹೆಂಗಸು ಇಬ್ಬರೇ ಒಂದೇ ಜಾಗದಲ್ಲಿ ಹಗಲೂ ರಾತ್ರಿ ವಾಸಮಾಡಬಹುದೇ? ಸಾಕ್ಷಾತ್ ಬ್ರಹ್ಮ ದೇವ ತಾನೇ ಸೃಷ್ಟಿಸಿದ ಮಗಳು ಶಾರದೆಯಲ್ಲಿ ಮೋಹಗೊಳ್ಳಲಿಲ್ಲವೆ? ಎಂಬ ತರ್ಕವಾಗಿ ಆರಂಭವಾದದ್ದು, "ಕೃಷ್ಣಶಾಸ್ತ್ರಿಗಳು ಪ್ರಾಯದ ಹೆಣ್ಣು ರುಕ್ಮಿಣಿ ಇಬ್ಬರೇ ಒಟ್ಟಿಗಿರುವಾಗ ಎಲ್ಲವೂ ಮುಗಿದೇ ಹೋಗಿರಬೇಕು". ಎಂಬ ವಿಚಾರಗಳ ಹಂತಕ್ಕೂ ತಲುಪಿ ಬಿಡತ್ತದೆ. ಕೃಷ್ಣಶಾಸ್ತ್ರಿಗಳು ಕೂಡ ಲಕ್ಷ್ಮಮ್ಮನ ಊಹೆ ನಿಜವಾಗುವಂತೆ ನಡೆದುಕೊಂಡು ಬಿಡುತ್ತಾರೆ. ನಿರೂಪಕರೂ ಇವಳ ಮುಖಾಂತರ ಕಾದಂಬರಿಯಲ್ಲಿ ವೈಚಾರಿಕವಾದ ಆಯಾಮಗಳನ್ನು ಒದಗಿಸುವ ಪ್ರಯತ್ನ ಮಾಡಿದ್ದಾರೆ. ಗುಟ್ಟನ್ನು ರಟ್ಟು ಮಾಡುವ ಮೂಲಕ ಲಕ್ಷ್ಮಮ್ಮನ ಪಾತ್ರವೂ ರೋಚಕವೆನಿಸುತ್ತದೆ.

ರುಕ್ಮಿಣಿ ಗರ್ಭಿಣಿಯಾದಾಗ ಗರ್ಭವನ್ನು ತೆಗೆಸಲು ಔಷಧಿಯನ್ನು ತರಿಸಲು ಲಕ್ಕನ ಜೊತೆ ಮಾಡನಾಡುತ್ತಿರುವುದನ್ನು ಕೇಳಿಸಿಕೊಂಡು ಅದಕ್ಕೆ ಕಾರಣ ಲಕ್ಕನೇ ಎಂದು ಊರಿನಲ್ಲಿ ಡಂಗೂರ ಸಾರುತ್ತಾಳೆ. ಇವಳ ಕುಹಕ ಅಪಪ್ರಚಾರದ ಮುಸುಕು ಹಕಿದ ಮಾತುಗಳು ಸೂಕ್ಷ್ಮವಾಗಿ ರುಕ್ಮಿಣಿಯನ್ನು ಕತ್ತು ಹಿಸುಕಿದಂತಾಗುತ್ತಿತ್ತು. ಅಪಪ್ರಚಾರದ ಮಾತುಗಳು, ತಾನು ಒಂದು ಹೆಣ್ಣು ಎಂಬುವುದನ್ನು ಮರೆತು ಸಣ್ಣತನದ ವರ್ತನೆಯಿಂದ ಕೊನೆಗೆ ಲಕ್ಕ ಮತ್ತು ರುಕ್ಮಿಣಿಯ ಜೀವನದಲ್ಲಿ ದುರಂತವೇ ಸಂಭವಿಸುವ ಹಾಗೆ ಆಗುತ್ತದೆ. ಲಕ್ಷ್ಮಮ್ಮ ಪಾತ್ರ ಕಾದಂಬರಿಯ ಬೆಳವಣಿಗೆಯಲ್ಲಿ ಅತ್ಯಂತ ಕ್ರಿಯಾಶೀಲ, ಕ್ರಿಯಾಶಿಖರದ ಮಹತ್ವದ ಪಾತ್ರ ಎಂಬುದು ಪ್ರಾರಂಭದಲ್ಲೆ ಕಂಡು ಬರುತ್ತದೆ. ಮುಂದೆ ಲಕ್ಕ ರುಕ್ಮಿಣಿಯ ಕೇಂದ್ರ ಪಾತ್ರವಾದ ಇವರ ಬದುಕಿಗೆ ಅಂತ್ಯ, ಬೆಂಕಿ ಹಚ್ಚುವ ಕೆಲಸವನ್ನು ನಿರೂಪಕರು ಇವಳಿಂದಲೇ ಮಾಡಿಸುತ್ತಾರೆ. ಲಕ್ಷ್ಮಮ್ಮನ ಉರಿಯುವ ಬೆಂಕಿಗೆ ತುಪ್ಪ ಸುರಿಯುವ, ಹಿಂಸೆ ಅವಮಾನದ ಸ್ವಭಾವವನ್ನು ಸಹಿಸಲಾರದೆ ಊರನ್ನು ಬಿಟ್ಟು ರುಕ್ಮಿಣಿ ಹೋಗುತ್ತಾಳೆ. ಇವಳಂತ ಸಮಯ ಸಾಧಕಿಯರು ಊರಿಗೆ, ಮನೆಗೆ ಒಬ್ಬರು ಇದ್ದರೆ ಸಾಕು ಇಡೀ ಸಂಸಾರ ಊರೇ ಛಿದ್ರವಾಗುತ್ತದೆ. ಎಂಬುವುದು ಇವಳ ಪಾತ್ರದ ಮುಖಾಂತರ ವಾಸ್ತವದ ಚಿತ್ರಣಗಳನ್ನು ಕೊಟ್ಟಿರುವುದು ಸ್ಪಷ್ಟವಾಗುತ್ತಾ ಹೋಗುತ್ತದೆ.

ಲಕ್ಷ್ಮಮ್ಮನಂತಹ ಅಪ್ರಯೋಜಕ ಗುಣ ಸ್ವಭಾವವಿರುವ ಹೆಂಗಸರು ಸಂಸಾರ ಗುಟ್ಟುಗಳನ್ನು ಬಯಲು ಮಾಡಿ, ರುಕ್ಮಿಣಿಗೆ ಬಲವಾದ ಶಿಕ್ಷೆ ಆಗಬೇಕೆಂದು ಪಂಚಾಯಿತಿಯಲ್ಲಿ ವಾಧಿಸುತ್ತಾಳೆ. ರುಕ್ಮಿಣಿಯ ಘಟಶ್ರಾಧವನ್ನು ಅವಳ ಮನೆಯ ಮುಂದೆಯೇ ಮಾಡಬೇಕೆಂಬ ಸೂಚನೆಯನ್ನು ಈಕೆಯೇ ಕೊಡುತ್ತಾಳೆ. "ಛೇ, ಛೇ ಇಂಥ ಪಾಪಿಗೆ ನೀರಿರೋ ಜಾಗದಲ್ಲಿ ಕರ್ಮ ಆಚರಿಸಬಾರದು ಮನೆ ಮುಂದೆನೇ ನಡೆಸಬೇಕು". ಎಂಬ ನಿಷ್ಠೂರ ನಿರ್ಧಾಕ್ಷಿಣ್ಯವಾದ ಮಾತುಗಳಲ್ಲಿ ಅವಳ ವ್ಯಕ್ತಿತ್ವವೇನು ಎಂಬುವುದು ತಿಳಿಯುತ್ತದೆ. ಪಿತೃ ಪ್ರಧಾನವಾದ ಸಮಾಜ ಜಾತಿ ಮೂಲವೂ ಆದ ಹೆಂಗಣ್ಣಿನ ತುಳಿತವನ್ನು ಪೋಷಿಸುವ ಮೌಲ್ಯಗಳನ್ನು ಹೆಂಗಸರಲ್ಲಿ ಎಷ್ಟು ಯಶಸ್ವಿಯಾಗಿ ಬೇರೂರಿದೆ ಎಂಬುವುದನ್ನು ಲಕ್ಷ್ಮಮ್ಮನ ಈ ನಡವಳಿಕೆಯೇ ಸಾಕ್ಷಿ.

ಶ್ಯಾಮ:- ರುಕ್ಮಿಣಿ ಹುಟ್ಟಿ ಬೆಳೆದ ರುದ್ರಪಟ್ಟಣದಲ್ಲಿ ವೈಣಿಕ ಶ್ಯಾಮನೆಂದು ಚಿರಪರಿಚಿತನಾಗಿದ್ದನು. ಈತ ರುಕ್ಮಿಣಿಯನ್ನು ಪ್ರೀತಿಸುತ್ತಿದ್ದವನು. ಅಲ್ಲದೆ ಮೈಸೂರಿನಲ್ಲಿ ನೆಲೆಸಿ ಹೆಣ್ಣು ಮಕ್ಕಳಿಗೆ ವೀಣೆಯನ್ನು ಹೇಳಿಕೊಡುತ್ತಿದ್ದ. ರುಕ್ಮಿಣಿಗೂ ಕೂಡ ಇವನೇ ವೀಣೆ ಕಲಿಸಿದ್ದು. ವೀಣೆ ಕಲಿಯುತ್ತಿದ್ದ ಸಂದರ್ಭದಲ್ಲಿ ಆ ವೀಣಾನಾದದಲ್ಲಿ ಒಮ್ಮೊಮ್ಮೆ ತಲೀನನಾಗಿ ಪುಳಕಿತನಾಗುತ್ತಿದ್ದ. ಅವನ ವ್ಯಕ್ತಿತ್ವದ ಮೇಲೆ ಒಂದು ವಿಶೇಷ ಪ್ರಭೆ ಹರಡುತ್ತಿತ್ತು. ಈ ಕ್ಷಣಗಳಲ್ಲಿ ರುಕ್ಮಿಣಿ ಅವನಿಗೆ ಮನಸೋತ್ತಿದ್ದಳೂ. ಆದರೆ ಅಣ್ಣ-ಅತ್ತಿಗೆಯಿಂದ ಒಪ್ಪಿಗೆ ಸಿಗದೆ ರುಕ್ಮಿಣಿ ಅವನನ್ನು ಮದುವೆ ಆಗಲಿಲ್ಲ. ಇವಳು ಮದುವೆಯಾದರೂ ಶ್ಯಾಮ ಮಾತ್ರ ಮದುವೆಯಾಗದೆ ಕೊನೆವರೆಗೂ ಹಾಗೆ ಉಳಿದು ಬಿಡುತ್ತಾನೆ.

ಜಾನಕಿಯ ಮೇಲೆ ಅತ್ಯಾಚಾರ ನಡೆದಾಗ ಕಟುಕರಿಂದ ಕಾಪಾಡಿ ಮಾನವೀಯತೆಯಿಂದ, ಗುಟ್ಟನ್ನು ಕಾಪಾಡಿ ಒಳ್ಳೆಯ ವ್ಯಕ್ತಿತ್ವವನ್ನು ಪ್ರದರ್ಶಿಸುತ್ತಾನೆ. ಇವನ ಪಾತ್ರ ಕಾದಂಬರಿಯಲ್ಲಿ ಅಷ್ಟಾಗಿ ಕಾಣಿಸುವುದಿಲ್ಲವಾದರೂ ಕೆಲ ಸಂದರ್ಭಗಳಲ್ಲಿ ಉದಾತ್ತ ಗುಣವನ್ನು ತೋರ್ಪಡಿಸುತ್ತಾನೆ. ರುಕ್ಮಿಣಿ ವಿಧವೆಯಾದಾಗ ಅವಳನ್ನು ಮದುವೆಯಾಗಬಹುದಿತ್ತು. ಆದರೆ ಅಂತ ಪ್ರಯತ್ನವನ್ನು ಇಬ್ಬರೂ ಮಾಡುವುದಿಲ್ಲ. ಇವನು ರುಕ್ಮಿಣಿಯನ್ನು ಮದುವೆಯಾಗಿದ್ದರೆ ಕಾದಂಬರಿಯ ದಿಕ್ಕೆ ಬದಲಾಗುತ್ತಿತ್ತು. ದುರಂತದ ಬದಲು ಹೊಸ ಬದುಕಿಗೆ ಒಂದು ನೆಲೆಸಿಕ್ಕಂತಾಗುತ್ತಿತ್ತೆನೋ ಆದರೆ ನಿರೂಪಕರು ಅವನನ್ನು ಅಷ್ಟಾಗಿ ಶಕ್ತಿಯುತ ನಾಯಕನ ಪಾತ್ರವನ್ನಾಗಿ ಚಿತ್ರಿಸುವುದೇ ಇಲ್ಲ.

ಲಕ್ಕ:- ಲಕ್ಕ ದಲಿತ ಲೋಕದ ಕೇಂದ್ರಪಾತ್ರ. ವರ್ಗ-ಜಾತಿ-ಆರ್ಥಿಕವಾಗಿ ಹೀಗೆ ಹಲವು ಹಿನ್ನೆಲೆಗಳ ಶೋಷಣೆಗೆ ಏಕಕಾಲಕ್ಕೆ ಒಳಗಾಗಿರುವ ಲಕ್ಕನ ಪಾತ್ರ ಕಾದಂಬರಿಯ ಆರಂಭದಿಂದ ಹಿಡಿದು ಅಂತ್ಯದ ತನಕವೂ ಅದರ ವಿರುದ್ಧದ ಬಂಡಾಯದ ಆಯಾಮದಲ್ಲಿ ತನ್ನನ್ನು ಸ್ಥಾಪಿಸಿಕೊಳ್ಳುವುದೇ ಇಲ್ಲ ಎಂಬುವುದನ್ನು ಮುಖ್ಯವಾಗಿ ಗಮನಿಸಬೇಕು. ಪ್ರಕೃತಿಗೆ ಹತ್ತಿರವಾದ ಅವನ ಬದುಕಿನ ಆ ಪಾತ್ರವೈಖರಿಯು ಪ್ರಕೃತಿಯ ರೀತಿಯಲ್ಲಿಯೇ ನವನವೀನ ಅನುಭವಗಳಿಗೆ ತನ್ನನ್ನು ಮೌನವಾಗಿ ಶಾಂತವಾಗಿ ಒಡ್ಡಿಕೊಳ್ಳುತ್ತಾ ಮುಂದೆಮುಂದಕ್ಕೆ ಸಾಗುತ್ತಾ ಹೋಗುತ್ತದೆ. ಅವನ ಅನುಭವಗಳು ಅವನ ಪ್ರಜ್ಞೆಯೊಳಗೆ ಹಾದು ಕಾದಂಬರಿಯ ನಿರೂಪಣೆಯ ಕಾರ್ಯನಿರ್ವಹಿಸುತ್ತದೆ.

ಹರಿಜನರ ನಿಂಗಯ್ಯನ ಮಗ ಲಕ್ಕ ಬ್ರಾಹ್ಮಣ ಕೇರಿಯಲ್ಲಿ ದುಡಿಯುವಾತ. ತನ್ನ ಗಾಂಭೀರ್ಯ, ಮಾತಿನ ತೂಕ, ವಿನಯ ಮುಂತಾದ ಗುಣಗಳಿಂದ ಊರಿನ ಜನರ ಪ್ರೀತಿಗೆ ಪಾತ್ರನಾದವನು. ಬ್ರಾಹ್ಮಣ ಕೇರಿ-ದಲಿತ ಕೇರಿ ಎರಡೂ ಸ್ತರಗಳ ಮೂಲಕವೇ ತಾಯ್ತನದ ಪರಮಾವಧಿ ಮುಟ್ಟಿರುವ ಅವನ ಕಲ್ಯಾಣಿ, ಅಣ್ಣ ಗೆಜ್ಜುಗಣ್ಣ, ಕಡಿತಕ್ಕೆ ಮನಸ್ಸೋತಿರುವ ತಂದೆ ನಿಂಗಯ್ಯ, ಬಾಳುವೆಗೆಟ್ಟು ಬಂದಿದ್ದರೂ ಗಟ್ಟಿತನ ಬಿಟ್ಟು ಕೊಡದೆ ಕೊನೆಗೆ ಬದುಕಿಗಾಗಿ ರಾಜಿಮಾಡಿಕೊಂಡ ತಂಗಿ ಸಿವುನಿ, ಇವರುಗಳು ಲಕ್ಕನ ತೀರ ಹತ್ತಿರದ ಬಂಧುಗಳಾಗಿ ಕಾಣಿಸಿಲೊಳ್ಳುತ್ತಾರೆ. ಅವನ ಪ್ರೀತಿಯ ಬೆಚ್ಚನೆಯ ವಲಯ ಲಕ್ಕನ ಸುತ್ತಮುತ್ತಿನಲ್ಲಿದೆ.

ಅಲ್ಲದೆ ಲಕ್ಕನನ್ನು ಜೀತದಿಂದ ಬಿಡಿಸಿ ಶಾಲೆಗೆ ಕಳುಹಿಸಿ ವಿದ್ಯಾವಂತನನ್ನಾಗಿ ಮಾಡಬೇಕೆಂಬ ಆತನ ತಂದೆ-ತಾಯಿಯ ಆಶೆ ನೀರಿನ ಗುಳ್ಳೆಯಂತೆ ಹೊಡೆದು ಹೋಗುತ್ತದೆ. ಜೀತದಾಳಾಗಿ ಬದುಕನ್ನು ನಡೆಸಬೇಕಾಗುತ್ತದೆ. ಕೃಷ್ಣಶಾಸ್ತ್ರಿಗಳ ಮನೆಯಲ್ಲಿ ದುಡಿಯುವುದರಿಂದ ರುಕ್ಮಿಣಿಯ ಜೊತೆ ಹೆಚ್ಚಿನ ಸಲಿಗೆ. ಪತಿ ಸತ್ತ ಬೇಸರದಿಂದ ನೊಂದ ರುಕ್ಮಿಣಿ ಬಾವಿಗೆ ಬೀಳಲು ಹೋದಾಗ ಲಕ್ಕ ಕಾಪಾಡುತ್ತಾನೆ.

ದುಡಿಯಲು ಹೋದ ಬಡಪಾಯಿ ಲಕ್ಕ ಒಮ್ಮೆ ಅವಳ ಭೋಗಕ್ಕೆ ಆಕ್ರಮಣಕ್ಕೆ ಒಳಗಾಗುತ್ತಾನೆ. ಈ ಸಂದರ್ಭದಲ್ಲಿ ಅವನ ಮಾತು ಕ್ರಿಯೆ ನಿಲುವುಗಳನ್ನು ಗಮನಿಸುವುದಾದರೆ “ತನಗೆ ಮಾತೃಸ್ಥಾನದಲ್ಲಿರುವ ಅವಳ ಕೋಮಲ ಬಾಹುಗಳಗೆ ಎಲ್ಲಿ ನೋವಾದೀತೋ ಎಂದು ಆತಂಕಗೊಂಡಿದ್ದ”. ಅವಳ ಬಲತ್ಕಾರಕ್ಕೆ ಸೋತು ತನ್ನನ್ನು ಒಪ್ಪಿಕೊಂಡಿದ್ದ. ಆದರೂ ಅವನ ಬಾಯಿಯಿಂದ ಯಾಂತ್ರಿಕವಾಗಿ ಬ್ಯಾಡ ಅಮ್ಮಾವರೆ ಎಂದು ಉದ್ಗಾರ ಹೊರಡುತ್ತಲೇ ಇತ್ತು. ಲಕ್ಕನ ಈ ರೀತಿಯ ವರ್ತನೆ ಓದುಗನಿಗೆ ಆಶ್ಚರ್ಯ ಉಂಟುಮಾಡುವುದರೊಂದಿಗೆ, ಏನೂ ಮಾಡಲಾಗದ ಲಕ್ಕನ ಮುಗ್ಧ ಅಸಹಾಯಕ ಪರಿಸ್ಥಿತಿಯನ್ನು ಪ್ರತಿನಿಧಿಸುತ್ತದೆ. ಅವನ ತಪ್ಪು ಇಲ್ಲದಿದ್ದರೂ ಪ್ರತಿ ಸಂದರ್ಭದಲ್ಲಿ ಅನ್ಯಾಯ ಅವನ ಸುತ್ತವೇ ಆವರಿಸುತ್ತದೆ. ಲಕ್ಕನ ಪಾತ್ರವನ್ನು ನಿರೂಪಕರು ಉದ್ದೇಶಪೂರ್ವಕವಾಗಿಯೇ ಅವನ ಸುತ್ತ ಇಂತಹ ಘಟನೆಗಳು ನಡೆಯುವ ಹಾಗೆ

ಮಾಡಿದ್ದಾರೆ. ಇದರ ಮುಖಾಂತರ ಬದುಕಿನ ಸವಾಲುಗಳನ್ನು ಎದುರಿಸುವ ದಲಿತನ ವಾಸ್ತವ ಸ್ಥಿತಿಯು ಕಣ್ಣಿಗೆ ಕಟ್ಟುವಂತೆ ಹಿಡಿದಿಟ್ಟಿದ್ದಾರೆ.

ಅಷ್ಟೇ ಅಲ್ಲದೇ ಇವನ ಪ್ರಜ್ಞೆಯಲ್ಲಿ ಅಂದರೆ ಊರಿನ ಜನರ ದೃಷ್ಟಿಯಲ್ಲಿ ಇವನ ಸ್ಥಾನ ಹಲವು ಆಯಾಮಗಳನ್ನು ಪಡೆದುಕೊಳ್ಳುತ್ತದೆ. ಮೈಮುರಿದು ದುಡಿಯುತ್ತಾನೆಂಬ ಮತ್ತು ತಾವು ಆಡಿದ ಮಾತುಗಳು ಅವನ ಹೊಟ್ಟೆಯಲ್ಲಿಯೇ ಇಂಗಿಹೋಗುತ್ತದೆಂಬ ಕಾರಣಗಳ ಹಿನ್ನೆಲೆಯಲ್ಲಿ ಲಕ್ಕ ಊರಿನಲ್ಲಿ ಪ್ರತಿಯೊಬ್ಬರಿಗೂ ಬೇಕಾದವನಾಗಿದ್ದಾನೆ.

ಲಕ್ಕ ತನ್ನ ಕೇರಿ ಹಟ್ಟಿಯೊಳಗೆ ಪಡೆದುಕೊಳ್ಳುವ ಮತ್ತು ಹೊರಗೆ ದುಡಿಯುವ ಮೇಲುವರ್ಗದವರ ಬಳಿ ಪಡೆದುಕೊಳ್ಳುವ ಎರಡು ಬಗೆಯ ಅನುಭವಗಳು ಕಾದಂಬರಿಯಲ್ಲಿ ನಿರೂಪಕರು ಇವನ ಪಾತ್ರದಲ್ಲಿ ವಿಶೇಷವೆಂಬಂತೆ ಚಿತ್ರಿಸಿದ್ದಾರೆ. ನಂಜೇಗೌಡ, ಕೇಶವಯ್ಯ, ಕೆಂಗಣ್ಣಪ್ಪನ ಅತಿಕಾಮ, ಶಿವಾಚಾರದ ಮಠದಲ್ಲಿ ನಡೆಯುವ ಅನ್ಯಾಯ, ಕೊಳೆತುನಾರುವ ವ್ಯವಸ್ಥೆ ನೀತಿ ಬಾಹಿರ ಕಾರ್ಯಗಳು ದರುಮನಹಳ್ಳಿಯ ಎಲ್ಲಾ ವಿಷಯಗಳು ಲಕ್ಕನಿಗೆ ತಿಳಿದರೂ ತಿಳಿಯದಂತೆ ಇರಬೇಕಾಗುತ್ತದೆ. ಇದೆಲ್ಲವೂ ಅವನ ಪ್ರಜ್ಞೆಯಲ್ಲೆ ಅರಳುತ್ತಾ ಹೋಗುತ್ತದೆ. ಕಾದಂಬರಿಕಾರರು ಇವನನ್ನು ಪ್ರತಿಭಟಿಸುವಂತ ದಿಟ್ಟ ನಾಯಕನನ್ನಾಗಿ, ಭ್ರಷ್ಟರನ್ನು ಸದೆಬಡಿಯುವ ಹಳ್ಳಿಯನ್ನು ಆರೋಗ್ಯಕರ ವ್ಯವಸ್ಥೆಯನ್ನಾಗಿ ರೂಪಿಸುವ ಪಾತ್ರವಾಗಿ ಚಿತ್ರಿಸುವುದೇ ಇಲ್ಲ. ಬದಲು ದಲಿತ ಲೋಕದ ಜೀತದಾಳಾದ ಲಕ್ಕನನ್ನು ಸಾಮಾನ್ಯ ಪ್ರಪಂಚದಲ್ಲೇ ಅವನನ್ನು ಹಿಡಿದಿಡುವ ಪ್ರಯತ್ನ ಮಾಡಿದ್ದಾರೆ. ಆದರೆ ಕಾದಂಬರಿಯ ಕೆಲ ಸಂದರ್ಭಗಳಲ್ಲಿ ಅವನ ಮನಸ್ಸು, ವ್ಯಕ್ತಿತ್ವ, ಅವನ ಲೋಕ ಹೊಸ ಬೆಳಕಿನ ಸಾಧ್ಯತೆಗಾಗಿ ಅರಸುತ್ತಿರುವುದು ಕಂಡುಬರುತ್ತದೆ.

ಲಕ್ಕನ ಪಾತ್ರದ ದುರಂತದ ಮತ್ತೊಂದು ಘಟನೆಯನ್ನು ಗಮನಿಸಿದಾಗ ಆರಂಭದಲ್ಲಿ ಬೆದೆಗೆ ಬಂದಿರುವ ರುಕ್ಮಿಣಿಯ ಮನೆಯ ಹಸು ಸಿಕ್ಕ ಸಿಕ್ಕ ಹಸುಗಳ ಮೇಲೆ ಹಾರುತ್ತಿರುವಂತಹ ಸಂದರ್ಭವನ್ನು ನಿರೂಪಿಸುತ್ತದೆ. ಹಾರುವ ಹಸುವನ್ನು ಹಿಡಿಯಲು ಸಹಾಯ ಮಾಡಲು ಬರುವವನು ಲಕ್ಕ ಹಸುವಿನ ಸ್ಥಿತಿಯಲ್ಲಿರುವ ರುಕ್ಮಿಣಿ ಕೆರಳಿದ ತನ್ನ ಕಾಮದ ಹಸಿವಿಗೆ ಅವಲಂಬಿಸುವುದು ಇದೇ ಲಕ್ಕನನ್ನು. ಇವರಿಬ್ಬರ ನಡುವೆ ನಡೆದ ಆಕಸ್ಮಿಕ ಅನುಭವ ಮುಂದೆ ಇಬ್ಬರ ಬದುಕು ದಿಕ್ಕಾಪಾಲಾಗಿ ಹೋಗುತ್ತದೆ.

ರುಕ್ಮಿಣಿಯು ಗರ್ಭಿಣಿಯಾಗುವುದಕ್ಕೆ ಇವನೇ ಕಾರಣವೆಂದು ಗಡಿಪಾರು ಮಾಡುತ್ತಾರೆ. ತನ್ನದಲ್ಲದ ತಪ್ಪನ್ನು ತಾನೇ ಹೊರಲು ಸಿದ್ದನಾಗುತ್ತಾನೆ. ಎಲ್ಲಾ ಬಗೆಯ ನೋವುಗಳನ್ನು ಅನುಭವಿಸುತ್ತಾನೆ. ಲಕ್ಕ ಜಾತಿಯಲ್ಲಿ ಕೆಳವರ್ಗಕ್ಕೆ ಸೇರಿದರೂ ಕೂಡ ತನ್ನ ಆಲೋಚನೆ ಮತ್ತು ನೈತಿಕತೆಯ ದೃಷ್ಟಿಯಿಂದ ಬಹಳ ಎತ್ತರಕ್ಕೆ ನಿಲ್ಲಬಲ್ಲ ವ್ಯಕ್ತಿಯಾಗಿ ತೋರುತ್ತಾನೆ. ಭ್ರಷ್ಟವ್ಯವಸ್ಥೆಯಲ್ಲಿ ಸಿಲುಕಿ ಕೊನೆಯಲ್ಲಿ ಮಾನಸಿಕ ಸ್ಥಿರತೆಯನ್ನು ಪಡೆದು ಮುಕ್ತ ಸೂಚನೆಗಳೊಂದಿಗೆ ಅವನ ಪಾತ್ರ ಗುರಿ ತಲುಪುತ್ತದೆ. ಚದುರಂಗರು ಇವನ ಪಾತ್ರವನ್ನು ಪೂರಕವಾಗಿ ಬಳಸಿಕೊಂಡು ದಮನಕ್ಕೆ ಒಳಗಾದ ದಲಿತ ಲೋಕಕ್ಕೆ ನಿರ್ದಿಷ್ಟ ವ್ಯಾಪ್ತಿಯನ್ನು ಕಟ್ಟಿಕೊಟ್ಟಿದ್ದಾರೆ.

ಕಲ್ಯಾಣಿ:- ಇವಳು ಲಕ್ಕನ ತಾಯಿ. ಮಗನ ಮೇಲೆ ಅಪಾರ ಪ್ರೀತಿ ವಾತ್ಸಲ್ಯ ಮಮಕಾರವನ್ನು ಹೊಂದಿದವಳು. ಚದುರಂಗರು ಕಾದಂಬರಿಯಲ್ಲಿ ಇವಳ ಪಾತ್ರವನ್ನು ಸೊಗಸಾಗಿ ಚಿತ್ರಿಸಿದ್ದಾರೆ. ದಲಿತ ಲೋಕದ ತಾಯಿಯೊಬ್ಬಳ ರೋಧನೆ ಓದುಗರಲ್ಲಿ ಅಭಿಮಾನ ಮನ ಮಿಡಿಯುವಂತಿದೆ. ಮಗ ಲಕ್ಕನು ವಿದ್ಯೆಯಿಂದ ದೂರಾದಾಗ ಅವಳ ಆಸೆ ನೀರಿನ ಮೇಲಿನ ಗುಳ್ಳೆಯಂತೆ ಒಡೆದುಹೋದಾಗ ದುಃಖಿತಳಾಗಿ ಪ್ರಲಾಪಿಸುವಳು. "ಈ ಹಾಳು ದ್ಯಾವರುಗಳು ನಂಬುಕೊಂಡು ನಾವು ಕೆಟ್ರೋ?... ಎಂದು ಪ್ರಲಾಪಿಸುವಲ್ಲಿ ಸಿಟ್ಟು ಅಸಮಾಧಾನ ಪ್ರಾಮಾಣಿಕತನ ಮತ್ತು ವೈಚಾರಿಕತೆಯಿಂದ ಕೂಡಿದೆ. ಈಕೆಗೆ ಸಾಂಪ್ರದಾಯಿಕ ಮನೋಧರ್ಮದಿಂದ ಹೊರಬಂದು ಯಾರ ಮುಲಾಜಿಲ್ಲದೆ ಬದುಕುವ ಛಲವಿದೆ. ಇಲ್ಲಿನ ಪ್ರತಿಭಟನೆ ಧಾರ್ಮಿಕ ಪ್ರತಿಭಟನೆಯಾಗಿರದೆ ಇಡೀ ವ್ಯವಸ್ಥೆಗೆ ತೋರುವ ಪ್ರತಿಭಟನೆಯಾಗಿದೆ.

ಲಕ್ಕನನ್ನು ಪಾಂಡವರ ಕಂಬಕ್ಕೆ ಕಟ್ಟಿಹಾಕಿ ಛಡಿಏಟಿನ ಶಿಕ್ಷೆ ಕೊಡುತ್ತಿರುವ ಸಂದರ್ಭದಲ್ಲಿ ಹೆತ್ತ ತಾಯಿಯ ಸ್ಥಿತಿ ಚಿಂತಾಜನಕವಾಗಿದೆ. ಜಾತಿಯ ಕಾರಣಕ್ಕಾಗಿಯೆ ಏನೋ ಅಸಾಹಯಕಳಾಗುತ್ತಾಳೆ. ಮಗನಿಗಾಗುವ ಶಿಕ್ಷೆಯನ್ನು ತಡೆಯುವಲ್ಲಿ ಅವಳ ಪ್ರತಿಭಟನೆ ಮೂಕವಾಗುತ್ತಿದೆ. "ನಮ್ಮ ಪಾಡಿಗೆ ನಾವು ಸಿವನೆ ದ್ಯಾವರೆ ಅಂತ ನಮ್ಮ ಭಾಗ ನಾವು ಮಾಡಿಕತ್ತೆ ಏಣುಸಾಕ್ದ ಕಜ್ಜಾಯದಂಗೆ ಇದ್ದರೂವೆ, ನಮ್ಗೆ ತಗಲಿಕಂಡ ಉಪದ್ರಸ್ವಾ ದ್ವಾವಜಿ" ಎಂದು ಕಲ್ಯಾಣಿ ಬಿಕ್ಕುವಲ್ಲಿ ಅಗಣಿತ ಅಃತಕರಣದ ತುಡಿತವಿದೆ ಮಾತೃತ್ವದ

ತಳಮಳವಿದೆ. ಬೆಂಕಿ ಇಡುವವರ ಬಗ್ಗೆ ಬೇಸರದ ಭಾವವಿದೆಯೇ ಹೊರತು ದ್ವೇಷ, ಸೇಡಿನ ಭಾವವಿಲ್ಲ. ಇವಳ ನಿಟ್ಟುಸಿರು ಹಾಕುವಲ್ಲಿ ಬೆರಗುಗೊಳ್ಳುವಲ್ಲಿ ಮತ್ತು ಪ್ರಶ್ನಿಸುವಲ್ಲಿ ವ್ಯವಸ್ಥೆಯ ನಗ್ನ ಸತ್ಯ ಅನಾವರಣಗೊಂಡಿದೆ.

ಕಲ್ಯಾಣಿಗೆ ಸಂಬಂಧಿಸಿದಂತೆ ಗಡಿಪಾರು ಮಾಡಿದ ಲಕ್ಕನಿಗೆ ಸುಟ್ಟರೊಟ್ಟಿಯ ಬಿಸಿ ತಣ್ಣಗಾಗದಿರಲೆಂದು ಕಿಬ್ಬೊಟ್ಟೆಯೊಳಗೆ ಇಟ್ಟುಕೊಂಡು ತೆಗೆದುಕೊಂಡು ಹೋಗಿಕೊಟ್ಟು, ಅಷ್ಟಗಲ ಜಾಗವೂ ಸುಟ್ಟುಹೋಗಿದ್ದರೂ ಯಾರೊಂದಿಗೂ ಬಾಯಿಬಿಡದೆ ತೆಗೆದುಕೊಂಡು ಹೋಗುವ ಈ ಚಿತ್ರಣ ಕಾದಂಬರಿಯಲ್ಲಿ ಸೊಗಸು ತುಂಬಿರುವ ಭಾಗವಾಗಿದೆ. ಪ್ರಾರಂಭದಿಂದ ಹಿಡಿದೂ ಅಂತ್ಯದವರೆಗೂ ಪ್ರತಿಪಾತ್ರಗಳಲ್ಲೂ ಅಸಮಧಾನ ಮೂಡಿಸುವ ಚದುರಂಗರು ಕಲ್ಯಾಣಿಯನ್ನು ಮಾತ್ರ ಕೊನೆತನಕವೂ ಆಕೆಯ ಪಾತ್ರಕ್ಕೆ ಯಾವ ಧಕ್ಕೆಯು ಬರದ ಹಾಗೆ ಕರುಳು ಮಿಡಿಯುವ ಹಾಗೆ ನಿರೂಪಿಸಿದ್ದಾರೆ. ಅಸದೃಶವಾತ್ಸಲ್ಯ, ಹೆತ್ತಕರುಳಿನ ಮಮಕಾರ, ಕಾಳಜಿ ಬೆರೆತಿರುವುದು ಕಾದಂಬರಿಯಲ್ಲಿ ಇಂಥ ಅಪರೂಪದ ಪಾತ್ರವೂ ಎಲ್ಲಾ ಕಾಲಕ್ಕೂ ಜೀವಂತ ಎಂಬುವುದನ್ನು ಸಾಬೀತು ಪಡಿಸಿದ್ದಾರೆ.

ನಿಂಗಯ್ಯ:- ಇವನು ದಲಿತವರ್ಗಕ್ಕೆ ಸೇರಿದ ಲಕ್ಕನ ತಂದೆ. ಬ್ರಾಹ್ಮಣರ ಗೌಡರ ಕೇರಿಯಲ್ಲಿ ಜೀತದಾಳಾಗಿ ದುಡಿಯುವಾತ ಮಗ ಗೆಜ್ಜುಗಣ್ಣನಿಗೆ ಮದುವೆ ಮಾಡಬೇಕು, ಲಕ್ಕನಿಗೆ ಶಿಕ್ಷಣ ಕೊಡಿಸಬೇಕೆಂಬ ಆಸೆ ಕಮರಿಹೋಗುತ್ತದೆ. ಅವರನ್ನು ಜೀತದಿಂದ ಬಿಡಿಸುತ್ತಾನೆ. ಕೊನೆಗೆ ಅವನೇ ಮೇಲ್ವರ್ಗದವರ ಜೀತದಾಳಾಗಬೇಕಾಗುತ್ತದೆ. ಗೆಜ್ಜುಗಣ್ಣನ ದುರಂತದ ಸಾವಿನಿಂದ ಕುಡಿತಕ್ಕೆ ಒಳಗಾಗುತ್ತಾನೆ. ಮಗಳು ಸಿವುನಿಯ ಬಾಳು ಹಾಳಾಗಿದ್ದಕ್ಕೆ ಮರುಗುತ್ತಾನೆ. ಲಕ್ಕನನ್ನು ಪಾಂಡವರ ಕಂಬಕ್ಕೆ ಕಟ್ಟಿಹಾಕಿ ಶಿಕ್ಷೆ ನೀಡುವ ಸಂದರ್ಭದಲ್ಲಿ ಏನೂ ಮಾಡಲಾಗದೆ ಅಸಾಹಯಕತೆಯಿಂದ ಪ್ರತಿಭಟಿಸಲಾಗದೆ ನೊಂದುಕೊಳ್ಳುತ್ತಾನೆ. ಜಾತಿಯಿಂದ ಹಿಂದುಳಿದ ಪಾತ್ರವಾಗಿ ಕಂಡುಬಂದು ಮೇಲ್ವರ್ಗದವರ ಗುಲಾಮನಾಗಿ ಬದುಕು ಸಾಗಿಸುವ ಪಾತ್ರವಾಗಿ ಕಾಣುತ್ತಾನೆ.

ಗೆಜ್ಜುಗಣ್ಣು:- ಇವನು ಲಕ್ಕನ ಪ್ರೀತಿಯ ಅಣ್ಣ. ನಿರೀಕ್ಷಿಸಲಾಗದ ದುರಂತದ ಸಾವನ್ನು ಹೊಂದಿದವನು. ಇವನು ತನ್ನ ತಮ್ಮ ಲಕ್ಕ ಕಲಿತು ಮುಂದೆ ಬರಲೆಂದು ಅತಿಯಾದ ಆಸೆಯನ್ನು ಹೊಂದಿದವನು. ಗೆಜ್ಜುಗಣ್ಣನ ಮದುವೆ ಮತ್ತು ಲಕ್ಕನನ್ನು ಶಾಲೆಗೆ

ಕಳಿಸಬೇಕೆನ್ನುವ ಆಸೆಯಿಂದ, ತಂದೆ-ತಾಯಿ ಬುಂಡಮ್ಮನ ಹಟ್ಟಿಯ ಜೀತದಿಂದ ಬಿಡಿಸಲೆಂದು ಕೆಂಗಣ್ಣಪ್ಪನಿಂದ ಆರೂನೂರು ರೂಪಾಯಿ ಸಾಲ ತರುತ್ತಾರೆ. ಒಮ್ಮೆ ಕೆಂಗಣ್ಣಪ್ಪನ ಒತ್ತಾಯಕ್ಕೆ ತಲಕಾಡಿಗೆ ಹೋಗಿ ಈಜುವ ಉತ್ಸಾಹದಲ್ಲಿ ಕಾವೇರಿಯಲ್ಲಿ ಜಲಸಮಾಧಿಗೊಳ್ಳುವ ದುರಂತದ ಪಾತ್ರವಾಗಿ ಕಂಡುಬರುತ್ತಾನೆ. ಮಾಡಿದ ಸಾಲ ಇವನ ಅಂತ್ಯ ಸಂಸ್ಕಾರದ ಖರ್ಚಿಗೆ ಆಗಿ, ಕೊನೆಗೆ ತಂದೆಯೇ ಜೀತಕ್ಕೆ ನಿಲ್ಲುವ ಪ್ರಸಂಗ ಬರುತ್ತದೆ. ಗೆಜ್ಜುಗಣ್ಣ ನದಿ ಎಂದೊಡನೆ ದುಮುಕುವ ವೈಯಕ್ತಿಕ ಜವಾಬ್ದಾರಿ ಮತ್ತು ಇದನ್ನು ಮೀರಿದ ಮನುಷ್ಯನ ದುರಂತದಲ್ಲಿ ಪಾಲುಗೊಳ್ಳುವ ನಿಸರ್ಗದ ನಿಗೂಢತೆ ಕಾದಂಬರಿಯಲ್ಲಿ ಗೆಜ್ಜುಗಣ್ಣನ ಸಾವು ಮತ್ತು ನಿಂಗಯ್ಯನ ಕುಟುಂಬದ ದುರಂತವನ್ನು ಅದರ ಸಂಕೀರ್ಣ ಸ್ವರೂಪದಲ್ಲಿ ತೋರುತ್ತದೆ.

ಸಿವುನಿ:- ಇವಳು ಲಕ್ಕನ ತಂಗಿ. ಮದುವೆಯಾಗಿ ಸರಿಯಾಗಿ ಬಾಳುವೆ ನಡೆಸಲಾಗದೆ ತವರಿಗೆ ಬಂದು ಸೇರುತ್ತಾಳೆ. ಆದರೂ ಗಂಡನೊಡನೆ ಹೊಂದಿಕೊಂಡು ಹೋಗುವ ಸ್ವಭಾವದ ಪಾತ್ರವಾಗಿ ಕಂಡುಬರುತ್ತಾಳೆ. ಸಿವುನಿ ಗಂಡನ ಅನಾಚಾರ, ಅತ್ಯಾಚಾರವನ್ನು ಸಹಿಸಿಕೊಂಡು ಭಾರತೀಯ ಕೌಟುಂಬಿಕ ಚೌಕಟ್ಟನ್ನು ಮೀರದ ಆತನ ಜೊತೆಯಲ್ಲಿ ಬದುಕು ಬಯಸುವಳು, ಅವಳ ಪ್ರೀತಿ ಮತ್ತು ವಿಶ್ವಾಸಕ್ಕೆ ಧಕ್ಕೆವುಂಟಾದಾಗ ಹಾಗೂ ಪವಿತ್ರವಾದ ದಾಂಪತ್ಯ ಸಂಬಂಧಕ್ಕೆ ಅವಳ ಗಂಡ ದ್ರೋಹ ಬಗೆದಾಗಲೂ ಗಂಡಕೊಡುವ ಕಷ್ಟಗಳನ್ನು ಸಹಿಸಿಕೊಂಡು ಬದುಕುವಳು. ಆದರೆ ಯಾವಾಗ ಅವಳ ಗಂಡ ಮಿಂಡಾಗಾತಿಯನ್ನು ತಂದು ಮನೆಯಲ್ಲಿ ಇಟ್ಟುಕೊಳ್ಳುವನೋ ಆಗ ಸಿವುನಿ ತನಗಾದ ಅನ್ಯಾಯವನ್ನು ಪ್ರತಿಭಟಿಸುವಳು. 'ಆವಯ್ಯಾ ತನ್ನಾಟ ಬುಡನಲ್ಲ, ವಯಸ್ಸಾದ ಎಣ್ಣಗಳೆನೋ ವೋಗ್ಲಿ ಅಂದ್ರೆ, ಇನ್ನೂವಿ ವಯಸ್ಸಿಗೆ ಬರದಿರಾ ಎಣ್ಣುಗಳ ಲಂಗದ ಮ್ಯಾಲೂ ಅವಯ್ಯಾ ಕಣ್ಣು ಓಡಾಡುದ ಕಂಡು ನಂಗೆ ಸೈಸನಿಲ್ಲ, ಅದ್ನೂ ನಾ ಸೈಸಿಕಂಡಿ, ಆದ್ರೆ ಆ ಮಿಂಡಾಗಾತಿ ಕಯ್ಯಗೆ ನಮ್ಮಟ್ಟಿವಗುತನಯೆಲ್ಲಾ ನೊವಿ ಕ್ವಟ್ಟು ಅವಳ ಜತಿಗಾತಿ ಮಾಡಕ್ಕೆ ಯತ್ನಮಾಡ್ದಾಗ ಮಾತ್ರ, ನನ್ನ ಆತುಮಕ್ಕೆ ವಗ್ಗವಿಲ್ಲ... ಅಲ್ಲಿಂದ ಕಡದು ಬಂದಿ... ಎನ್ನುವಲ್ಲಿ ಸಿವುನಿಯ ಅಧಿಕೃತವಾದ ಹೆಣ್ತನದ ಧ್ವನಿಯಿದೆ.

ಈ ಮೂಲಕ ಸಿವುನಿಯ ಸ್ವಾಭಿಮಾನದ ಜಾಗೃತವಾಗಿ ತನ್ನ ಆತ್ಮಗೌರವವನ್ನು ಕಾಯ್ದುಕೊಳ್ಳಲು ಗಂಡನನ್ನು ತ್ಯಜಿಸುವಳು, ಪಾರಂಪರಿಕ ಮದುವೆಯಂತಹ ಸಾಮಾಜಿಕ ಮೌಲ್ಯವನ್ನು ರಾಜಿಮಾಡಿಕೊಂಡು ಬದುಕುವ ಸಿವುನಿ ಅದೇ ಪರಂಪರೆಯ ಒಡಲಿನಲ್ಲಿರುವ ದ್ವಿಸ್ತರದ ನೀತಿಯ ಪಾಶಕ್ಕೆ ಸಿಕ್ಕಿಹಾಕಿಕೊಳ್ಳದೆ ಆ ಪಾಶವನ್ನು ಹರಿದು ಸ್ವತಂತ್ರವಾಗಿ ಬದುಕುವ ಆಶಯದಲ್ಲಿ ಪ್ರತಿಭಟನೆಯಿದೆ.

ಅಲ್ಲದೆ ಮತ್ತೊಂದು ಸನ್ನಿವೇಶವನ್ನು ಹೇಳುವುದಾದರೆ ಕೇಶವಯ್ಯ ಸಿವುನಿಗೆ ಸೀರೆಯನ್ನು ಕೊಡಿಸುವ ಉದಾರತೆಯನ್ನು ತೋರಿಸಿದಾಗ ಸಿವುನಿ ಆತನ ಕಾಮಚಪಲ, ದುರಾಸೆಯನ್ನು ಅರಿತುಕೊಂಡು ಆತನ ಸಹಾಯವನ್ನು ತಿರಸ್ಕರಿಸುವಳು. ಸಿವುನಿ ತಿರಸ್ಕಾರದಲ್ಲಿ ಮಾನವೀಯತೆಯ ಮುಖವಾಡವನ್ನು ಧರಿಸಿಕೊಂಡು ಅಮಾನವೀಯತೆಯಿಂದ ವರ್ತಿಸುವವರ, ಬಡವರ ಅಸಾಹಯಕತೆಯನ್ನು ದುರುಪಯೋಗಪಡಿಸಿಕೊಳ್ಳುವವರ ವಿರುದ್ಧ ಪ್ರತಿಭಟನೆಯಿದೆ.

ಶ್ರೀಮಂತರ ಕೃಪೆಯ ಆಶ್ರಯದಲ್ಲಿ ಗುಲಾಮರಾಗಿ ಬದುಕದೆ ಸ್ವತಂತ್ರವಾಗಿ ಮರ್ಯಾದೆಯಿಂದ ಬದುಕಬೇಕೆಂಬ ಆಶಯವಿದೆ. ಆದರೆ ಸ್ವತಂತ್ರವಾಗಿ, ನೈತಿಕವಾಗಿ ಸ್ವಾಭಿಮಾನದಿಂದ ಮತ್ತು ಧೈರ್ಯದಿಂದ ಬದುಕಬೇಕೆಂಬ ಸಿವುನಿಯ ಆಸೆ ಕೇಶವಯ್ಯನ ಹಾಸಿಗೆಯಲ್ಲಿ ಚುಚ್ಚುವ ಮುಳ್ಳಾಗಿ ಪರಿಣಮಿಸುವಲ್ಲಿ ವ್ಯವಸ್ಥೆಯ ವಿಪರ್ಯಾಸವಿದೆ. ಬದುಕನ್ನು ವ್ಯಂಗ್ಯವನ್ನಾಗಿ ಅನುಭವಿಸಿದ ಮತ್ತು ಅನ್ನಕ್ಕಾಗಿ ಜರ್ಜತಳಾದ ಸಿವುನಿ ಹಸಿವಿನಿಂದ ಸಾಯಲು ಇಚ್ಚಿಸದೆ, ಅನಿವಾರ್ಯವಾಗಿ ಕೇಶವಯ್ಯನಿಗೆ ಬಲಿಯಾಗುತ್ತಾಳೆ. ಇಲ್ಲಿ ರುಕ್ಮಿಣಿಯಂತಹ ಉತ್ತಮ ಜಾತಿಯವರಿಗೆ ಕಾಮ ಮುಖ್ಯವಾದರೆ, ಸಿವುನಿಯಂತಹ ಬಡವರಿಗೆ ಹಸಿವು ಮುಖ್ಯವಾಗುತ್ತದೆ. ಪರಂಪರೆಯ ಸಂಸ್ಕೃತಿಗೆ ಸಾವಾಲಾಗಿ ನಿಲ್ಲುವ ಪಾತ್ರವಾಗಿ ಕಂಡುಬರುತ್ತಾಳೆ.

ಬುಂಡಮ್ಮ:– ಬ್ರಾಹ್ಮಣೇತರಳಾದ ಇವಳ ಊರಿನಲ್ಲಿ ಏನೇ ಅನ್ಯಾಯ ನಡೆದರೂ ನ್ಯಾಯ ರೀತಿಯಲ್ಲಿ ಪ್ರಶ್ನಿಸಿ ಟೀಕೆ ಮಾಡುವವಳು. ಇದ್ದ ಒಬ್ಬ ಮಗನಿಗೆ ಮದುವೆ ಮಾಡುತ್ತಾಳೆ. ಸರಿಯಾಗಿ ಸಂಸಾರ ಮಾಡುವುದಕ್ಕೆ ಅರ್ಹನಲ್ಲ ಎಂದು ತಿಳಿದು ಸೊಸೆ ಅವನಿಂದ ದೂರವಿರುತ್ತಾಳೆ. ಇದರಿಂದ ತನ್ನ ಸೊಸೆ ಹಾದರ ಮಾಡುವಳೆಂದು

ಬೇಸರಗೊಳ್ಳುತ್ತಾಳೆ. ಎಂಥಾ ವಿಚಾರವನ್ನು ಸಂದರ್ಭಕ್ಕೆ ಅನುಸರಿಸಿಕೊಂಡು ಹೋಗುವ ಪಾತ್ರವಾಗಿದ್ದಾಳೆ. ಲಕ್ಕ ಇವಳ ಕುರಿಗಳನ್ನು ಕಳೆದು ಹಾಕಿದಾಗಲೂ ಅಷ್ಟೇ ಅವನಿಗೆ ಶಿಕ್ಷೆಯನ್ನು ನೀಡದೆ ಪರಿಸ್ಥಿತಿಯನ್ನು ಅರ್ಥಮಾಡಿಕೊಂಡು ಸುಮ್ಮನಾಗುತ್ತಾಳೆ.

ಸ್ಥಿತ ಪ್ರಜ್ಞಳು ಎನ್ನುವಂತಿರುವ ಬುಂಡಮ್ಮ ಲಕ್ಕನಿಗೆ ಒಂದೆಡೆ ಬುದ್ಧಿ ಹೇಳುತ್ತಾಳೆ. "ಗುಟಿಕಿದ್ರೆ ಮಿಟುಕು ಮಿಟುಕಿದ್ರೆ ಮಿಂಡಾಟ, ಕಾಣದೆ ಮಾಡಿದ್ದಾರೆ ಇರೀಕರು ಗಾದ್ಯ? ಮೊದಲು ವೊಟ್ಟೆಗೆ ಇಟ್ಟು ಅದರ ಮುಂದ್ಕೆ ನಿನ್ನ ಓಡಾಟ ಪಾಡಾಟಯೆಲ್ಲಾ..." ತನ್ನ ಎಮ್ಮೆಗಳು ಹುಲಿಪಾಲಾಗಲಿ ಸೊಸೆ ಕಂಚುಗಾರ ಸಾಬಿ ಜೊತೆ ಓಡಿಹೋಗಲಿ, ಬುಂಡಮ್ಮ ಸಮಚಿತ್ತತೆಯನ್ನು ಕಳೆದುಕೊಳ್ಳುವುದಿಲ್ಲ. "ಲೌಡಿ ವೋದರೊಯ್ತಳೆ ಬುಡೊ ಲಕ್ಕ, ಅವ್ನು ವೋದರೆ ನಮ್ಮಟ್ಟಿ ಇಟ್ಟಿನ ಮುದೇ ಉಳೀತಾನ" ಎಂದು ಸಮಾಧಾನ ಮಾಡಿಕೊಳ್ಳುತ್ತಾಳೆ.

ಅದೇ ಬುಂಡಮ್ಮನ ಸೊಸೆ ಆಡುವ ಮಾತನ್ನು ಗಮನಿಸಿದರೆ "ಇಲ್ಲೆನು ಊಟದ ಸುಕವಾ? ನ್ಯಾಟದ ಸುಕವಾ? ಇಲ್ಲ ವೋಗ್ಲೀಂದ್ರೆ ಆಸಿಗೆ ಸುಕವಾ? ಎಮ್ಮೆ ತಿಕ ತೊಳದು, ಗಂಜಳ ಸೀಟಿ, ತ್ವಪ್ಪೆ ಬಾಚ್ತಾ ಬಿದಿರಕ್ಕಾ ಅಟ್ಟಿಗೆ ಲಗ್ನ ಆದದ್ದು?" ಎಂದು ಉತ್ತರಿಸುವಲ್ಲಿ ಸಾಂಪ್ರದಾಯಿಕ ಮನೋಧರ್ಮವನ್ನು ಹಾಗೂ ನೈತಿಕ ಸ್ತರದ ನಿಲುವನ್ನು ವಿರೋಧಿಸುವ ಪ್ರತಿಭಟನೆ ಇದೆ. ಬುಂಡಮ್ಮ ಸೊಸೆ ಸುತ್ತ ಭದ್ರವಾದ ಚಿತ್ರ ಮೂಲ ಕ್ವಾಟೇಸಿ" ಕಟ್ಟುವ ಬಗ್ಗೆ ಮೆಚ್ಚುಗೆ ಕಡಿಮೆ ಆಗುವುದಿಲ್ಲ. ಸೊಸೆ ಬಗ್ಗೆ ಮೆಚ್ಚುಗೆಯೂ ಮೂಡುವುದಿಲ್ಲ, ಬುಂಡಮ್ಮ ಜೀವಿಸಲು ಅಗತ್ಯವಾದಷ್ಟೇ ಗುಟುಕು ಬೇಕೆನ್ನುತ್ತಾಳೆ.

ಗಂಗೆ:– ಇವಳು ನಂಜೇಗೌಡನಿಂದ ಶಿವಾಚಾರದ ಮಠದಲ್ಲಿ ಶೋಷಣೆಗೆ ಒಳಗಾಗುವವಳು. ಒಂದು ಸಂದರ್ಭದಲ್ಲಿ ಲಕ್ಕ ತನ್ನನ್ನು ತಬ್ಬಿ ಬಲತ್ಕರಿಸಿದನೆಂದು ತಾನೇ ಮಾಡಿದ ತಪ್ಪನ್ನು ಅವನ ಮೇಲೆ ಹಾಕಿ ಅವಮಾನ ಮಾಡುತ್ತಾಳೆ. ಒಮ್ಮೆ ಪಂಚಾಯಿತಿದಾರರ ಆಜ್ಞೆಯಂತೆ ಲಕ್ಕ ಗಂಗೆಯ ಮನೆಗೆ ಬಂದು ಕೂಗುತ್ತಾನೆ. ಅವಳಿಗೆ ಕೇಳಿಸಲಿಲ್ಲವೆಂದು ಪಡಸಾಲೆಗೆ ಹೆಜ್ಜೆ ಇಟ್ಟು ಇನ್ನೊಮ್ಮೆ ಕೂಗಬೇಕೆನ್ನುವಷ್ಟರಲ್ಲಿ ಹೊರಹೋಗಿದ್ದ ಗಂಗೆ ಬಂದು "ನಿನಗೆಷ್ಟು ಧಿಮಾಕು?" ಪಡಸಾಲೆ ಒಳೀಕೆ ಬಂದಿದ್ದೀಯಾ? ಎಂದು ದಿಟ್ಟಿಸಿ ಕೇಳುವ ಅವಳ ಮಾತಿನ ಹಿಂದೆ ಜಾತಿ ಮನೋಭಾವ ಇರುವುದು ಕಂಡುಬರುತ್ತದೆ.

ಇದೇ ಗಂಗೆಯನ್ನು ನಂಜೇಗೌಡ ಶಿವಾಚಾರದ ಮಠಕ್ಕೆ ಕರೆದ್ಯೋದು ಮೂರು ನಾಲ್ಕು ಬಾರಿ ಬಸುರು ಇಳಿಸುವಂತೆ ಮಾಡುತ್ತಾನೆ. ಆದರೆ ಪಂಚಾಯಿತಿಯಲ್ಲಿ ಇವಳಿಗೆ ಯಾವ ನ್ಯಾಯವೂ ಸಿಗುವುದೇ ಇಲ್ಲ. ಲಕ್ಕನನ್ನು ನಿಂದಿಸಿ, ಹೆದರಿಸಿ ಇಲ್ಲದ ಆರೋಪವನ್ನು ಹೊರಿಸಿದಾಗ ಇರುವ ಧೈರ್ಯ, ಸೊಕ್ಕು ತಾನೇ ಅನ್ಯಾಯಕ್ಕೆ ಒಳಗಾದಾಗ ತನ್ನನ್ನು ಕಾಪಾಡಿಕೊಳ್ಳುವ ಶಕ್ತಿ ಇಲ್ಲವಾಗುವ ಪಾತ್ರವಾಗಿ ಕಾಣಿಸುತ್ತಾಳೆ.

ಕೆಂಗಣ್ಣಪ್ಪ:- ಇವನು ಮಧ್ಯಮ ವರ್ಗಕ್ಕೆ ಸೇರಿದವನು. ದರುಮನಹಳ್ಳಿಯಲ್ಲಿ ಅತಿಕಾಮಕ್ಕೆ ಒಳಪಟ್ಟವನು. ಕಂಡ ಕಂಡ ಹೆಣ್ಣುಗಳ, ಗಂಡುಗಳ ಮೂಲಕ ತನ್ನ ಕಾಮದೆಸೆ ತೀರಿಸಿಕೊಳ್ಳುವ ಇವನು ತನ್ನ ಗಂಡಸುತನವನ್ನು ಕಳೆದುಕೊಳ್ಳುವಷ್ಟು ಅತಿಲೋಪನಾಗಿರುವವನು. ಅವನು ತನ್ನ ಪುರುಷತ್ವವನ್ನು ಕಳೆದುಕೊಂಡು ಪುರುಷರತ್ನವನ್ನು ಹುಡುಕುವ ಸಂದರ್ಭ ಬರುತ್ತದೆ. ಇದೇ ಸಂದರ್ಭದಲ್ಲಿ ನೀಲಂಗಾಲದ ಮಾದೇವಪ್ಪ ಮತ್ತು ಅವರ ಹೆಂಡತಿ ಬಸಮ್ಮ 'ಅವರ ಮೂರನೆಯ ಎಣ್ಣು, ಕೆಂಪಿ ಋತುಮತಿಯಾದ್ದರಿಂದ ಅವನ ಹೊಸ ರಕ್ತವನ್ನು ಹೊಲದಲ್ಲಿ ಚುಮುಕಿಸುತ್ತಾನೆ. ಅದನ್ನು ನೋಡುತ್ತ ನಡೆದ ಅದೇ ಕೆಂಗಣ್ಣಪ್ಪ ಲಕ್ಕನೊಡನೆ ಹೇಳುವ ಮಾತನ್ನು ನೆನೆಯಬೇಕು. "ಈ ಮಕ್ಕಳಿಗೊಂದು ಬ್ರಾಂತು.. ಅದೊಂದು ಬಂಜರು ಭೂಮಿ ಇವರು ಅದೇಸು ಹೊಸ ರಕ್ತ ತಂದು ನೀರಿಗೆ ಬೆರುಸಿ ವೊಲಕ್ಕೆಲ್ಲ ತಕ್ಕಳಿಸುದ್ರುವೆ ನೆಲ ಫಲವತ್ತಾಕ್ಕಿಲ್ಲ, ಉತ್ತಮವಾದ ಫಲಿತ ಕ್ವಡಲ ಅವನ ಮಾತಿನಲ್ಲಿ ಆ ನೆಲದ ಬಂಜೆತನದ ಪ್ರಸ್ತಾಪ ಬರುತ್ತದೆ.

ಕಂಡ ಕಂಡ ಹೆಣ್ಣುಮಕ್ಕಳ ತಿಕಮೂಸುತ್ತ ತನ್ನ ಪುರುಷತ್ವ ಕಳೆದುಕೊಂಡು ಕೊನೆಗೆ ತನ್ನ ಹರಾಮಿ ಹೆಂಡತಿ ತನ್ನೆದರೇ ಹಾದರ ಮಾಡುತ್ತಿದ್ದರೂ ದಂಡಿಸುವನು. ದಮ್ಮಿಲ್ಲದೆ ಹಲ್ಲು ಕಿತ್ತ ಹಾವಿನಂತೆ ಕಾಲಕಳೆಯುವನು. ಅಲ್ಲದೆ ಗೆಜ್ಜುಗಣ್ಣಿನ ದುರಂತ ಸಾವಿಗೆ ಪರೋಕ್ಷವಾಗಿ ಇವನೇ ಕಾರಣನಾಗುತ್ತಾನೆ. ಕೆಂಗಣ್ಣಪ್ಪ "ಮನುಷ್ಯನ ರಕ್ತದ ರುಚಿ ಪಾಟಾದ ಹುಲಿ" ಎಂದು ಗುರುತಿಸಿಕೊಂಡವನು. ಬೆಟ್ಟಯ್ಯ ಚಿಕ್ಕೀರಮ್ಮ ಇರುವವರೆಗೂ ಅವಳ ಸಂಗ ಸುಖಪಟ್ಟು ಕೊನೆಗೆ ಅವಳ ಹೆಣದ ಹೆಬ್ಬೆಟ್ಟು ಗುರುತು ಪಡೆದು ಆಸ್ತಿ ಲಪಟಾಯಿಸುವ ಮೋಸದ ವ್ಯಕ್ತಿ. ದುರುಮನಹಳ್ಳಿಯಲ್ಲಿ ಕೊಳೆತು ನಾರುವ ವ್ಯವಸ್ಥೆಯನ್ನು ಹುಟ್ಟುಹಾಕುವ ಪಾತ್ರಗಳಲ್ಲಿ ಇವನು ಒಬ್ಬನಾಗಿದ್ದಾನೆ.

ನಂಜೇಗೌಡ:- ಇವನು ಕಾದಂಬರಿಯಲ್ಲಿ ಒಡೆದು ಕಾಣುವ ಪಾತ್ರ. ಹೆಸರೇ ಸೂಚಿಸುವಂತೆ ನಂಜಿನವನು, ಊರಿನಲ್ಲಿ ಪ್ರಮುಖನಾದವನು. ತನ್ನನ್ನು ಅನೈತಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ಊರಿನ ಜನರ ಮುಂದೆ ಸಾಚಾತನದಿಂದ ರಾಜಾರೋಶವಾಗಿ ಬಾಳುವೆ ನಡೆಸುವವನು. ಗಂಗಿಯ ಮೇಲೆ ಕಣ್ಣಿಟ್ಟು ಗಂಡನಿಲ್ಲದವನೆಂದು ಅವಳನ್ನು ಹೆದರಿಸಿ ಮಠಕ್ಕೆ ಕರೆದೊಯ್ದು ಮೂರು-ನಾಲ್ಕು ಬಾರಿ ಬಸುರು ಇಳಿಸಿಕೊಳ್ಳುವಂತೆ ಮಾಡಿದ್ದನು. ಅಲ್ಲದೆ ಆಕೆಯನ್ನು ಮುಟ್ಟಾಗಿರುವಾಗ ಪಂಚಾಯಿತಿಗೆ ಎಳೆದು ನಿಲಿಸುವ ಹೊಟದ ನೇತಾರನಾಗುತ್ತಾನೆ. ಆದರೂ ಪಂಚಾಯಿತಿಯ ಮೂಲಕ ಆಗುವ ಶಿಕ್ಷೆಯಿಂದ ಪಾರಾಗುತ್ತಾನೆ.

ಲಕ್ಕನ ವಿಷಯದಲ್ಲಿ ಮಾತ್ರ ಅವನಿಗೆ ಶಿಕ್ಷೆ ಆಗಲೇಬೇಕು ಎಂಬ ಕಠೋರ ಕ್ರೂರ ಅಮಾನವೀಯ ವ್ಯಕ್ತಿತ್ವವನ್ನು ತೋರಿಸುತ್ತಾನೆ. ಒಮ್ಮೆ ಆಟದಲ್ಲಿ ಸರಸಿ ಗೆದ್ದು ರುಕ್ಮಿಣಿಯನ್ನು ತಬ್ಬಿಕೊಂಡಾಗ, ಇವಳು ಸರಸಿ ತುಟಿಗೆ ಮುತ್ತು ಇಟ್ಟಿದ್ದನ್ನು ಕಂಡು ಕುಹಕವಾಗಿ ನಗುತ್ತಾ "ಮಕ್ಕಳ ತುಟಿಗೆ ಮುತ್ತಿಟ್ಟಂಗೆ ಅಂತಾವ ಮೊದ್ಲ ಗಾದೆಯೊಳಕ್ಕಿಲ್ಲ? ಅವರಾಗ್ಯಾವ ರುಚಿ ಇದ್ದರು"? ಎಂದು ಕಾಮುಕ ಭಾವನೆಯಿಂದ ಮಾತಾಡುತ್ತಾನೆ.

ಇವನು ತನ್ನ ಹೆಂಡತಿಯ ಗೋರಿಯನ್ನು ರಾತ್ರಿಯಲ್ಲಿ ಅಗೆದು ನಗ್ನ ಶರೀರದ ಮೇಲಿರುವ ಒಡವೆಗಳನ್ನು ಅಪಹರಿಸುತ್ತಾರೆ. ರುಕ್ಮಿಣಿ ಮತ್ತು ದ್ಯಾವಾಜಮ್ಮನವರು ಇವನ ಬಗ್ಗೆ ಹೇಳುವ ಮಾತು ಹೀಗಿದೆ: "ಹೆತ್ತ ತಾಯಿ ಲಾಡಿ ಬಿಚ್ಚೊ ಬಡ್ಡಿಹೈದ" "ನೂರೊಂದು ಗೋವ ತಿಂದ ಹುಲಿ" ಎಂದು ಅವನ ನೀಚವರ್ತನೆಯನ್ನು ಕುರಿತು ಆಡಿಕೊಳ್ಳಿತ್ತಾರೆ. ಅಲ್ಲದೆ ಗುಡ್ಡದ ಕಟ್ಟಿಗೆ ಕದಿಯುವುದು, ತನಗೆ ವಿರೋಧವಾದರೆ ಊರಿಗೆ ಊರನ್ನು ಹೊತ್ತಿಸಿ ಬೇಯಿಸುವಂಥವನು. ಒಟ್ಟಿನಲ್ಲಿ ಮಹಾಕಿತಾಪತಿ ಪಾತ್ರವಾಗಿ ಕಾಣಿಸಿಕೊಳ್ಳುತ್ತಾನೆ. ಊರಿನ ಸ್ವಾಸ್ಥ್ಯ ಹಾಳುಮಾಡುವಲ್ಲಿ ಇವನ ಕೈವಾಡವು ಅತಿರೇಕವಾಗಿದೆ.

ಕೇಶವಯ್ಯ:- ಇವನು ಗೋಸುಂಬೆ ನೀತಿವಂತ. ಕಾಮುಕ ವ್ಯಕ್ತಿತ್ವದವನು. ನೋಡುವಾತ. ರುಕ್ಮಿಣಿಯ ಜೊತೆ ಕೂಡ ಕೆಲ ಸಂದರ್ಭದಲ್ಲಿ ಅಶ್ಲೀಲವಾಗಿ ಮಾತನಾಡುತ್ತಾ ಸಮಯ ಸಿಕ್ಕಾಗಲೆಲ್ಲಾ ನೆಪ ತೆಗೆದು ಅವಳ ಹತ್ತಿರ ಹೋಗುವ ಪ್ರಯತ್ನ ಮಾಡಿ ಅವಳಿಂದ ಅವಮಾನ ತಿರಸ್ಕಾರಕ್ಕೆ ಒಳಗಾಗುತ್ತಾನೆ.

ಪಗಡೆಯಾಟದ ಸಂದರ್ಭದಲ್ಲಿ ಅವನು ರುಕ್ಮಿಣಿಗೆ ಕೊಡುವ ಉಪನ್ಯಾಸ ಅವನ ಬದುಕಿನ ನಿಲುವನ್ನು ಸೂಚಿಸುತ್ತದೆ. "ಅಯ್ಯೋ ನೀನು ಸರಿ ಮೋಸ ಮಾಡದಿದ್ರೆ ಈ ಜೀವನದಲ್ಲಿ ಗೆಲ್ಲಲಿಕ್ಕೆ ಆಗತ್ತ? ಇಡೀ ಮಹಾಭಾರತದ ಕತೆಯಲ್ಲಿ ನಾವು ಕಾಣಬಹುದೇನು? ಉದ್ದಕ್ಕೂ ವೋಸ" ಕೃಷ್ಣಶಶಾಸ್ತ್ರಿಗಳ ಬಳಿ ಕುಪ್ಪೆ ಮಾತ್ರ ತೆಗೆದುಕೊಂಡುಹೋಗಿ, ಕದ್ದು ಕೊನೆಗೆ ಸುಳ್ಳು ಹೇಳಿ ಲಪಟಾಯಿಸುತ್ತಾನೆ. ಕುತಂತ್ರ, ಮೋಸ, ಕೇಶವಯ್ಯನ ಅನೀತಿ ಗುಣದವನು.

ಇಂತ ಕೇಶವಯ್ಯನನ್ನು ತಾಯಗಂಡ ಎನ್ನುವ ಕೃಷ್ಣಶಾಸ್ತ್ರಿ ರಾತ್ರಿಯಲ್ಲಿ ಮಲಗಿ ನಿದ್ರಿಸುತ್ತಿದ್ದ ಸೊಸೆಯ ಲಾಡಿ ಬಿಚ್ಚಿ ಬಿಡುತ್ತಾನೆ. ಎಂದು ಅವನ ನೀಚ ಪ್ರವೃತ್ತಿಯನ್ನು ನಿಷ್ಠೂರವಾಗಿ ವ್ಯಕ್ತಪಡಿಸುತ್ತಾನೆ. ಸಿವುನಿಯನ್ನು ಅವನ ಕಾಮಚಪಲತೆಗೆ ಸೀರೆಕೊಡಿಸುವ ಮೂಲಕ ಪ್ರಯತ್ನವನ್ನು ಮಾಡುತ್ತಾ ಅವಳು ಅದನ್ನು ತಿರಸ್ಕರಿಸಿದಾಗ ಬಲವಂತವಾಗಿ ಕಾಮತೃಪ್ತಿಗೆ ಬಳಸಿಕೊಳ್ಳುತ್ತಾನೆ. ಮಾನವೀಯತೆಯ ಮುಖವಾಡವನ್ನು ಹಾಕಿಕೊಂಡು ಅಮಾನವೀಯತೆಯಿಂದ ವರ್ತಿಸುವ ಪಾತ್ರವಾಗಿ ಕಾಣಿಸುತ್ತಾನೆ.

ಈ ಪಾತ್ರಗಳಷ್ಟೇ ಅಲ್ಲದೆ ಊರಿನಲ್ಲಿ ನಡೆಯುವ ಅಧರ್ಮ, ಅನೀತಿಯುತ ಘಟನೆಗಳನ್ನು ಗುರುತಿಸಿ ಕಾರಣಕರ್ತರನ್ನು ನಿಂಧಿಸುವ ದ್ಯಾವಾಜಮ್ಮ, ಬುಂಡಮ್ಮನ ಸೊಸೆಯನ್ನು ಹಾರಿಸಿಕೊಂಡು ಹೋಗುವ ಕಂಚುಗಾರ ಸಾಬಿ, ಕ್ರೈಸ್ತ ಪಾದ್ರಿ ತಾನು ಬಸುರು ಮಾಡಿದ ಕನ್ಯೆಯನ್ನು ಸಂಚುಮಾಡಿ ಮಟ್ಟಾರಿ ಕೊರಳಿಗೆ ಕಟ್ಟುತ್ತಾನೆ, ನೇಣುಹಾಕಿಕೊಂಡು ಸಾಯುವ ಹಗಲನ ಸಾವಿಗೆ ಟಗೂರನೇ ಕಾರಣನೆಂದು ಅವನನ್ನು ಶಿಕ್ಷಿಸುವುದು, ಮಗಳು ಚೆಲುವಿಯನ್ನು ನಂಜೇಗೌಡ ಉದ್ದೂರಯ್ಯನ ತೋಳೊಳಕ್ಕೆ ಎಸೆಯುವಂತೆ ಮಾಡುವ ಶೋಷಣೆಯ ನೀಚತನಕ್ಕೆ ಸತ್ತ ಹೆಣದ ಹೆಬ್ಬಟ್ಟಿನ ಗುರ್ತನ್ನು ತನ್ನ ಪತ್ರಕ್ಕೆ ಒತ್ತಿಸಿಕೊಳ್ಳುವ ಕಾಮ ಪಿಶಾಚಿ ಬೆಟ್ಟಯ್ಯ, ಮಠದಲ್ಲೇ ಬೆಳೆಯುತ್ತಿದ್ದ ಶಿವಾಚಾರದ ಸಾತ್ವಿಕ ವ್ಯಕ್ತಿ, ಕಂಪಯ್ಯನವರ ಹರೆಯದ ಮಗಳನ್ನು ಬಸುರು ಮಾಡಿ ಅವಳ ಸಾವಿಗೆ ಕಾರಣವಾದ. ಶಿವಾಚಾರದ ಮಠವನ್ನು ಅನಾಚಾರದ ಮಠವನ್ನಾಗಿ ಪರಿವರ್ತಿಸಿದ ಜಪ್ಪಯ್ಯನ ಮಠದ ಶಿವಪಾದಪ್ಪ, ಇನ್ನೂ ಋತುಮತಿಯಾದಗ ತನ್ನ ಮಗಳನ್ನು ಬಲವಂತವಾಗಿ ಹಿಡಿದು ಸಂಭೋಗಿಸಿದ ಕೆಂಗಣ್ಣಪ್ಪನ ವಿರುದ್ಧ ಅಹವಾಲನ್ನು ನೀಡಿದರೂ ನ್ಯಾಯಸ್ಥರು ಕಿವಿಗೆ

ಹಾಕಿಕೊಳ್ಳದೆ ಅಲಕ್ಷಿಸಿದಾಗ ಜಾತಿಬಲವಾಗಲಿ ಧನಬಲವಾಗಲಿ ಇಲ್ಲದೇ ನಿಸ್ಸಾಹಯಕಳಾಗಿ ಬಾಯಿಮುಚ್ಚಿಕೊಂಡು ಹಲಿಬುವ ದಲಿತ ಕುಂಡಿಮಾದ, ತನ್ನ ಜೊತೆ ಸಂಸಾರ ಮಾಡುವುದಕ್ಕೆ ಲಾಯಕ್ಕಿಲ್ಲ ಎಂದು ಮದುವೆಯಾದ ಹನುಮನನ್ನೇ ಬಿಟ್ಟು ಬೇರೆಯವರ ಜೊತೆಗೆ ಸಂಬಂಧ ಬೆಳೆಸುವ ಎಂಕಟಿ, ಜಾತಿ-ಭೇಧ ಭಾವ ಮಾಡಿ ಪಾಠ ಹೇಳಿಕೊಡುವ ಮೇಷ್ಟ್ರು ವೆಂಕಟೇಶಯ್ಯ ಲಕ್ಕನ ವಿಚಾರದಲ್ಲಿ ನಿರ್ದಯವಾಗಿ ವರ್ತಿಸುತ್ತಾನೆ. ಲಕ್ಕನನ್ನು ಶಾಲೆಯಿಂದ ಹೊರ ಹಾಕುವ ಮೂಲಕ ವಿದ್ಯೆ ಬ್ರಾಹ್ಮಣರ ಸ್ವತ್ತೆಂದುಕೊಂಡಿರುವ ಪರಂಪರೆಯ ಸ್ವಾರ್ಥ ನಂಬಿಕೆಯನ್ನು ಎತ್ತಿಹಿಡಿಯುವುದನ್ನು ಕಾಣಬಹುದು, ಅಲ್ಲದೆ ಪುರೋಹಿತಿಕೆ ಮಾಡುವ ವೆಂಕಣ್ಣಜೋಯಿಸರು, ಶ್ಯಾಮಭೋಗರು, ನೀಲಂಗಾಲದ ಮಾದೇವಪ್ಪ, ಕುಂದುರಯ್ಯ, ಕ್ಯಾಡೆಬುಳ್ಳಪ್ಪ ಶ್ಯಾಮನ ಅಕ್ಕ-ಪಾರ್ವತಿ-ಗಂಡ ಚಂದ್ರ ಶೇಖರಯ್ಯ, ಲಕ್ಕನ ನಾಯಿ ಬೊಡ್ಡ ಇಷ್ಟು ಅಲ್ಲದೆ ಇನ್ನು ಹತ್ತು ಹಲವು ಪಾತ್ರಗಳು ಸಂದರ್ಭಕ್ಕೆ ತಕ್ಕಂತೆ ಅವರದೇ ಆದ ಕ್ರಿಯೆ-ಪ್ರತಿಕ್ರಿಯೆ ನೀಡುವಲ್ಲಿ ಪಾತ್ರಗಳು ಯಶಸ್ವಿಯಾಗಿದೆ.

ಅಧ್ಯಾಯ–೪

ಮಾನವ ಸಂಬಂಧಗಳ ಸಂಘರ್ಷ

ಅಧ್ಯಾಯ-೪

ಮಾನವ ಸಂಬಂಧಗಳ ಸಂಘರ್ಷ

ವ್ಯಕ್ತಿ ಮತ್ತು ಸಮಾಜ ಒಂದೇ ಮುಖದ ಎರಡು ನಾಣ್ಯಗಳಿದ್ದಂತೆ. ಮಾನವ ಒಂಟಿಯಾಗಿ ಜೀವಿಸಲಾರ. ಅವನು ಯಾವಾಗಲೂ ಸಾಂಘಿಕವಾಗಿ ಸಮಾಜದಲ್ಲಿ ಜೀವಿಸುವವನು. ಇಡೀ ಸಮಾಜವೇ ಒಂದು ಕುಟುಂಬ. ಮಾನವನು ಸಂಬಂಧವನ್ನು ಕಟ್ಟಿಕೊಳ್ಳುವಲ್ಲಿ, ಬೆಳೆಸಿಕೊಳ್ಳುವಲ್ಲಿ, ಗ್ರಹಿಸುವಲ್ಲಿ, ಮಾನವೀಯ ನೆಲೆಯಲ್ಲಿ ಅದರ ಮೌಲ್ಯವನ್ನು ಉಳಿಸಿಕೊಳ್ಳುವಲ್ಲಿ ಪ್ರಮುಖ ಪಾತ್ರವಹಿಸುತ್ತಾನೆ. ತಾನೇ ಸೃಷ್ಟಿಸಿಕೊಂಡಿರುವ ಸಂಬಂಧಗಳನ್ನು ಶಾಶ್ವತವಾಗಿ ಮುಂದುವರೆಸುವುದು ಸರ್ವತೋಮುಖ ಬೆಳವಣಿಗೆಗಾಗಿ ಸಾಮಾಜಿಕ ಸಾಂಸ್ಕೃತಿಕ ಸಂರಚನೆಯಲ್ಲಿ ನಮ್ಮ ಬದುಕಿನ ಸ್ವರೂಪ, ವೈಯಕ್ತಿಕ ನೆಲೆ ತಾತ್ವಿಕ ಒಳನೋಟಗಳನ್ನು ಆಧರಿಸುತ್ತದೆ. ಇವು ಕಾಲ ಸಮಾಜ ವ್ಯಕ್ತಿಗನುಗುಣವಾಗಿ ಬದಲಾಗುವುದರಿಂದ, ಗ್ರಹಿಸುವಿಕೆಯ ಕ್ರಮ, ರೀತಿ ಭಿನ್ನವಾಗಿರುತ್ತದೆ. ಎಷ್ಟೇ ಭಿನ್ನತೆ ಇದ್ದರೂ ತನ್ನ ಅಸ್ಥಿತ್ವವನ್ನು ಕಾಪಾಡಿಕೊಳ್ಳುವಲ್ಲಿ ಹುಟ್ಟಿನಿಂದ ಸಾಯುವವರೆಗೂ ಹಲವಾರು ಆಸಕ್ತಿ ಬಯಕೆಗಳನ್ನು ಹೊಂದಿರುವುದರಿಂದ ಬದುಕೇ ಒಂದು ಹೋರಾಟವಾಗಿರುತ್ತದೆ.

ಮಾನವನಿಲ್ಲದೆ ಸಮಾಜವೇ ಇಲ್ಲ. ವ್ಯಕ್ತಿಯಿಂದ ವ್ಯಕ್ತಿಗೆ ಸಮಾಜದಿಂದ ಸಮಾಜಕ್ಕೆ ಸಾಂಸ್ಕೃತಿಕವಾಗಿ ಸಾಮಾಜಿಕ ಸಂರಚನೆ ಭಿನ್ನವಾಗಿರುತ್ತದೆ. ಪ್ರಾಚೀನ ಕಾಲದಿಂದ ಆಧುನಿಕ ಕಾಲದವರೆಗೂ ಮಾನವ ಸಂಬಂಧಗಳಲ್ಲಿ ಸಂಘರ್ಷ ಒಂದಲ್ಲ ಒಂದು ಕಾರಣಕ್ಕೆ ಏರ್ಪಡುತ್ತಲೇ ಇರುತ್ತದೆ. ಮಾನವ ಸಮಾಜದಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಎಂದು ವರ್ಣಾಶ್ರಮ ವ್ಯವಸ್ಥೆಯನ್ನು ರೂಪಿಸಿಕೊಂಡಿದ್ದಾನೆ. ಈ ವ್ಯವಸ್ಥೆಯಿಂದ ಮಾನವ ಸಂಬಂಧಗಳ ನಡುವೆ ಮೇಲು ಕೀಳೆಂಬ ಅಂತರವನ್ನು ಸೃಷ್ಟಿಸುತ್ತದೆ. ಪುರೋಹಿತಶಾಹಿ ವ್ಯವಸ್ಥೆಯೂ ಶೂದ್ರರರನ್ನು ಕೀಳಾಗಿ ಕಂಡು ಇಡೀ ವ್ಯವಸ್ಥೆಯ ಮೇಲೆ ವ್ಯತಿರಿಕ್ತ ಪರಿಣಾಮಗಳನ್ನೇ ಉಂಟುಮಾಡುತ್ತದೆ.

ಪಟ್ಟಭದ್ರ ಹಿತಾಸಕ್ತಿಗಳಿಂದ ಮಾನವ ಸಂಬಂಧಗಳಲ್ಲಿ ಅಸಮಾನತೆ ಉಂಟಾಗಿ ಲಿಂಗಾಧಾರಿತವಾಗಿ ವರ್ಗಾಧಾರಿತವಾಗಿ, ಜಾತಿಯಾಧಾರಿತವಾಗಿ ಸಂಘರ್ಷಗಳು ಉಂಟಾಗಿ

ಮಾನವನ ಬದುಕು ಅಧಃಪತನಕ್ಕೆ ಸಾಗುತ್ತಿದೆ. ಇದರಿಂದ ಬಿಡುಗಡೆ, ಪಡೆದು ಮುಕ್ತ ಸಮಾಜ ನಿರ್ಮಾಣವಾಗಬೇಕಾದರೆ ನಿರಂತರ ಹೋರಾಟದಿಂದ ಮಾತ್ರ ಪರಿಸ್ಥಿತಿಯನ್ನು ಮುಖ್ಯವಾಹಿನಿಗೆ ತರಲು ಸಾಧ್ಯವಾಗುತ್ತದೆ.

ವೈಶಾಖ ಕಾದಂಬರಿ ಚರ್ಚಿಸುವ ಬಹುಮುಖ್ಯವಾದ ನೆಲೆ ನಿಸರ್ಗ ಮತ್ತು ಮನುಷ್ಯರ ನಡುವಿನ ಸಂಬಂಧವನ್ನು ಕುರಿತದ್ದಾಗಿದೆ. ನಿಸರ್ಗದತ್ತವಾಗಿರುವ ಗಂಡು-ಹೆಣ್ಣಿನ ನಡುವಿನ ಕಾಮ ಸಂಬಂಧಿ ಹಾಗೂ ಮಾನವ ಸೃಷ್ಟಿಸಿಕೊಂಡಿರುವ ಜಾತಿ-ವರ್ಗಗಳ ನಡುವಿನ ಸಂಘರ್ಷವನ್ನು ತಿಳಿಸುತ್ತದೆ. ಶೋಷಣೆಯ ನಿರ್ದಿಷ್ಟ ಸ್ವರೂಪ, ತೀವ್ರತೆ ಆಯಾ ಸಮಾಜದ ಒಳರಚನೆಯನ್ನು ಅವಲಂಬಿಸಿರುತ್ತದೆ. ಮನುಷ್ಯನ ಸಂಬಂಧವೂ ಜಾತಿ, ವರ್ಗ, ಲಿಂಗ, ಶ್ರೇಣಿಗಳಿಂದ ನಿರ್ಮಿತವಾಗಿರುವ ನಮ್ಮ ಸಾಮಾಜಿಕ ಒಳರಚನೆಯ ಸ್ವರೂಪದೊಳಗೆ ಜೀವನಕ್ರಮ, ಧೋರಣೆ, ಶ್ರೇಣಿಯ ನಿರ್ದಿಷ್ಟ ಹಂತದಲ್ಲಿ ಗಂಡು-ಹೆಣ್ಣು ಪಡೆದುಕೊಳ್ಳುವ ಸ್ಥಾನವನ್ನು ಅರ್ಥೈಸಿಕೊಳ್ಳಬೇಕಾಗುತ್ತದೆ.

ಮೇಲ್ವರ್ಗ ಮತ್ತು ಕೆಳವರ್ಗದವರ ಸಂಘರ್ಷ:

'ವೈಶಾಖ' ಕಾದಂಬರಿಯಲ್ಲಿ ಮೇಲ್ವರ್ಗ ಮತ್ತು ಕೆಳವರ್ಗದವರ ಸಂಘರ್ಷ ಪ್ರಧಾನವಾಗಿದೆ. ಇದು ಕಾದಂಬರಿಯ ಉದ್ದಕ್ಕೂ ಪ್ರಕಟವಾಗುತ್ತಾ ಹೋಗುತ್ತದೆ. ದುರುಮನಹಳ್ಳಿಯಂತಹ ಗ್ರಾಮೀಣ ಪ್ರದೇಶದಲ್ಲಿ ಇದು ತನ್ನದೇ ಆದ ವ್ಯವಸ್ಥೆಯನ್ನು ರೂಢಿಸಿಕೊಳ್ಳುವಲ್ಲಿ ವರ್ಗಬೇಧ ಸಂಘರ್ಷಗಳು ಅಮಾನವೀಯ ನೆಲೆಯಲ್ಲಿ ಅನಾವರಣಗೊಂಡಿದೆ. "ವರ್ಗ ಮತ್ತು ವರ್ಣ ಸಂಘರ್ಷ ಹಾವು ಏಣಿಯಾಟದ ಹಾಗೆ ಒಂದನ್ನೊಂದು ಸುತ್ತಿಕೊಂಡು ಬಿಡಸಲಾರದ ವಿದ್ಯುದ್ಧಾಲಿಂಗನದಲ್ಲಿ ಎರಕ ಹೊಯ್ದ ಕೃತಿಯೆಂದರೆ 'ವೈಶಾಖ', ಅದು ಭಾರತೀಯ ಶ್ರೇಣಿಕೃತ ಹಾಗೆಯೇ ವರ್ಣಭೇದ ಸಮಾಜದ ಎಲ್ಲಾ ಸಂಕೀರ್ಣತೆಯನ್ನು ಪಡೆದು ಅಚ್ಚ ದೇಸಿಯವಾಗಿ ಕಾಣುವ ಕೃತಿ. ಅಲ್ಲಿ ಅಸ್ಪೃಶ್ಯತೆಯಿದೆ. ಹಾಗೆಯೇ ಬ್ರಾಹ್ಮಣ್ಯವಿದೆ. ಜೀತಗಾರಿಕೆಯನ್ನು ಊರ್ಜಿತವಾಗಿ ಇಟ್ಟುಕೊಂಡ

ಊಳಿಗಮಾನ್ಯ ವ್ಯವಸ್ಥೆ ಮತ್ತು ಬಂಡವಾಳಶಾಹಿ ವ್ಯವಸ್ತೆಯ ಸ್ವರೂಪವನ್ನು ಪಡೆದಿದೆ".[೧]

ಈ ಮೇಲಿನ ಮಾತನ್ನು ಗಮನಿಸಿದರೆ ಸಾರ್ವಕಾಲಿಕ ಸತ್ಯವೆಂಬಂತೆ ಗೋಚರವಾಗುತ್ತದೆ. ಕಥೆ ನಡೆಯುವುದು 'ದರುಮನಹಳ್ಳಿ'ಯಲ್ಲಿ ಇಲ್ಲಿಯ ಚಲನೆ ಮಂದಗತಿಯೂ ಸಂಕೀರ್ಣವಾದುದೂ ಆಗಿದೆ. ಶುದ್ದ ರೂಪದಲ್ಲಿ ವರ್ಣ ವ್ಯವಸ್ತೆಯೂ ಇಲ್ಲ. ವರ್ಗವ್ಯವಸ್ಥೆಯೂ ಇಲ್ಲ. ಆದರೆ ಚರಿತ್ರೆಯ ಆಂತರಿಕವಾದ ಸೆಳವು ಬದುಕನ್ನು ಪಲ್ಲಟಗೊಳಿಸುತ್ತಿದೆ. ಇದನ್ನು ಗಮನಿಸಿದಾಗ ಸಾಮಾಜಿಕ ಸಂಬಂಧಗಳ ಗ್ರಹಿಕೆಯಲ್ಲಿ ವರ್ಗ-ಜಾತಿ ಆರ್ಥಿಕ ಸ್ಥಿತಿಯನ್ನು ಒಳಗೊಂಡಿರುವುದನ್ನು ಚರ್ಚಿಸಲೇಬೇಕಾಗುತ್ತದೆ. ಸಾಂಸ್ಕೃತಿಕ ಸಂದಂರ್ಭದಲ್ಲಿ ಇದನ್ನು ಹೊರತು ಅಧ್ಯಯನ ಅಪೂರ್ಣವಾಗುತ್ತದೆ.

ಕಾದಂಬರಿಯಲ್ಲಿ ಗಂಡು-ಹೆಣ್ಣಿನ ಸಂಬಂಧಗಳು ಒಂದಡೆಯಾದರೆ, ಒಂದೇ ಜಾತಿ-ವರ್ಗ ಮನೆತನದ ಜನರಲ್ಲಿ ಮೂಡಿಬರುವ ಸಂಘರ್ಷಗಳು ಒಂದಡೆಯಾಗಿದೆ ಈ ರೀತಿಯ ಸಂಬಂಧಗಳನ್ನು ಬೇರ್ಪಡಿಸಿ ಸರಳೀಕರಣಕ್ಕೆ ಒಳಪಡಿಸದೆ, ಎರಡೂ ಸಂಬಂಧಗಳು ಪರಸ್ಪರ ಸೇರಿಕೊಳ್ಳುತ್ತ ಇಡೀ ಸಮಾಜ ಒಂದು ಸಂಕೀರ್ಣ ರೂಪ ಪಡೆದುಕೊಳ್ಳುವುದನ್ನು ನೋಡಬಹುದು. ಅದು ಜಾತಿಯಾಧಾರಿತವಾದರೂ ಆಗಿರಬಹುದು. ವರ್ಗಾಧಾರಿತವಾಗಿಯಾದರೂ ಆಗಿರಬಹುದು, ಈ ರೀತಿಯ ವಿಂಗಡಣೆ ಹಳ್ಳಿಯ ಮೇಲೆ ಮತ್ತು ಜನರ ಬದುಕಿನ ಮೇಲೆ ವಿಪರೀತವಾದ ಪರಿಣಾಮವನ್ನು ಉಂಟುಮಾಡಿದೆ. ಬ್ರಾಹ್ಮಣ ವರ್ಗಕ್ಕೆ ಸೇರಿದವರಲ್ಲಿ ಒಂದು ರೀತಿಯ ಶೋಷಣೆಯಾದರೆ, ದಲಿತ ವರ್ಗದವರು ಮೇಲ್ವರ್ಗದವರಿಂದ ಅನ್ಯಾಯಕ್ಕೆ ಇಳಪಡುವವರು ಒಂದುಕಡೆ.ಮೇಲ್ವರ್ಗದವರ ಪ್ರಭುತ್ವ ದಬ್ಬಾಳಿಕೆ, ಬಡವರ ಅಸಾಹಯಕತೆ ಪ್ರಾಮಾಣಿಕತೆ ಮುಕ್ತ ಮತ್ತು ಸೇವಾ ಮನೋಭಾವವನ್ನು ಲೇಖಕರು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾರೆ. ಲೈಂಗಿಕ ಪರಿಕಲ್ಪನೆ ಮತ್ತು ಆರ್ಥಿಕ ಸ್ಥಿತಿಯನ್ನು ವರ್ಗಾಧಾರಿತ ಹಿನ್ನೆಲೆಯಲ್ಲಿ ದ್ವಿಮುಖ ನೀತಿಯನ್ನು ಬಯಲಿಗೆಳೆದಿದ್ದಾರೆ. ಸಮಾಜದಲ್ಲಿ ವರ್ಣ ವ್ಯವಸ್ಥೆಯಿಂದಲೆ ವರ್ಗ ಸಂಘರ್ಷಕ್ಕೆ

---

೧)ಕನ್ನಡಕಾದಂಬರಿಗಳು ವರ್ಗ-ವರ್ಣ ಸಂಘರ್ಷ-ಆರ್. ವ್ಹಿ.ಭಂಡಾರಿ-ಪು.ಸಂ-೧೨೭

ಮೂಲಕಾರಣ ಎಂಬುದನ್ನು ಕಾದಂಬರಿಯ ಮೂಲಕ ಬಯಲಿಗೆಳೆದಿದ್ದಾರೆ.

ಪ್ರತಿಭಟನೆ ಮತ್ತು ಮಾನವೀಯ ನೆಲೆ:

ಶತಶತಮಾನಗಳಿಂದ ಮೇಲ್ವರ್ಗದವರು ಕೆಳವರ್ಗದವರನ್ನು ಪ್ರತಿಸಂದರ್ಭದಲ್ಲಿಯೂ ಕೂಡ ಶೋಷಿಸುತ್ತಲೇ ಬಂದಿದ್ದಾರೆ. ಅದು ಲೈಂಗಿಕವಾಗಿಯೂ ಮತ್ತು ಆರ್ಥಿಕವಾಗಿಯೂ ಕೂಡ ಇಂತಹ ಅಮಾನವೀಯ ಶೋಷಿತ ಘಟನೆಗಳನ್ನು ವಿವರಿಸುತ್ತಾ ವರ್ಗ-ವರ್ಣಗಳ ನಿರ್ಮೂಲನ, ನೀತಿ-ಅನೀತಿ, ಪಾಪ-ಪುಣ್ಯ ಮತ್ತು ತಪ್ಪು-ಒಪ್ಪುಗಳಿಗಿಂತಲೂ ಮಾನವೀಯ ನೆಲೆಯನ್ನು ಪ್ರತಿಪಾದಿಸುವಲ್ಲಿ ಮುಂದಾಗುತ್ತಾರೆ.

ಆದರೆ ಎಷ್ಟೋ ಸಂದಂರ್ಭಗಳಲ್ಲಿ ವರ್ಗ ಸಂಘರ್ಷದಲ್ಲಿ ಸಿಲುಕಿ ಪಾತ್ರಗಳು ಪ್ರತಿಭಟಿಸಲಾಗದೆ ಮೌನವಾಗಿ ಎಲ್ಲವನ್ನು ಸಹಿಸುವ ಹಾಗೆ ಮಾಡುತ್ತದೆ. ಆದರೂ ನೇರವಾಗಿ ಅಲ್ಲದಿದ್ದರೂ ಪರೋಕ್ಷವಾಗಿಯಾದರೂ ವ್ಯವಸ್ಥೆಯ ವಿರುದ್ಧ ಪ್ರತಿಭಟಿಸುವ ಪ್ರಯತ್ನವೆಂತು ನಿಂತಿಲ್ಲ.

ವೈಶಾಖದಲ್ಲಿ ಮಾನವೀಯತೆಗಿಂತ ಅಮಾನವೀಯತೆ ನೈತಿಕತೆಗಿಂತ ಅನೈತಿಕತೆ ತಾಂಡವವಾಡುತ್ತಿದೆ. ನರೂಪಕರು ಸರ್ಪ, ಹಕ್ಕಿ, ಆನೆ, ಹೆಣ್ಣಿನ ಶವ, ಇವುಗಳ ನಿದರ್ಶನದೊಂದಿಗೆ ಸಾಂಕೇತಿಕ ತಂತ್ರಗಳನ್ನು ಬಳಸಿ ಮಾನವನ ಸ್ವಭಾವಗಳನ್ನು ಅನ್ವಯಿಸಿ ಕಾದಂಬರಿಗೆ ಸಾಮಾಜಿಕ ಆಯಾಮವನ್ನು ಕೊಡುವಲ್ಲಿ ಯಶಸ್ವಿಯಾಗಿದ್ದಾರೆ. ಈ ಸಂಕೇತಗಳಲ್ಲಿ ವರ್ಗ-ಸಂಘರ್ಷದ ಹೋರಾಟದ ದನಿಯಿದೆ. ಇದರ ನಡುವೆಯೂ ಅಲ್ಲಲ್ಲಿ ಕಲ್ಯಾಣಿ, ಬುಂಡಮ್ಮ, ಲಕ್ಕ, ಶ್ಯಾಮನಂತವರಲ್ಲಿ ಪ್ರೀತಿ ತ್ಯಾಗ ಮಾನವೀಯ ಮೌಲ್ಯಗಳನ್ನು ಮೈಗೂಡಿಸಿಕೊಳ್ಳುವ ಜೀವಂತಿಕೆಯೂ ಅಡಗಿದೆ.

ಮನುಷ್ಯ ಯಾವ ವರ್ಗಕ್ಕೆ ಸೇರಲ್ಪಟ್ಟವನಾದರೂ ಸ್ವಭಾವತಃ ಎಂಥಾ ಸಂದರ್ಭದಲ್ಲೂ ಪ್ರತಿಭಟನೆಯ ಮನೋಧರ್ಮವುಳ್ಳವನಾಗಿದ್ದಾನೆ. ತನ್ನ ಸ್ವಾತಂತ್ರ್ಯಕ್ಕೆ ಸ್ವಾಭಿಮಾನಕ್ಕೆ, ಆತ್ಮಗೌರವಕ್ಕೆ ಧಕ್ಕೆ ಉಂಟಾದಾಗ ಪ್ರತಿಭಟಿಸುವುದೆಂತು ಖಂಡಿತ ಆ ಪ್ರತಿಭಟನೆ, ಮಾನವೀಯ ಕಾಳಜಿಯಿಂದ ಪ್ರತಿಕ್ರಿಯಿಸುವಂತಹದ್ದು, ಪ್ರತಿಭಟನಾ

ಮನೋಭಾವ ಕೃಷ್ಣಶಾಸ್ತ್ರಿ, ಬುಂಡಮ್ಮ, ಲಕ್ಕ, ಶಿವುನಿ, ದ್ಯಾವಾಜಿ, ಮುಂತಾದವರಲ್ಲಿ ಕಂಡುಬಂದರೂ ಕಾಲಾಂತರದಲ್ಲಿ ವ್ಯವಸ್ಥೆಯ ಕಟ್ಟುಪಾಡುಗಳಿಗೆ ಸಿಲುಕಿ ಇವರ ಚಿಂತನೆಗಳು ಪಲ್ಲಟಗೊಳ್ಳುತ್ತದೆ. ಉಳ್ಳವರು ಪ್ರತಿಷ್ಠಿತರು ಬಲೆಗೆ ಸಿಲುಕಿ ಕೆಳವರ್ಗದವರು ಅಸಾಹಯಕರಾಗುವರು. ಉಳ್ಳವರ ಆಕ್ರೋಶದಲ್ಲಿ ಹಿಂಸೆಯಿದ್ದರೆ, ನೊಂದವರ ಪ್ರತಿಭಟನೆಯಲ್ಲಿ ಮಾನವೀಯತೆ ಇದೆ. ಮೇಲ್ವರ್ಗದವರು ಉಳ್ಳವರು ಲಕ್ಕನಂತವರ ಕುಟುಂಬಗಳ ಆಕಾಂಕ್ಷೆಗಳನ್ನು ಮಣ್ಣು ಪಾಲು ಮಾಡುವಲ್ಲಿ ಮಾನವೀಯತೆಯೇ ಇಲ್ಲದೆ ಮೆರೆಯುತ್ತಾರೆ ಎಂಬುದಕ್ಕೆ ಕಾದಂರಿಯಲ್ಲಿ ಹಲವಾರು ನಿದರ್ಶನಗಳು ದೊರೆಯತ್ತದೆ.

ಲಕ್ಕನನ್ನು ಜೀತದಿಂದ ಬಿಡಿಸಿ ವಿದ್ಯಾವಂತನನ್ನಾಗಿ ಮಾಡಬೇಕೆಂಬ ತಂದೆ-ತಾಯಿಯ ಬಯಕೆ ಈಡೇರುವುದಿಲ್ಲ. ಶಾಲೆಗೆ ಕಳಿಸಬೇಕೆಂಬ ಪ್ರಯತ್ನ ವ್ಯರ್ಥವಾಗುತ್ತದೆ. ಮಾಡಿದ ಸಾಲವೂ ನೀರಿನಲ್ಲಿ ಹೋಮವಾಗುತ್ತದೆ. ಜೀತದಾಳಾಗಿ ಮೇಲ್ವರ್ಗದವರ ಗುಲಾಮನಾಗಿ ಬಾಳಬೇಕಾಗುತ್ತದೆ. ಆ ಕುರಿತು ಕೆಂಗಣ್ಣಪ್ಪನ ಹೆಂಡತಿ ಸಿದ್ದಮ್ಮನ ಪ್ರತಿಕ್ರಿಯೆ ಇಡೀ ಜಮೀನುದಾರಿ ವರ್ಗದ ಪ್ರತಿಕ್ರಿಯೆಯೂ ಕೂಡ ಆಗಿದೆ. “ಹಯ್ಯಾ ನಿಂಗೊಂದು ಉಚ್ಚು, ಇವರಿಗೆ ಇದ್ಯಾ ಕಲಿಸಿ, ಇವ್ನ ಅದ್ಯಾಮ ರಾಜ್ಯ ಆಳಬೇಕಾದ್ದುವ?...... ಬ್ರಾಂತು..... ಬ್ರಾಂತು.. ಇವನನ್ನು ಯಾವುದಾದರೂ ಅಟ್ಟಿಗೆ ಸೇರಿಸಿ, ಉಳಿಕೆ ಆಯ್ತು ನಿನ್ನ ಸಾಲ ಒಂದೇ ವರುಷಕ್ಕೆ ತೀರೋಯ್ತುದೆ” ಎಂದು ಹೀಗೆ ನುಡಿಯುವ ಮಾತಿನ ಹಿಂದೆ ದಲಿತರನ್ನು ವಿದ್ಯೆಯಿಂದ ದೂರವಿರಿಸಿ ಜೀವನ ಪರ್ಯಾಂತ ಜೀತದಾಳಾಗಿ ಉಳಿಸುವ ಹುನ್ನಾರ ಇರುವುದು ಅವಳ ಮಾತಿನಲ್ಲಿ ಸ್ಪಷ್ಟವಾಗುತ್ತದೆ. ಇದು ಕೇವಲ ಇವಳೊಬ್ಬಳ ಪ್ರತಿಕ್ರಿಯೆ ಅಲ್ಲ ಮೇಲ್ವರ್ಗದವರಲ್ಲಿ ಎಳೆಎಳೆಯಾಗಿ ಬಿಚ್ಚಿಕೊಳ್ಳುವ ಪ್ರಭುತ್ವ ಸಾಧಿಸುವ ಬಲವಾದ ತೀರ್ಮಾನವಾಗಿಬಿಟ್ಟಿದೆ.

ಇದೇ ರೀತಿಯ ತೀರ್ಪನ್ನು ಪಂಚಾಯಿತಿಯಲ್ಲಿ ಕೆಂಗಣ್ಣಪ್ಪ ಕೊಡುತ್ತಾನೆ. ಆಗ ನಿಂಗಯ್ಯ ಲಕ್ಕನನ್ನು ತಬ್ಬಿಕೊಂಡು ನೀನು ಓದುವ ಆಸೆ ನಿಮ್ಮಣ್ಣ ಜೊತೆಯಲ್ಲಿ ಕೊಚ್ಚುಕೊಂಡು ಹೋಯಿತಲ್ಲ ಎಂದು ಪ್ರಲಾಪಿಸುವಲ್ಲಿ ಅಸಹಾಯಕ ಪ್ರತಿಭಟನೆ

ಅಭಿವ್ಯಕ್ತವಾಗಿದೆ. ಹತಾಶೆಯ ನಿಟ್ಟುಸಿರೂ ಈ ರೋಷವೂ ಕೂಡ ವ್ಯವಸ್ಥೆಗೆ ತೋರುವ ಪ್ರತಿಭಟನೆಯಾಗಿದೆ.

ಜಾತಿ ಹಿನ್ನೆಲೆಯಲ್ಲಿ ಶಿಕ್ಷಣ:

ಲಕ್ಕನ ಶಿಕ್ಷಣ ಕುರಿತು ಅವನು ಶಿಕ್ಷಣ ಪಡೆಯುವುದರ ಮೂಲಕ ಏರ್ಪಡಿಸಿಕೊಳ್ಳಬಹುದಾಗಿದ್ದ ವಿಶಿಷ್ಟ ಸಾಮಾಜಿಕ ಸಂಬಂಧ ಜಾತಿಯ ಶ್ರೇಣೀಕರಣದ ಹಿನ್ನೆಲೆಯಲ್ಲಿ ತಪ್ಪಿಹೋಗುವ ಚಿತ್ರವೊಂದು ಕಾದಂಬರಿಯಲ್ಲಿ ಬರುತ್ತದೆ. ಅದು ಶಾಲೆಯಿಂದ ವಿದ್ಯೆಯಿಂದ ವಂಚಿತನನ್ನಾಗಿ ಮಾಡುವ ಪ್ರಸಂಗ ಬರುತ್ತದೆ. ಗೊರಗು ಹೊದ್ದು ಶಾಲೆಗೆ ಹೊರಟ ಲಕ್ಕನನ್ನು ಮಳೆಯಲ್ಲಿ ನೆನೆಯುತ್ತಿದ್ದ ಶಿವಾಚಾರದ ಗಂಗಿ ಬಂದು ಸೇರಿಕೊಂಡಾಗ ಅವಳು ನೆನೀತಿದ್ದನ್ನು ಕಂಡು ಪಾಪ ಅನ್ನಿಸಿ ಗೊರಗನ್ನು ಕೊಡ ಹೋದರೆ ಅದರಲ್ಲಿ ಅವನನ್ನು ಸೇರಿಸಿಕೊಂಡು ಮಠ ಸಮೀಪಿಸುತ್ತಿದ್ದಂಗೆ ನೀನು ಗೊರಗಿನಿಂದ ಆಚ್ಗೆ ಜಿಗುದುಹೋದ್ರೆ ಆಯ್ತು ಎಂದು ಹೇಳುತ್ತಾಳೆ. ಇಲ್ಲಿ ಲಕ್ಕ ನೆನೆಯುತ್ತಿದ್ದ ಗಂಗಿಗೆ ಗೊರಗನ್ನು ಕೊಡುವುದರಲ್ಲಿ ಮಾನವೀಯತೆಯ ಸಂಬಂಧದ ಜೊತೆಗೆ ಜಾತಿಮೂಲದ ಸಂಬಂಧವೂ ಇದೆ. ಅದೇ ರೀತಿ ಗಂಗಿ ಇಬ್ಬರೂ ಹೊದೆದು ಕೊಳ್ಳಬಹುದೆಂದು ಸೂಚಿಸುವಲ್ಲಿ ವೈಯಕ್ತಿಕ ನೈತಿಕತೆ ಜಾತಿ ಶ್ರೇಷ್ಠತೆಯ ಸಂಬಂಧವೂ ಇದೆ. ಒಂದು ಕಡೆ ಲಕ್ಕ ನಿರಾಕರಿಸಿದರೂ ಶಾಲೆ ಸಸಮೀಸಿತ್ತಿದ್ದಂತೆ ಗೊರಗಿನಿಂದ ಜಿಗಿಯುವಂತೆ ಸೂಚಿಸುತ್ತಾಳೆ. ಕೆಳವರ್ಗದ ಲಕ್ಕನಲ್ಲಿ ಮಾನವೀಯತೆ ಇದ್ದರೂ ಗಂಗಿಯೊಡನೆ ಒಂದೇ ಗೊರಗಿನಲ್ಲಿ ಒಟ್ಟಿಗೆ ಇರುವ ಅವಕಾಶವನ್ನು ನಿರಾಕರಿಸುವಲ್ಲಿ ತನ್ನ ಜಾತಿಯ ಬಗ್ಗೆ ಕೀಳರಿಮೆ ಇರುವುದು ಕಂಡು ಬರುತ್ತದೆ. ಎಷ್ಟೋ ಸಂದರ್ಭದಲ್ಲಿ ಸಮಾನತೆಯ ಅವಕಾಶ ಸ್ವಲ್ಪ ಮಟ್ಟಿಗೆ ಸಿಕ್ಕರೂ ಅದನ್ನು ಪಡೆಯುವಲ್ಲಿ ಹಿಂಜರಿಕೆಯೂ ಇವತ್ತಿಗೂ ಇನ್ನೂ ಹೋಗಿಲ್ಲ ಎಂಬುದು ತಿಳಿದುಬರುತ್ತದೆ.

ಕೆಳವರ್ಗದ ಲಕ್ಕನನ್ನು ಶಾಲೆಯ ಒಳಗಡೆ ಮೇಲು ಜಾತಿಯ ಹುಡುಗರು ಜೊತೆ ಕೂಡಿಸಿ ಪಾಠ ಹೇಳದೆ ಶಾಲೆಯ ಹೊರಗಡೆಗೆ ಕೂಡಿಸಿ ಪಾಠ ಹೇಳುತ್ತಿದ್ದ ವೆಂಕಟೇಶಯ್ಯ ಮೇಷ್ಟ್ರು ಲಕ್ಕ ಗಂಗಿಯನ್ನು ಮುಟ್ಟುತ್ತ ಒಂದೇ ಗೊರಗಿನಲ್ಲಿ ಬರುವುದನ್ನು ನೋಡಿ

ಲಕ್ಕನನ್ನು ಶಾಲೆಯಿಂದ ಮನೆಗೆ ಕಳುಹಿಸಿಬಿಡುತ್ತಾನೆ. ಲಕ್ಕನ ವೈಯಕ್ತಿಕ ಆಕಾಂಕ್ಷೆ, ಅವನ ಕುಟುಂಬದ ಆಕಾಂಕ್ಷೆ ಮತ್ತು ಸಾಧಿಸಬಹುದಾದ ಹೊಸ ಸಾಮಾಜಿಕ ಸಂಬಂಧಗಳು ಇವೆಲ್ಲ ಲಕ್ಕನ ಒಂದು ಮಾನವೀಯ ಪ್ರತಿಕ್ರಿಯೆಯಿಂದ ನಾಶಗೊಳ್ಳುವುದು ನಮ್ಮ ಸಮಾಜ ತಲುಪಿರುವ ಸಂಕೀರ್ಣ ವಿಘಟನೆಯ ಸ್ವರೂಪವನ್ನು ತೋರಿಸುತ್ತದೆ. ಇದು ಇವನೊಬ್ಬನ ಸಮಸ್ಯೆಯಲ್ಲ. ಇಡೀ ದಲಿತ ಜನಾಂಗವೇ ಶತಶತಮಾನಗಳಿಂದ ವಿದ್ಯೆಯಿಂದ ಸಮಾನತೆಯಿಂದ ದೂರವಾದ ಎಷ್ಟೋ ನಿದರ್ಶನಗಳನ್ನು ಕಾಣಬಹುದು.

ವಿದ್ಯೆ ಕಲಿಯುವ ಹಂಬಲವಂತೂ ಇಡೀ ಕಾದಂಬರಿಯಲ್ಲಿ ಪ್ರಬಲವಾಗಿಯೇ ಬಂದಿದೆ. ಪಂಚಾಯಿತಿಯ ಮುಖಂಡನಾದ ನಂಜೇಗೌಡನನ್ನು ಕುರಿತು ಲಕ್ಕ "ಕೆಲವರಂತೂ ಇವಯ್ಯಯೊಳಿದಾಂಗೇ ಕುಣಿತಾವೆ. ಎದೆ ಸೀಳಿದ್ರೆ ಮೂರು ಅಕ್ಷರ ಇಲ್ದೆ ಇರಾದ್ರಿಂದ ಅಯ್ನಯೇನೂ ತಿಳಿಯಕ್ಕಿಲ್ಲ, ಈವಯ್ಯನ ಮಾತಿಗೆ ಯಾವತ್ತೂವೆ ಪರ್ದಾನ್ಯ".[೧] ಎಂದು ಹೇಳುವ ಮಾತಿನ ಹಿಂದೆ ಅವನ ವೈಯಕ್ತಿಕ ಅನಿಸಿಕೆ ಅಷ್ಟೇ ಅಲ್ಲದೆ ವಿದ್ಯೆಕಲಿಕೆಯು ಕೂಡ ವರ್ಗಹೋರಾಟದ ಅಸ್ತ್ರವಾಗಿದೆ. ಅಕ್ಷರ ಹೀನರಾಗಿದ್ದರಿಂದಲೇ ನಂಜೇಗೌಡನಂತವರಿಗೆ ಬಲಿಯಾಗಬೇಕಾಯಿತು ಎಂಬ ಸಶಕ್ತ ಅಭಿಪ್ರಾಯವಿದೆ. ಗುಲಾಮಗಿರಿಯಿಂದ ತಪ್ಪಿಸಿಕೊಳ್ಳಲು ಮುಕ್ತಿ ಹೊಂದಲು ಕಲಿಕೆಯೇ ಮೂಲ ಅಸ್ತ್ರ ಎಂಬುದನ್ನು ವ್ಯವಸ್ಥೆಗೆ ನಾಟುವಂತೆ ಹೇಳುತ್ತಾನೆ. ತನ್ನ ಜನಾಂಗದ ಅಜ್ಞಾನವನ್ನು ಅನಕ್ಷರತೆಯನ್ನು ಟೀಕಿಸುವಲ್ಲಿ ತಾನು ಅವರಂತೆ ಆಗದೆ ಕಲಿಕೆಯ ಬಯಕೆಯಲ್ಲಿ ಪರಂಪರೆಯಿಂದ ಮೇಲ್ವರ್ಗದವರು ಕತ್ತರಿ ಹಾಕುತ್ತಿರುವುದಕ್ಕೆ ಪ್ರತಿಭಟನೆ ಇದೆ ಹೋರಾಟದ ಹಂಬಲವಿದೆ.

ಇನ್ನೂ ಲಕ್ಕನ ದೊಡ್ಡಪ್ಪನ ಮಗ ಪುಟ್ಟಾರಿ ಜಾತಿಗಿಂತ ಹಣಕ್ಕಿರುವ ಶಕ್ತಿಯನ್ನು ಗಮನಿಸುತ್ತಾನೆ. ಜಮೀನು ಪಡೆಯುವಲ್ಲಿ ಮನುಷ್ಯನಂತಾಗಲು 'ಮರ್‍ಯಾದೆ' ಪಡೆಯಲು ಬಯಸುತ್ತಾನೆ. ಅಂದರೆ ಅದೇ ಸಾಧ್ಯ ಎಂದು ತಿಳಿಯುತ್ತಾನೆ. ಇದು ಪುಟ್ಟಾರಿಯ ಬಡಬಡಿಕೆ ಆಗಬೇಕಾದುದಲ್ಲ, ಅದರ ಹಿಂದೆ ವಾಸ್ತವದ ಅನುಭವ ಇದೆ. ಅಂಥ ವಾಸ್ತವದ ಹಿಂದೆ ವೈಜ್ಞಾನಿಕ ಸತ್ಯ ಕೂಡ ಇರುವುದೇ ಸಾಬೀತಾಗುತ್ತದೆ. "ಉಚ್ಚ" ಜಾತಿಯಲ್ಲಿ

---

೧)ಚದುರಂಗರ ಸಮಗ್ರ ಕಾದಂಬರಿಗಳು-ಚದುರಂಗ-ಸಂಪುಟ-೨, ಪುಟ ಸಂಖ್ಯೆ-೧೯೫

ಜಮೀನೂ ಸಂಗ್ರಹ ಆಗಿರುವುದೇ ವಾಸ್ತವ, ಹೆಚ್ಚಿನ ಎಲ್ಲಾ ಕೃಷಿಕ ಕಾರ್ಮಿಕರು ಕೆಳ ಮತ್ತು ಮಧ್ಯಮ ಜಾತಿಗೆ ಸೇರಿದವರಾಗಿದ್ದಾರೆ. ಭೂಮಿ ಕುಟುಂದವಾರುವಾಗಿಯಷ್ಟೇ ಅಲ್ಲದೆ ರೀತಿ ಜಾತಿ ಜನಾಂಗವಾರುವಾಗಿಯೂ ಅಸಮಾನತೆ ಎದ್ದು ಕಾಣುತ್ತದೆ. ಹಳ್ಳಿಯಲ್ಲಿ ವಿಶೇಷ
ಮಧ್ಯಮ ಜಾತಿಗೆ ಸೇರಿದವರಾಗಿದ್ದಾರೆ. ಭೂಮಿ ಕುಟುಂದವಾರುವಾಗಿಯಷ್ಟೇ ಅಲ್ಲದೆ ರೀತಿ ಜಾತಿ ಜನಾಂಗವಾರುವಾಗಿಯೂ ಅಸಮಾನತೆ ಎದ್ದು ಕಾಣುತ್ತದೆ. ಹಳ್ಳಿಯಲ್ಲಿ ವಿಶೇಷ
ಸ್ಥಾನ, ಅಂತಸ್ತುಗಳು ಭೂಮಿಯ ಒಡೆತನದ ಮೇಲೆಯೇ ಹೆಚ್ಚು ಅವಲಂಬಿಸಿದೆ. ಗಳಿಕೆ ರೀತಿ ಮತ್ತು ಪ್ರಮಾಣದ ಮೇಲೆ ಈ ಅಂತಸ್ತುಗಳು ಪ್ರಸ್ತಾಪಿಸುತ್ತದೆಂಬುದು ಪುಟ್ಟಾರಿಯ ಜೀವನದ ಅನುಭವವಾಗಿದೆ".[೧] ಈ ಮಾತು ಸಾರ್ವಕಾಲಿಕ ಸತ್ಯವೂ ಹೌದು.

ಪುಟ್ಟಾರಿಯು "ಅಣ ಇರೋರ್ಗೆ ತಾನೇ ಈ ಊರನಾಗೆ ಮರ್ವಾದೆ?" ಎಂದು ತಿಳಿದುಕೊಂಡು ಆರ್ಥಿಕವಾಗಿ ಸಬಲನಾಗುವುದನ್ನು ಬಯಸುತ್ತಾನೆ. ವೈಯಕ್ತಿಕ ಆಶೆಯಾಗಿದ್ದರೂ ಆಂತರ್ಯದಲ್ಲಿ ಜಾತಿ ವ್ಯವಸ್ಥೆಯನ್ನು ಮೀರಿ ಸಾಮಾಜಿಕ ಸ್ಥಾನವನ್ನು ಭದ್ರಪಡಿಸಿಕೊಳ್ಳುವ ಹಂಬಲವನ್ನು ಬಂಡವಾಳಶಾಹಿಯ ನಾಶವನ್ನು ವಿಸ್ತರಿಸುವ ಪ್ರಜ್ಞೆಯು, ಜಾತಿ-ದಲಿತತ್ವದ ನಿರ್ಮೂಲನೆಯೂ ಅವನಲ್ಲಿ ವ್ಯಕ್ತವಾಗಿದೆ.

ಪಂಚಾಯಿತಿ ಮತ್ತು ಸಾಮಾಜಿಕ ನ್ಯಾಯ:

ದರುಮನಹಳ್ಳಿಯಲ್ಲೂ ಯಾರಿಗೆ ಏನೇ ಸಮಸ್ಯೆ ಅನ್ಯಾಯವಾದರೂ ಅದನ್ನು ಪಂಚಾಯಿತಿ ಮುಖಂಡರ ಮುಂದಿಟ್ಟರೆ ಸತ್ಯ, ನ್ಯಾಯ, ಪ್ರಾಮಾಣಿಕತೆಗೆ ಬೆಲೆ ಇರದೆ ಅನ್ಯಾಯದ ಕುತಂತ್ರದ ತೀರ್ಪು ಹೊರಬೀಳುತ್ತದೆ. ಕಾದಂಬರಿಯ ಆರಂಭಕ್ಕೆ ಬರುವ ಬುಂಡನಹೈದ ಅವನ ಕಾಟವನ್ನು ತಾಳಲಾರದೆ ಜೀತಬಿಟ್ಟಾಗ ಪಂಚಾಯಿತಿ ಸೇರಿದಾಗ ಕ್ಯಾಟೆ ಬುಳ್ಳಪ್ಪ ಚೌಕಾಸಿ ಮಾಡಿ ಗಂಗಪ್ಪನ ಆಳನ್ನು ತಾನು ಹಾರಿಸಿಕೊಂಡು ಒಯ್ದ. ಈ ಗಂಗಪ್ಪ ಮತ್ತು ಬುಳ್ಳಪ್ಪ ಇವರ ನಡುವಿನ ಸಂಬಂಧ ಕೌರವ ಮತ್ತು ಪಾಂಡವರ ನಡುವಿನ ಸಂಬಂಧವಿದ್ದಂತೆ. ಇವರ ಈ ದ್ವೇಷದ ಉರಿ ಸುಟ್ಟು ಹಾಕಿದ್ದು ಕೊನೆಗೆ ಬುಂಡನ ಹೈದನ

---

೧)ಕನ್ನಡ ಕಾದಂಬರಿಗಳಲ್ಲಿ ವರ್ಣ ಮತ್ತು ವರ್ಗ ಸಂಘರ್ಷ-ಆರ್.ವ್ಹಿ.ಭಂಡಾರಿ, ಪುಟ ಸಂಖ್ಯೆ-೧೩೨

ಸೌಖ್ಯವನ್ನು ಬುಳ್ಳಪ್ಪನ ಮೇಲೆ ಸೇಡುತೀರಿಸಿಕೊಳ್ಳಲು ಗಂಗಪ್ಪನು ಆಳು ಬುಂಡನ ಹೈದನನ್ನು ಆರಿಸಿಕೊಳ್ಳುತ್ತಾನೆ. ಗಂಗಪ್ಪ ಮತ್ತು ಬುಳ್ಳಪ್ಪರ ಸಂಬಂಧದ ಪರಿಣಾಮವಾಗಿ ಬುಂಡನ ಹೈದ ಕಾಲುಮುರಿದುಕೊಂಡು ಮೈಸೂರಿನ ಆಸ್ಪತ್ರೆಯಲ್ಲಿ ಬಿದ್ದುಕೊಳ್ಳುವಂತಾಗುತ್ತದೆ. ಇದನ್ನು ಗಮನಿಸಿದಾಗ ಮೇಲ್ವರ್ಗದವರು ಕೆಳವರ್ಗದವರನ್ನು ಅವರ ದುರ್ಬಲ ಪರಿಸ್ಥಿತಿಯನ್ನು ಮುಂದಿಟ್ಟುಕೊಂಡು ಅನುಕೂಲಕ್ಕೆ ತಕ್ಕಂತೆ ಹೇಗೆ ಬೇಕಾದರೂ ಬಳಸಿಕೊಳ್ಳುವ ಪ್ರವೃತ್ತಿಯನ್ನು ರೂಢಿಸಿಕೊಳ್ಳುವುದು ಈ ಮೇಲಿನ ಸಂಗತಿಯಿಂದ ವೇದ್ಯವಾಗುತ್ತದೆ. ಅವರಿಗೆ ಅವರದೇ ಸ್ವಾತಂತ್ರ್ಯವಿದ್ದರೂ ಅದನ್ನು ಕಿತ್ತುಕೊಂಡು ತಮ್ಮ ಪ್ರಭಲತ್ವವನ್ನು ಅಧಿಕಾರವನ್ನೇ ಸ್ಥಾಪಿಸುವುದನ್ನು ಈ ಘಟನೆಯ ಮೂಲಕ ಸ್ಪಷ್ಟವಾಗುತ್ತದೆ.

ಈ ಮೇಲಿನ ಸಂಗತಿಯನ್ನೇ ನೆನಪಿಸಿಕೊಂಡು 'ಪಂಚಾಯಿತಿ' ಇರುವುದೇ ಉತ್ತಮರ-ಉಳ್ಳವರ ಪರವೆಂಬುದನ್ನು ಅರಿತುಕೊಂಡು ನೊಂದು ಪಂಚಾಯಿತಿಯ ನೀತಿಯನ್ನು ಪ್ರತಿಭಟಿಸುವಲ್ಲಿ ವ್ಯಕ್ತವಾದ ಪ್ರತಿಭಟನೆ ದಲಿತ-ಜನಾಂಗದ ಸಾಮೂಹಿಕವಾದ ಮೌನದ ಪ್ರತಿಭಟನೆಯಾಗಿದೆ. "ಬೊಡ್ಡಿಮಕ್ಕಳು ಉದ್ದಕ್ಕೂ ನಮ್ಮ ಲಗ್ಗೆ ಚಂಡು ಮಾಡ್ಕಂಡು ಬುಟ್ರಲ್ಲ".[೧] ಅಂತ ಕ್ಯಾಪದಿಂದ ಕ್ಯಾಕರಿಸಿ ಪಕ್ಕದ ಬೇಲಿಗೆ ಉಗುಳುವ ಲಕ್ಕ ಪಂಚಾಯಿತೋರು ಮಾಡೋ ನ್ಯಾಯದ ದಾಳ ಉಳೋದು ಕೊನಿಕೆ, ಉತ್ತಮರ ಕಡೀಕೆಯ ಎಂದು ಹೇಳುವ ಮಾತಿನಲ್ಲಿ ಪರಂಪರೆಯಿಂದ ಮೇಲ್ವರ್ಗದವರು ಕೆಳವರ್ಗದವರನ್ನು ತಮ್ಮ ಸ್ವಾರ್ಥಕ್ಕೆ ಬಳಸಿಕೊಂಡವರೆಂಬ ಸಿಟ್ಟು ಅವಮಾನದ ಪ್ರತಿಕ್ರಿಯೆ ವರ್ಗದ ವಿರುದ್ಧ ತಿರಸ್ಕಾರ ಮನೋಭಾವವಿದೆ.

ಮೇಲ್ವರ್ಗದ ರುಕ್ಮಿಣಿ ಮತ್ತು ದಲಿತ ವರ್ಗದ ಲಕ್ಕ ಇವರಿಬ್ಬರ ಅನೈತಿಕ ಸಂಬಂಧದ ಕುರಿತು ನ್ಯಾಯ ಪಂಚಾಯಿತಿ ನಡೆಯುವ ಸಂದರ್ಭದಲ್ಲಿ ಶೂದ್ರನಾದ ದೊಳ್ಳಪ್ಪ ಪಂಚಾಯಿತಿ ಸಭೆಗೆ ರುಕ್ಮಿಣಿಯನ್ನು ಕರಿಸಬೇಕು ಇಲ್ಲದಿದ್ದರೆ ನ್ಯಾಯತೀರ್ಮಾನದಲ್ಲಿ

---

೧)ಚದುರಂಗರ ಸಮಗ್ರ ಕಾದಂಬರಿಗಳು-ಚದುರಂಗ-ಸಂಪುಟ-೨, ಪುಟ ಸಂಖ್ಯೆ-೧

ವ್ಯತ್ಯಾಸವಾಗಬಹುದೆಂದು ಹೇಳಿದಾಗ ಬ್ರಾಹ್ಮಣನಾದ ಕೇಶವಯ್ಯ ಆತನ ಹೇಳಿಕೆಯನ್ನು ಪ್ರತಿಭಟಿಸುವನು. ಕೇಶವಯ್ಯನ ವಿರೋಧದಲ್ಲಿ ಬ್ರಾಹ್ಮಣತ್ವದ ಮರ್ಯಾದೆಯನ್ನು ಕಾಪಾಡುವ ಕಾಳಜಿ ಇದೆ. ಕೇಶವಯ್ಯನ ಧೋರಣೆಯನ್ನು ನಂಜೇಗೌಡ ವಿಸರೋಧಿಸುವನು. ಆದರೆ ಕೇಶವಯ್ಯನ ವಿಚಾರವೇ ಬಲಗೊಂಡಾಗ ನಂಜೇಗೌಡ ಲಕ್ಕನ ಮೇಲೆ ಬುಸುಗುಡುವನು. ಇವರಿಬ್ಬರಿಗೂ ಲಕ್ಕ ಮತ್ತು ರುಕ್ಮಿಣಿಯ ವಿಚಾರದಲ್ಲಿ ನ್ಯಾಯವನ್ನು ಒದಗಿಸುವುದಕ್ಕಿಂತ ತಮ್ಮ ವರ್ಗ-ಜಾತಿ ಪ್ರತಿಷ್ಠೆಯನ್ನು ಉಳಿಸಿಕೊಳ್ಳುವುದು ಮುಖ್ಯವಾಗುತ್ತದೆ. ಬ್ರಾಹ್ಮಣ್ಯದ ಪಾವಿತ್ರ್ಯ ನಾಶವನ್ನು ತಪ್ಪಿಸುವ ಪ್ರಯತ್ನ ಕೇಶವಯ್ಯನದಾದರೆ, ನಂಜೇಗೌಡನದು ಬ್ರಾಹ್ಮಣ್ಯದ ಪಾವಿತ್ರ್ಯದ ಬಣ್ಣವನ್ನು ಬಯಲಿಗೆಳೆಯುವುದು ಇವನ ಉದ್ದೇಶದ ಪ್ರಯತ್ನವಾಗಿದೆ. ಏನೇ ಆದರೂ ಇದಕ್ಕೆ ಬಲಿಯಾಗುವುದು ಲಕ್ಕನಂತ ಕೆಳವರ್ಗದವರೆ ವಿನಃ ಬೇರೆ ಯಾರು ಅಲ್ಲ. ಬ್ರಾಹ್ಮಣ ಮತ್ತು ಬ್ರಾಹ್ಮಣೇತರರ ಜಾತಿದ್ವೇಷಕ್ಕೆ ಸರಿಯಾದ ನ್ಯಾಯ ಸಿಗದೆ ಲಕ್ಕನಂತಹ ನೊಂದವರು ಉರುಳುವ ದಾಳವಾಗುತ್ತಾರೆ.

ಲಕ್ಕನಿಗೆ ರುಕ್ಮಿಣಿಯ ಮೇಲೆ ಅಪಾರವಾದ ಗೌರವವಿದೆ. ಪಂಚಾಯಿತಿಯವರ ಕಚ್ಚಾಟವನ್ನು ಕಂಡಾಗ ತಾನು ಹಿಂದೆ ಕಂಡ ಹೆಂಗಸಿನ ಹೆಣವನ್ನು ಹದ್ದುಗಳು ಕುಕ್ಕಿ ತಿನ್ನುವ ದೃಶ್ಯ ನೆನಪಾಗುತ್ತದೆ. ಪಂಚಾಯಿತಿಯ ಬಗ್ಗೆ ಹೇಸಿಗೆಯೆನಿಸುತ್ತದೆ. ರುಕ್ಮಿಣಿಯ ಅಸಹಾಯಕತೆಯ ಅರಿವು ಲಕ್ಕನ ಮಾನವೀಯ ಹೃದಯಕ್ಕೆ ಅರ್ಥವಾಗುತ್ತದೆ. ಆದರೆ ಭ್ರಷ್ಟತೆಯಿಂದ ಅಪ್ರಮಾಣಿಕತೆಯಿಂದ ಅನ್ಯಾಯದ ತೀರ್ಪು ನೀಡುವ ಪಂಚಾಯಿತಿಯವರಿಗೆ ಇದು ಅರ್ಥವಾಗುವುದೇ ಇಲ್ಲ. ರುಕ್ಮಿಣಿಯ ಬಗ್ಗೆ ಗೌರವವಿರುವ ಲಕ್ಕನಿಗೆ ಇವಳ ಹೊಣೆ ಮತ್ತು ಹಿಂಸೆ ಅವಮಾನದಿಂದ ಪಾರುಮಾಡುವ ಜವಾಬ್ದಾರಿ ಲಕ್ಕನದಾಗುತ್ತದೆ. ಇದಕ್ಕಾಗಿ ಯಾವ ಹಿಂಸೆಬೇಕಾದರೂ ಸಹಿಸಲು ಸಿದ್ಧ. ಇದರಿಂದ ಅವನ ಉದಾತ್ತ ವಿಶಾಲ ಮನೋಭಾವನೆಯು ವ್ಯಕ್ತವಾಗುತ್ತದೆ.

ವರ್ಗ ಮತ್ತು ವರ್ಣ ವ್ಯವಸ್ಥೆಯಲ್ಲಿ ಸಿಕ್ಕು ಸ್ವಾತಂತ್ರ್ಯ ಸಮಾನತೆಯನ್ನು ಕಳಕೊಂಡ ಸ್ತ್ರೀ ವಿಮೋಚನೆ ಕೂಡ ದಲಿತ ವರ್ಗ ಹೋರಾಟದಲ್ಲಿಯೇ ಅಡಗಿರುವುದೂ ಇಲ್ಲಿ

ಇಂಗಿತವಾಗಿದೆ. ಆದರೆ ಲಕ್ಕನಿಗೆ ತನ್ನಿಂದ ಕಟುವಾದ ಶಿಕ್ಷೆ ಆಗುತ್ತದೆ ಎಂದು ತಿಳಿದ ಬ್ರಾಹ್ಮಣತ್ವದಲ್ಲಿ ಸಿಲುಕಿದ ರುಕ್ಮಿಣಿಯು ಲಕ್ಕನನ್ನು ಕಾಪಾಡುವ ವಿಚಾರದಲ್ಲಿ ಮುಂದಾಗದೆ ಅಸಾಹಯಕಳು ಸೋಲನ್ನು ಅನುಭವಿಸುತ್ತಾಳೆ. ಮುಕ್ತವಾಗಿ ಬದುಕುವ ತನಗನ್ನಿಸಿದನ್ನು ಹೇಳುವ ಹಕ್ಕನ್ನು ಕಳೆದು ಕೊಳ್ಳುತ್ತಾಳೆ. ಪಂಚಾಯಿತಿಯ ಪಕ್ಷಪಾತ ನಿಯಮಗಳಿಂದ ನೊಂದು ಸಂದಿಗ್ಧ ಪರಿಸ್ಥಿತಿಗೆ ಒಳಗಾಗುವುದನ್ನು ನಿರೂಪಕರು ವಸ್ತುನಿಷ್ಠವಾಗಿ ನಿರೂಪಿಸಿದ್ದಾರೆ. ಲಕ್ಕ ಗಡಿಪಾರಾದರೂ ತನ್ನ ಪರಿಸರದಲ್ಲೂ ನೈತಿಕ ಬಲ ಬಲಗೊಳ್ಳುವುದನ್ನು ತಮ್ಮ ಮೇಲೆ ಎಸಗುವ ದೌರ್ಜನ್ಯವನ್ನು ಗಮನಿಸುವ ಲಕ್ಕ ಎಚ್ಚೆತ್ತುಕೊಳ್ಳುವ ಅವನ ಚಲನಶೀಲತೆ ಹೊಸ ಬದುಕಿನ ಹುಡುಕಾಟ ಅವನ ಪ್ರಜ್ಞೆಯ ವಿಕಾಸದಲ್ಲಿ ಪ್ರಚೋದನೆಗೆ ಒಳಪಡುತ್ತಲೇ ಇರುತ್ತದೆ.

ದರುಮನಹಳ್ಳಿಯ 'ನ್ಯಾಯದ' ಉದ್ದೇಶ ಏನೇ ಇದ್ದರೂ ಅವರಿಗೆ ಸಿಕ್ಕ ಗಡಿಪಾರಿನ ಶಕ್ತಿಯ ಮೂಲಕ ಅವನ ಬಿಡುಗಡೆಯೂ ನಿರ್ಧಾರಗೊಂಡು ಬಿಡುತ್ತದೆ. ಪುರುಷ ಪ್ರಧಾನ ಸಮಾಜದಲ್ಲಿ ಪುರುಷರಿಗಿದ್ದ ಸಾಧ್ಯತೆಗಳನ್ನು ಅವನು ವರ್ಗಾಧಾರಿತ ತಾರತಮ್ಯವನ್ನು ಮೀರಿ ಪಡೆದುಕೊಳ್ಳಲು ಶಕ್ತನಾಗುತ್ತಾನೆ. ಅವನ ಕೇರಿಯೂ ಅವನ ಬಗೆಗೆ ಸಹಾನೂಭೂತಿ ವ್ಯಕ್ತಪಡಿಸುತ್ತದೆ. ಪಕ್ಕದ ಶಕುನಿಕೊಪ್ಪಲಲ್ಲಿ ಅವನಿಗೆ ಆಶ್ರಯವೂ ಸಿಗುತ್ತದೆ. ಕಲ್ಯಾಣಿಯಂಥ ಅವ್ವಾ ಅವನ ಹೊಟ್ಟೆ ತುಂಬಿರುವಾಗ ತನ್ನ ಒಡಲನ್ನು ಸುಟ್ಟುಕೊಳ್ಳಲು ತಯಾರಾಗುತ್ತಾಳೆ. ಅದನ್ನೆಲ್ಲಾ ನೋಡುವಾಗ ಲಕ್ಕ ಈ ಸಂದರ್ಭದಲ್ಲಿ ಕಳೆದುಕೊಂಡದ್ದು ಆಗಾದವಾಗನೂ ಉಳಿಯುವುದಿಲ್ಲ. ಅದಕ್ಕೆ ವಿರುದ್ಧದ ನೆಲೆಯಲ್ಲಿ ರುಕ್ಮಿಣಿ ಎಲ್ಲವನ್ನು ಕಳೆದುಕೊಳ್ಳುವ ಪ್ರಸಂಗ ಇದು. ಮೇಲುವರ್ಗಕ್ಕೆ ಸೇರಿಯೂ ಪುರುಷ ಪ್ರಧಾನ ಸಮಾಜದ ಲಿಂಗಾಧಾರಿತ ಅಸಮಾನತೆಯ ಶೋಷಣೆಯ ಪರಮಾವಧಿ ಹಂತವನ್ನು ಅವಳ ಬದುಕು ತಲುಪುತ್ತದೆ. ಅಗ್ರಹಾರದ ಧರ್ಮದ ಕೈ ಅದರಲ್ಲಿ ಹಿರಿದಾದ ಪಾತ್ರವಹಿಸುತ್ತದೆ. ಅಲ್ಲಿಯೂ ಕೃಷ್ಣಶಾಸ್ತ್ರಿಗಳದು ಏನು ಮಾಡಲಾಗದ ನಿರ್ಬಲ, ನಿರ್ವೀರ್ಯ ಪರಿಸ್ಥಿತಿ.

ರುಕ್ಮಿಣಿಯ ಕೇಶಮುಂಡನ ವಿಚಾರದಲ್ಲಿ ಹಾಗೂ ಲಕ್ಕನನ್ನು ಪಂಚಾಯಿತಿ ಶಿಕ್ಷಿಸುವ ಸಂದರ್ಭದಲ್ಲಿ ಕೃಷ್ಣಶಾಸ್ತ್ರಿಗಳು ಬ್ರಾಹ್ಮಣವರ್ಗಕ್ಕೆ ಸೇರಲ್ಪಟ್ಟವರಾದರೂ ಬ್ರಾಹ್ಮಣತ್ವದ

ಸಂಪ್ರದಾಯಸ್ಥರ ವಿರುದ್ಧ ಪ್ರತಿಭಟಿಸುವಲ್ಲಿ ಮಾನವೀಯತೆ ವೈಚಾರಿಕತೆಯಿದೆ. ಬ್ರಾಹ್ಮಣ ಮತ್ತು ಬ್ರಾಹ್ಮಣೇತರರ ನಡುವೆ ನಡೆದಿರುವ ಸಂಘರ್ಷ ಪ್ರತಿಭಟನಾತ್ಮಕವಾಗಿದೆ. ಇವರ ಪ್ರತಿಭಟನೆ ಅಸಮಾನತೆಯನ್ನು ಹೆಚ್ಚಿಸುವಂತದ್ದು. ಆರ್ಥಿಕ ಮತ್ತು ಪ್ರಭುತ್ವ ಶಕ್ತಿಯನ್ನು ಬಲಪಡಿಸುವಂತಹದು. ಪರಸ್ಪರ ಸಂಘರ್ಷದಲ್ಲಿ ಅಧಿಕಾರತ್ವವನ್ನು ಉಳಿಸಿಕೊಳ್ಳುವ ಪೈಪೋಟಿ ಇದೆ. ಶೋಷಕರ ವಿರುದ್ಧ ಶೋಷಿತರ ಪ್ರತಿಭಟನೆ ಸಮಾನತೆ ಮತ್ತು ಮಾನವೀಯತೆಯನ್ನು ಬಯಸುವಂತಹದು. ಹೀಗೆ ವರ್ಗ-ವರ್ಣಗಳ ನಡುವೆ ನಡೆಯವ ಪರಸ್ಪರ ಪ್ರತಿಭಟನೆ ಯೋಚಿತವಾದುದಲ್ಲದೆ ಸಹಜವಾದ ಬದುಕಿಗೆ ಅನಿವಾರ್ಯ ಎಂಬಂತೆ ನಡೆದಿದೆ. ಬ್ರಾಹ್ಮಣತ್ವದ ವಿರುದ್ಧ ಎಷ್ಟೇ ಹೋರಾಡಿದರೂ ಹಳ್ಳಿಯ ಶ್ರೇಣಿಕೃತ ವ್ಯವಸ್ಥೆಯ ಅನ್ಯಾಯಗಳನ್ನು ಕೇಂದ್ರಿಕೃತ ಆಡಳಿತವೂ ಮುಂದುವರೆಸುವ ಸಮರ್ಥಿಸುವ ಸೂಚನೆಯನ್ನು ಕೊಡುತ್ತದೆ.

ಹಲಗ ಆತ್ಮಹತ್ಯೆ ಮಾಡಿಕೊಂಡಿದ್ದ ಅದಕ್ಕೆ ಕಾರಣ ಟಗರೂನು ಎಂದು ಪಂಚಾಯಿತಿಯವರು ನೂರು ರೂಪಾಯಿ ದಂಡ ಹಾಕಿ ಹಂಚಿನುಂಗಿದ್ದರು. ಇದರಲ್ಲಿ ಒಬ್ಬ ತನಗೆ ಕಡಿಮೆ ಹಣ ಸಿಕ್ಕಿದೆ ಎಂಬ ಕಾರಣಕ್ಕಾಗಿ ಪೋಲಿಸರಿಗೆ ಅರ್ಜಿ ಹಾಕುತ್ತಾನೆ. ಆದರೆ ನಂಜೇಗೌಡ, ಶಾನುಭೋಗ ಮುಂತಾದವರು ನ್ಯೂಮೋನಿಯಾ ಕಾಯಿಲೆಯಿಂದ ಸತ್ತ ಎಂದು ಸುಳ್ಳು ಹೇಳುವಾಗ ಇದನ್ನು ನಂಬದ ಪೋಲಿಸರು ಜೈಲಿಗೆ ಹಾಕುತ್ತೇನೆ ಎಂದಾಗ ಲಕ್ಕನಿಗೆ ಮೃಷ್ಟಾನ ತಿಂದಷ್ಟು ಸಂತೋಷವಾಯಿತು. "ಈ ಯಜಮಾನ್ರು ನಮ್ಮೂರಲ್ಲಿ ಮಾತುಬಾರಿ ಮನಸ್ರು ಅಂತ ಎಲ್ಲರ ಬಾಯಲ್ಲಿ ಉಳ್ಳಾಡ್ತಾರೆ, ಇಂತೋರು ಈವಯ್ಯ ಎಂತೆಂತ ಪೈಲ್ವಾನ ವರಸಿ ಆಕಿ ಬೆಪ್ಪು ಗೂಡಿಬಿಟ್ಟ, ಹೀಗೆಂದು ಆ ಇನ್ಸ್‌ಪೆಕ್ಟರ್‌ನ ವಿಷಯವಾಗಿ ಲಕ್ಕನಿಗೆ ಬಹಳ ಹೆಮ್ಮೆಯೆನಿಸಿತು. ಮಂಕು ಬಡಿದವರ ಹಾಗೆ ಇನ್ನೂ ಜಗಲಿ ಮುಂದುಗಡೆಯೇ ನಿಂತಿದ್ದ ಶ್ಯಾನುಭೋಗ ಪಿಸುಮಾತಿನಲ್ಲೆ ಖಾರತುಂಬಿ, "ಅಯ್ಯೋ ನಿಮ್ಮ ಜಾತಿಗೆ ಕೀಳು ಕಣೋ- ಎಡಗೈ ಎಂದರು ತಿರಸ್ಕಾರವಾಗಿ"... ಲಕ್ಕನಿಗೆ ಇನ್ಸ್‌ಪೆಕ್ಟರ್ ಗೂಳಪ್ಪನ ತಾರೀಪು ಹೆಚ್ಚಿತು. "ನಮ್ಮೊಲ್ಲೊಬ್ಬ ಅದೇಟು ಚೆಂದಾಗಿ ನ್ಯಾಯ ಆಡ್ಡ ಈ ಸಾಸ್ತ್ರ ಪುರಾಣ ಓದಿ ನಮ್ಮೂರ ಗಟಾನುಗಟಿಗಳ ಅದೇಟು ಸಲೀಸಾಗಿ ಮಾತ್ನಲ್ಲೆ ಸೋಲಿಸ್ದ. ಬೇಸ್

ಬೇಸ್".[೧] ಲಕ್ಕನಿಗೆ ಎದೆ ತುಂಬಿ ಬಂತು. ಈ ಸನ್ನಿವೇಶದಲ್ಲಿ ಲಕ್ಕನ ಪ್ರತಿಕ್ರಿಯೆ ಅಕಸ್ಮಾತ್ ಆಗಿರದೆ ಸಂಘರ್ಷ ಪ್ರತ್ಯಕ್ಷವಾಗಿರದ ಸಂದರ್ಭದ ಸಮಾಜದಲ್ಲಿ ನಡೆಯುವ ವೈಯಕ್ತಿಕ ಪ್ರತಿಕ್ರಿಯೆಯ ಸಂಘರ್ಷದ ಒಳಕರ್ಷಣೆಯನ್ನು ತೋರ್ಪಡಿಸುತ್ತದೆ. ಈ ಮೂಲಕವಾದರೂ ತಮಗೆ ನ್ಯಾಯ ಸಿಗಬಹುದೆಂಬ ಹಂಬಲ ಇವನದಾಗಿದೆ.

ಕಾದಂಬರಿಯ ಮೊದಲ ಭಾಗದಲ್ಲಿ ಲಕ್ಕ ನಂಜೇಗೌಡರಿಂದ ಆಜ್ಞಾಪಿತನಾಗಿ ಮಾರಿಗುಡಿ ಅಣ್ಣಂದೀರಿಂದ ಜಪ್ಪಯ್ಯನ ಮಠದ ಸ್ವಾಮಿಗಳಿಗೆ ಔಷಧಿಯನ್ನು(ಮದ್ಯ) ಒಂದು ಗೋಣಿಚೀಲದಲ್ಲಿ ಹೊತ್ತು ತಂದುಕೊಟ್ಟಾಗ ಖುಷಿಗೊಂಡ ನಂಜೇಗೌಡ ಲಕ್ಕನ ಬೆನ್ನು ತಟ್ಟುತ್ತಾನೆ. ಆಗ ಲಕ್ಕ ನನ್ನನ್ನು ಮುಟ್ಟಿಬಿಟ್ಟಿರಲ್ಲ ಎಂದು ಹೇಳುತ್ತಾನೆ. ಇದಕ್ಕೆ ನಂಜೇಗೌಡ "ತೊಳಕೊಂಟರಾಯ್ತು" ಎಂದಾಗ ಈ ಮಾತು ಲಕ್ಕನಲ್ಲಿ ಅಸಮಾಧಾನವನ್ನು ಮೂಡಿಸಿದರೂ ಯಾವುದೇ ಒಂದು ಅನುಭವೂ ಅವನನ್ನು ಎಚ್ಚೆತ್ತುಕೊಳ್ಳುವಂತೆ ಮಾಡುವುದರ ಜೊತೆಗೆ ತೋರಿಸಿಕೊಳ್ಳಲಾಗದ ಅಂತರ್ಯದಲ್ಲಿ ವ್ಯವಸ್ಥೆಯ ಬಗೆಗೆ ಆಕ್ರೋಶವಿರುವುದನ್ನು ಗುರುತಿಸಬಹುದು.

ಕಡ್ಲೆ ಮಠದ ಹಣ್ಣು ಸ್ವಾಮಿಗಳು ಸ್ನಾನ ಮಾಡಿ ದೇವರ ಪೂಜೆಗೆಂದು ಹೊರಬಂದಾಗ, ಭಕ್ತನೊಬ್ಬ ಆಡಿದ ಹೊಲಸು ಮಾತನ್ನು ಕೇಳಿ ಮತ್ತೊಮ್ಮೆ ಸ್ನಾನಗೃಹ ಪ್ರವೇಶಮಾಡುತ್ತಾರೆ. ಮಡಿಮಂತನ ಬ್ರಾಹ್ಮಣನ ತೋರಿಕೆಯ ಸಾಚಾಪ್ರವೃತ್ತಿ ವ್ಯಂಗ್ಯವೆನಿಸುತ್ತದೆ. ಇದೇ ಬ್ರಾಹ್ಮಣರು ಹೊಲಗೇರಿಯ ಸಿಕ್ಕ ಸಿಕ್ಕ ಹೆಣ್ಣುಗಳನ್ನು ಸುಖಿಸುವಾಗ ಯಾವ ಮೈಲಿಗೆಯೂ ಕಾಣಬರುವುದಿಲ್ಲ. ಒಳ ಪ್ರಪಂಚವೆಲ್ಲಾ ಅನಾಚಾರ ಅನೈತಿಕತೆಯೆ ತುಂಬಿಕೊಂಡಿರುವಾಗ, ಹೊರ ಪ್ರಪಂಚದಲೆಲ್ಲಾ ಆಚಾರ ಮಡಿ ಮೈಲಿಗೆ ಎಲ್ಲವೂ ಬ್ರಾಹ್ಮಣ ವ್ಯವಸ್ಥೆಯು ಟೀಕೆಗೆ ವ್ಯಂಗ್ಯಕ್ಕೆ ಗುರಿಯಾಗುತ್ತದೆ.

ಶಿವಾಚಾರದ ಗಂಗಿಯನ್ನು ಕರೆಯುವ ಪಂಚಾಯಿತಿಗೆ ಲಕ್ಕ ಬಂದಾಗ ಅವಳು ಅಡ್ಡಿಯಲ್ಲಿ ಇರದನ್ನು ಕಂಡು ಪಡಸಾಲೆಗೆ ಬಂದಾಗ ಅದನ್ನು ನೋಡಿದ ಗಂಗಿ "ಲೋ ಲಕ್ಕ ಯೇನ್ಲ ಇದು ನಿನ್ನ ದಾಸ್ಟಿಕ?... ನಮ್ಮ ಪಡಸಾಲೆ ವಳೀಕೆ ಕಾಲಡೊವಂಗೆ ಅದೆಯೆನ್ಲ?

---

೧)ಚದುರಂಗರ ಸಮಗ್ರ ಕಾದಂಬರಿಗಳು-ಚದುರಂಗ-ಸಂಪುಟ-೨, ಪುಟ ಸಂಖ್ಯೆ-೧೯೪

ಜಾತಿಯೆನು? ನನ್ನ ಜಾತಿಯೇನು?".[೧] ಎಂದು ಅವನನ್ನು ಕೀಳುಜಾತಿಯವನೆಂದು ಅಧಿಕಾರದಿಂದ ಕೇಳೂವ ಮಾತಿನ ಹಾದಿನ ಉದ್ದೇಶವೆನೆಂದು ಸ್ಪಷ್ಟವಾಗುತ್ತದೆ. ಅದೇ ಲಕ್ಕನ ಮೇಲೆ ಗಂಗಿ ಮಳೆಯಲ್ಲಿ ನೆಂದು ಅವನ ಮೇಲೆ ಆಕ್ರಮಣ ಮಾಡಿದಾಗ ಜಾತಿ ನೆನಪಾಗಲಿಲ್ಲವೆಂಬ ಸಂಗತಿ ವಿಪರ್ಯಾಸವಾಗಿದೆ.

ನಿರೂಪಕರು ಅವದೂತನ ಪ್ರಸಂಗವನ್ನು ನಿರೂಪಿಸಿರುವುದು ಗಮನಿಸಿದರೆ, ಲಕ್ಕನ ತಾಯಿ ರೊಟ್ಟಿ ಮಾಡುವ ಸಂದರ್ಭದಲ್ಲಿ ರೊಟ್ಟಿಯನ್ನು ಗುಡಿಸಿಲಿನೊಳಕ್ಕೆ ನುಗ್ಗಿ ತೆಗೆದುಕೊಂಡು ಹೋದದ್ದನ್ನು ಕಂಡು ಉತ್ತಮನ್ನೊರು ಬರುವುದು ತಮ್ಮಂತವರ ಗುಡಿಸಿಲಿಗೆ ಸರಿಯಲ್ಲ ಎಂಬುವುದು ಅವರ ನಿಲುವು. ಆದರೆ ಈ ಅವದೂತ ಎನ್ನುವುದು ಇಲ್ಲವನ್ನು ಮೀರಿ ಬಂಡಾಯ ಎದ್ದವನು ಎಂಬುದು ಸ್ಪಷ್ಟವಾಗುತ್ತದೆ.

ಜಾತಿ ಹಿನ್ನೆಲೆಯಲ್ಲಿ ಲೈಂಗಿಕತೆ ಮತ್ತು ಪಾವಿತ್ರ್ಯತೆ:

ಕಾದಂಬರಿಯಲ್ಲಿ ಸ್ತ್ರೀಯರು ಲೈಂಗಿಕ ಶೋಷಣೆ, ಅತ್ಯಾಚಾರಕ್ಕೆ ಒಳಗಾಗುವುದನ್ನು ಎಳೆಎಳೆಯಾಗಿ ಕಾಣಬಹುದು. ಅದರಲ್ಲೂ ಜಾತಿ ಹಿನ್ನೆಲೆಯೂ ಲೈಂಗಿಕ ತೃಷೆಗೆ ಒಳಗಾಗಿ ನ್ಯಾಯ ಸಿಗದೆ ನೊಂದವರೇ ಹೆಚ್ಚು. ಕಾದಂಬರಿಯ ಕೇಂದ್ರ ಪಾತ್ರವಾದ ರುಕ್ಮಿಣಿ ಮಧ್ಯಮ ವರ್ಗದ ಬ್ರಾಹ್ಮಣ ಸಮುದಾಯದ ಸಾಮಾನ್ಯ ಮಹಿಳೆ. ಈ ಸಮುದಾಯದ ಅವಳನ್ನು 'ರಕ್ಷಣೆ' ನೀಡುವ ಸಾಕುವ ನೆಪದಲ್ಲಿ ಸಂಪ್ರದಾಯದ ಹೆಸರಿನಲ್ಲಿ ಸ್ವಾತಂತ್ರ್ಯವಿಲ್ಲದೆ ಕುಟುಂಬದ ಮೇಲೆ ಪ್ರತಿಯೊಂದಕ್ಕೂ ಅವಲಂಬಿತಳನ್ನಾಗುವಂತೆ ಮಾಡಿದೆ. ನಾಲ್ಕು ಗೋಡೆಗಳ ನಡುವೆ ಜೀವನಕ್ರಮ, ಮೌಲ್ಯಗಳನ್ನು ಕಟ್ಟಿಕೊಟ್ಟಿದೆ. ಅದನ್ನು ಮೀರಿ ನಡೆದಾಗ ಅಣ್ಣ-ಅತ್ತಿಗೆ, ಅಕ್ಕ-ಭಾವ ಈ ಯಾರ ಆಸರೆಯು ಸಿಗದೆಂದು ತಿಳಿದಾಗ ವ್ಯವಸ್ಥೆಯ ವಿರುದ್ಧ ಪ್ರತಿಭಟಿಸಲಾಗದೆ ಸ್ವತಂತ್ರವಾಗಿ ಜೀವನ ಮಾಡುವ ಕೆಚ್ಚು, ಎದೆಗಾರಿಕೆಯನ್ನು ತುಂಬದಿದ್ದರೆ ಕೊನೆಗೆ ಉಳಿದ ದಾರಿಯೊಂದೆ 'ಸಾವು'. ಆದರೆ ಇವಳ ಜೊತೆ ಶಿವುನಿಯನ್ನು ಹೋಲಿಸಿದರೆ ಜಾತಿಯಿಂದ ಕೆಳವರ್ಗಕ್ಕೆ ಸೇರಿದವಳಾದರೂ ಎಂತ ಸಂದರ್ಭದಲ್ಲೂ ಸಾವಿನ

೧)ಚದುರಂಗರ ಸಮಗ್ರ ಕಾದಂಬರಿಗಳು-ಚದುರಂಗ-ಸಂಪುಟ-೨,ಪುಟ ಸಂಖ್ಯೆ:೨೩೫

ದಾರಿಯನ್ನು ಬಯಸಿದವಳಲ್ಲಿ ದಲಿತವರ್ಗಕ್ಕೆ ಸೇರಿದವಳಾದರೂ ಕಟ್ಟು ಪಾಡುಗಳಿಲ್ಲದ ದಿಟ್ಟತನದಿಂದ ಗಟ್ಟಿಗಿತ್ತಿಯಾಗಿ ಕಂಡುಬರುತ್ತಾಳೆ. ಎಷ್ಟೋ ಸಾರಿ ಜಾತಿವ್ಯವಸ್ಥೆ ಮನುಷ್ಯನ ಬದುಕನ್ನು ದುರಂತದ ಸ್ಥಿತಿಗೆ ತಲುಪುತ್ತದೆ ಎಂಬುದನ್ನು ಇವರಿಬ್ಬರಲ್ಲಿ ಕಾಣಬಹುದು.

"ಬ್ರಾಹ್ಮಣ ಹೆಣ್ಣಿನ ಲೈಂಗಿಕ ನಡವಳಿಕೆಯ ಮೇಲೆ ಇರುವ ವಿಪರೀತವಾದ ಬಿಗಿಕ್ರಮಕ್ಕೆ ಜಾತಿಮೂಲವಾದ ಕಾರಣವೂ ಇರುವಂತಿದೆ. ಬ್ರಾಹ್ಮಣ ಸಂತತಿಯ, ಜಾತಿಯ 'ಪ್ರಾವಿತ್ರ್ಯ'ವನ್ನು ರಕ್ಷಣೆ ಮಾಡುವ ಹೊಣೆಯನ್ನೇ ಇಲ್ಲಿ ಹೆಣ್ಣಿನ ಮೇಲೆ ಹೊರಿಸಲಾಗಿದೆ. ಬ್ರಾಹ್ಮಣ ಗಂಡಿಗೆ ಕಟ್ಟುಪಾಡು ಇಲ್ಲದಿದ್ದರೂ ನಡೆಯುತ್ತದೆ. ಯಾಕೆಂದರೆ ಅವನ ಬ್ರಾಹ್ಮಣೇತರ ಹೆಂಗಸರ ಸಂಬಂಧದಿಂದ ಬಂದ ಮಕ್ಕಳ ಜಾತಿಗಳಿಗೂ ಬರುವುದಿಲ್ಲ. ಅವು ತಮ್ಮ ತಾಯಂದಿರೊಂದಿಗಿದ್ದು ಬ್ರಾಹ್ಮಣೇತರವಾದ ಆಯಾ ಸಮುದಾಯದಲ್ಲಿ ಸೇರಿಹೋಗುತ್ತದೆ. ಆದ್ದರಿಂದ ಬ್ರಾಹ್ಮಣ ಹೆಂಗಸರ ಕಟ್ಟಿನೊಳಗಿದ್ದರೆ ಅವರಿಗೆ ಅವರ ಬ್ರಾಹ್ಮಣ ಗಂಡಂದಿರಿಂದ ಮಾತ್ರ ಹುಟ್ಟುವ ಮಕ್ಕಳು ಹೇಗೂ ಬ್ರಾಹ್ಮಣರಾಗಿರುತ್ತಾರೆ. ಆದ್ದರಿಂದ ಹೆಂಗಸು ಗಡಿದಾಟದಿದ್ದರೆ ಜಾತಿಯನ್ನು ಕಾಯ್ದ ಹಾಗಾಯಿತು. ಬ್ರಾಹ್ಮಣ ಗಂಡಸರ ಸ್ವಾತಂತ್ರ್ಯವೂ ಉಳಿದ ಹಾಗಾಯಿತು. ಹೀಗೆ ಪಾವಿತ್ರ್ಯಕ್ಕೂ ಹೆಣ್ಣಿನ 'ಪಾವಿತ್ರ್ಯಕ್ಕೂ ನಂಟು ಬಿತ್ತು".[೧]

ಹೆಣ್ಣಿನ ಕಾಮ ವಿಚಾರಕ್ಕೆ ಸಂಬಂಧಿಸಿದಂತೆ ಇಲ್ಲೂ ಕೂಡ ಪಾವಿತ್ರ್ಯತೆಯನ್ನು ಕಾಪಾಡಿಕೊಳ್ಳುವುದು ಅಸಾಧ್ಯವೆನಿಸುತ್ತದೆ. ವಿವಾಹವಾದರೂ ಇನ್ನೊಬ್ಬನ್ನನ್ನು ಮದುವೆಯಾಗಿ ಬಾಳುತ್ತಿರುವ ಪಾತು ಹೆಣ್ಣು ಮಕ್ಕಳಿಗೂ ತಿಳಿಯದ ಹಾಗೆ ಎಚ್ಚರವಹಿಸಿ, ಲೈಂಗಿಕ ನಿಯಮಾಮಗಳನ್ನು ಹೊರುತ್ತ ಬದುಕಿನ ನಿರಾಶೆ, ತುಳಿತದಿಂದ ವ್ಯಗ್ರಳಾಗಿ ತನ್ನ ಅಸ್ತಿತ್ವ ಮೌಲ್ಯಗಳನ್ನು ಕಾಪಾಡಿಕೊಳ್ಳಲು ಹೋರಾಡುವ ಇವಳ ಬದುಕು ಧಾರಣವಾದುದು. ಇಲ್ಲಿ ಇವರಿಗೆ ಪಾವಿತ್ರ್ಯಕ್ಕಿಂತ ಬದುಕಿಗಾಗಿ ಹೋರಾಡುವುದೇ ಆಗಿದೆ.ರುಕ್ಮಿಣಿಯು ಕಾಮ ವಿಚಾರದಲ್ಲಿ ತಪ್ಪನ್ನು ಮಾಡಿದಾಗ ಅವಳ ಆ ಸ್ಥಿತಿಗೆ ಕಾರಣವೇನು ಅವಳ ಸ್ಥಾನಮಾನ

---

೧)ವೈಶಾಖ ವೈವಿಧ್ಯ-ಡಾ. ಬಸವರಾಜ ಸಬರದ, ಪುಟ ಸಂಖ್ಯೆ-೮೨

ಪರಿಸ್ಥಿತಿ ಎಂಥದ್ದು ಎಂಬುದನ್ನು ಯೋಚಿಸದೆ ಅವಳಿಗೆ 'ತಲೆಬೋಳಿಸಿ' ಕತ್ತೆಯ ಮೇಲೆ ಮೆರವಣಿಗೆ ಮಾಡುಸಬೇಕು ಅದು ನಮ್ಮ ಮನೆಯ ಮುಂದೆಯೇ ನಡೆಸಬೇಕು ಎಂದು ಲಕ್ಷ್ಮಮ್ಮ ಹೇಳುವ ಮಾತಿನ ಹಿಂದೆ ಬ್ರಾಹ್ಮಣ ಜಾತಿಯ ಹೆಂಗಸು ಪುರುಷ ಪ್ರಧಾನ ಸಮಾಜದಲ್ಲಿ ಜಾತಿಮೂಲದ ಆದ ಹೆಂಗಸಿನ ಮೌಲ್ಯವನ್ನು ಹೆಂಗಸರಲ್ಲಿ ಎಷ್ಟು ಯಶಸ್ವಿಯಾಗಿ ಬೇರೂರಿದೆ ಎಂಬುದನ್ನು ಲಕ್ಷ್ಮಮ್ಮನ ನಡುವಳಿಕೆಯನ್ನು ಗಮನಿಸಬಹುದು.

ಸುಶೀಲತ್ತೆಯೂ ಕೂಡ ಒಂದು ಸಂದರ್ಭದಲ್ಲಿ ರುಕ್ಮಿಣಿಯ ಕೂದಲನ್ನು ಕತ್ತರಿಸುವುದರ ಹಿಂದೆ ತನ್ನದೇ ಬ್ರಾಹ್ಮಣ ವರ್ಗಕ್ಕೆ ಸೇರಿದವಳಾದರೂ ತನಗಿಲ್ಲದ ಸ್ವತಂತ್ರ್ಯ ಇವಳಿಗೂ ಸಿಗಬಾರದು ಎಂಬ ಅಸೂಯೆಯಿಂದ ಬ್ರಾಹ್ಮಣತ್ವದ ಆಚಾರವನ್ನು ಪಾಲಿಸುವ ಮನೋಭಾವದವಳೋ? ಅಥವಾ ಸಣ್ಣತನದ ಪ್ರದರ್ಶನವೋ? ಒಟ್ಟಿನಲ್ಲಿ ವ್ಯವಸ್ಥೆಗೆ ಕಟ್ಟು ಬಿದ್ದು ಬದಲಾವಣೆಯನ್ನು ಸಹಿಸದೆ ಒದ್ದಾಡುವುದನ್ನು ಕಾಣಬಹುದು.

ಆದರೆ ಅದೇ ಕೆಳವರ್ಗಕ್ಕೆ ಸೇರಿದ ಕಲ್ಯಾಣಿಯೂ ಇದೇ ಸನ್ನಿವೇಶವನ್ನು ಕುರಿತು ಹೇಳುವ ಮಾತನ್ನು ಗಮನಿಸಿದರೆ ಯೇನಾರ ಆಗ್ಲಿ... ಈ ಬ್ರಾಂಬರು ತಲೆ ಬೋಳುಸ್ತೀವಿ ಊರು ಬುಟ್ಟೋಡುಸ್ತೀನಿ ಅನ್ನೋ ತನಕ ವೋಗ್ಬಾರದಾಗಿತ್ತು. ಬೊಸರಿ ಎಂಗಸು, ಅವಳ ಆ ತೋರ ಗೋಳು ಕಿಚ್ಚು ಊಯ್ಯಿಕೊ ಬ್ಯಾಡದೂಂತ ಅವುರಿಗ್ಗೆ ಅನ್ನಿಸಬ್ಯಾಡ" ಎಂಬ ಮಾತುಗಳಲ್ಲಿ ಕಾಣುವ ಕಲ್ಯಾಣಿಯ ಮಾನವೀಯ ಅನುಕಂಪವೂ ಪರಿಸ್ಥಿತಿಗೆ ಭಾಗಶಃ ಹೊಣೆಗಾರರೂ ಆದ ಕೃಷ್ಣಶಾಸ್ತ್ರಿಗಳಾಗಿರುವುದನ್ನು ಬಿಟ್ಟರೆ ಯಾವ ಬ್ರಾಹ್ಮಣ ಅಥವಾ ಬ್ರಾಹ್ಮಣತಿಯ ಬಾಯಲ್ಲೂ ಇಲ್ಲ. ತಮಗೆ ಅಪಾಯ ಉಂಟಾದೀತೆಂಬ ಹೆದರಿಕೆಯಿಂದ ಮಾಡಿದ ಶ್ರಾದ್ಧ, ಸಂತರ್ಪಣೆಗಳಿದೆಯೇ ಹೊರತು ತಮ್ಮ ಜೊತೆ ಬದುಕಿದ ಒಂದು ಜೀವಿಗೆ ಹೀಗಾಯಿತಲ್ಲ ಎಂಬ ಅನುಕಂಪವಾಗಲಿ, ವಿಚಾರವಾಗಲೀ ಇಲ್ಲ. ಒಂದು ವೇಳೆ ರುಕ್ಮಿಣಿಯ ಗೆಳತಿ ನಾಗಲಕ್ಷ್ಮಿಯಂಥವರು ಒಳಗೆ ಮರುಗಿರಬಹುದಾದರೂ ಏಕಕಮುಖವಾದ, ತೋರಿಕೆಗಾದರೂ ಆಚಾರ ನಿಷ್ಠವಾಗಿರಬೇಕಾದ ವ್ಯವಸ್ಥೆಯಲ್ಲಿ ಮರುಕ ಹೇಗೆ ಬಾಯ್ಬಿಡುತ್ತದೆ? ಅನುಕಂಪ ಹೇಗೆ ಕಣ್ತೆರೆಯುತ್ತದೆ?.

ಇದೆಲ್ಲವನ್ನೂ ಗಮನಿಸಿದಾಗ ಸ್ತ್ರೀಯರಲ್ಲಿ ಆಳವಾಗಿ ರಕ್ತಸಗತ್ತವಾಗಿ ಬೇರೂರಿರುವ ಈ ಗೊಡ್ಡು ಸಂಪ್ರದಾಯವನ್ನು ಕಿತ್ತೆಸೆಯುವ ೮೦ರ ದಶಕದಲ್ಲಿ ಬರೆದ ಕಾದಂಬರಿಯ ಸಾಮಾಜಿಕ ಸ್ಥಿತಿಗತಿಗೂ ಇವತ್ತಿನ ಆಧುನಿಕ ಸಂದರ್ಭದಲ್ಲಿ ಸಾಂಸ್ಕೃತಿಕವಾಗಿ ಚರ್ಚೆಗೊಳಪಡಿಸಿದಾಗ ಅಲ್ಪಸ್ವಲ್ಪ ಬದಲಾಣೆ ಶಿಕ್ಷಣದಿಂದ ಸಾಧ್ಯವಾಗಬಹುದೇ ಹೊರತು ಕೌಟುಂಬಿಕವಾಗಿ ನಂಬಿಕೊಂಡು ಬಂದಿರುವ ಬಿಗಿ ಕಟ್ಟಳೆಗಳನ್ನು ಮುರಿಯುವುದು ಸಂಪೂರ್ಣವಾಗಿ ಅಸಾಧ್ಯ ಎಂಬುದನ್ನು ಸಾರ್ವಕಾಲಿಕ ಸತ್ಯವಾಗಿದೆ.

ಬ್ರಾಹ್ಮಣ ವರ್ಗಕ್ಕೆ ಸೇರಿದ ರುಕ್ಮಿಣಿಯ ವರ್ತನೆಯನ್ನು ಗಮನಿಸಿದಾಗ ರುಕ್ಮಿಣಿ ಲಕ್ಕನ ಮೇಲೆ ಮಾಡಿದ ಆಕ್ರಮಣ ಬಲತ್ಕಾರವಲ್ಲ. ಒಂದು ಆಕಸ್ಮಿಕ. ಆ ಆಕಸ್ಮಿಕದ ಹಿಂದೆ ತೃಪ್ತಿಗಾಗಿ ಹಂಬಲಿಸುತ್ತಿದ್ದ ಅವಳ ಎಚ್ಚೆತ್ತ ಲೈಂಗಿಕಾಪೇಕ್ಷೆಯಿದೆ ಎನ್ನುವುದು ಸರಿ. ಆದರೆ ಲಕ್ಕನನ್ನು ಅದಕ್ಕೆ ಗುರಿಮಾಡಿದ್ದರ ಹಿಂದೆ ಕಾರಣಗಳಿವೆ. ಅವನ ಬಗೆಗಿದ್ದ ಅಭಿಮಾನ ಹಲವು ಚಿಕ್ಕ ಪುಟ್ಟ ಸಂಗತಿಗಳಲ್ಲಿ ವ್ಯಕ್ತವಾಗುತ್ತದೆ. ಈ ಅಭಿಮಾನದ ಜೊತೆಗೆ ಅವಳಿಗೆ ಅವನಲ್ಲಿ ನಂಬಿಕೆಯೂ ಇದೆ. ಈ ಮನಃಸ್ಥಿತಿಗಳ ಜೊತೆಗೆ ರುಕ್ಮಿಣಿಯ ಜಾತಿ ವರ್ಗದ ಹಿನ್ನೆಲೆಯೂ ಅವಳನ್ನು ಈ ಆಕಸ್ಮಿಕಕ್ಕೆ ಉತ್ತೇಜನ ನೀಡಿದೆ. ಅವನ ಜಾತಿ–ವರ್ಗದ ಹಿನ್ನೆಲೆ ಮೊದಲಾದವುಗಳು ಅವನ ಪ್ರತಿಭಟನೆಯನ್ನು ತಡೆಯುತ್ತದೆ. ವಿರೋಧವನ್ನು ಮೆತ್ತಗಾಗಿಸುತ್ತದೆ.

ರುಕ್ಮಿಣಿಯು ತನ್ನ ಮೇಲೆ ಆಕ್ರಮಣ ಮಾಡಿದಾಗ ಧೃಢವಾದ ನಿಷ್ಠೂರವಾದ ತಿರಸ್ಕಾರ ಪ್ರತಿಭಟನೆ ಮುಂದಾಗುವುದಿಲ್ಲ. ಸಹಿಸಿಕೊಂಡು ಸುಮ್ಮನಾಗುತ್ತಾನೆ. ಈ ಕ್ರಿಯೆಗಳಲ್ಲಿ ಭಾಗಿಗಳಾದವರ ಜಾತಿ, ವರ್ಗ ಮನಃಸ್ಥಿತಿಗಳ ಆಯಾ ವ್ಯಕ್ತಿಗಳು ಆಕ್ರಮಣಕಾರರೋ ಆಕ್ರಮಣಗೊಂಡವರೋ ಎಂಬುವುದನ್ನು ನಿರ್ಧರಿಸಿವೆ. ಹಾಗೂ ಈ ಮೂವರ ಮಾನಸಿಕ ಸಂಬಂಧಗಳು ಅನೇಕ ಮಜಲುಗಳನ್ನು ಸಾಗಿ ಬಂದಿರುವಂಥವು, ಪರಸ್ಪರರಲ್ಲಿರುವ ಗಾಢವಾದ ನಂಬಿಕೆಯೂ ಇದ್ದಿರಬಹುದು.

ನಿಯಮಗಳು ಹೆಚ್ಚಾದಂತೆ ರಹದಾರಿಗಳು ಹೆಚ್ಚಾಗುತ್ತವೆ. ಬೂಟಾಟಿಕೆ ಬೆಳೆಯುತ್ತದೆ. ಯಾಕೆಂದರೆ ತೋರಿಕೆಗಾದರೂ ನಿಯಮಗಳನ್ನು ನಿಷ್ಠೆಯಿಂದ ಪಾಲಿಸಲು ಹೊರಡುವ

ಸಮಾಜ ಮತ್ತು ಸ್ವಚ್ಛಂದ ಪ್ರಿಯವಾದ ಮನುಷ್ಯನ ಮನಸ್ಸಿನ ನಡುವಿನ ಬಿರುಕನ್ನು ಮುಚ್ಚಲು ತೋರುಕೆಗಾಗಿಯಷ್ಟೆ ಶಕ್ಯ. ಈ ಕಾದಂಬರಿಯಲ್ಲಿ ಲೈಂಗಿಕ ಬಲತ್ಕಾರಕ್ಕೊಳಗಾದ ಎರಡು ಪ್ರಸಂಗಗಳ ಹೋಲಿಕೆ ಈ ಮಾತಿನ ಸ್ಪಷ್ಟತೆಗೆ ಸಹಾಯ ಮಾಡಬಹುದು.

ದಲಿತ ಸಮೂಹದಿಂದ ಬಂದ ಕುಂಡಿಮಾದಿಯ ಮಗಳು ಸಾವಂತ್ರಿಸ ಮೇಲೆ ಕೆಂಗಣ್ಣಪ್ಪಎರಗಿದ ಸಂಗತಿಯು ಚಾಪೆ ಹೆಣೆಯುವಾಗ ಚರ್ಚೆಗೆ ಬರುತ್ತದೆ. ಸ್ವಂತ ತಾಯಿಯೇ ತನ್ನ ಮಗಳ ಮೇಲಾದ ಬಲತ್ಕಾರದ ಬಗ್ಗೆ ಹೇಳುತ್ತಾಳೆ. ತನ್ನ ನೋವನ್ನು ತನ್ನ ಗೆಳತಿಯರೊಂದಿಗೆ ಹಂಚಿಕೊಳ್ಳುತ್ತಾಳೆ. ತಮ್ಮ ಸನ್ನಿವೇಶದ ಅಸಹಾಯಕತೆ ಮತ್ತು ಆಪತ್ತಿನಿಂದ ಆ ಹೆಂಗಸರ ನಡುವೆ ಹರಡಿದ ದಿಗ್ಭ್ರಮೆಯನ್ನು ದ್ಯಾವಾಜಿಯು ಕೆಂಗಣ್ಣಪ್ಪನ ನಪುಂಸಕತ್ವದ ಕಥೆಯಿಂದ ದೂರವಿರಿಸುತ್ತಾಳೆ. ಬ್ರಾಹ್ಮಣ ಹುಡುಗಿ ಜಾನಕಿಯ ಮೇಲೆ ನಡೆದ ಅತ್ಯಾಚಾರ ಮನೆಹೊರಗೂ, ಮನೆಯೊಳಗೂ ಮಾತಿಗೆ ಮುಕ್ತವಾಗಿ ಬರುವಂತಿರಲಿಲ್ಲ. ಆ ಹುಡುಗಿಯ ಅಣ್ಣನಿಗೂ ವಿಷಯ ತಿಳಿಯದಂತೆ ಗುಟ್ಟಿನಲ್ಲಿಟ್ಟು ಸಜಾತೀಯ ಆಚಾರವಂತರ ಮನೆಯ ಹುಡುಗ ತನ್ನ ಹಿತಾಸಕ್ತಿಗಾಗಿ ಮಹಿಳೆಯನ್ನು ತುಳಿಯುವ ಸಮಾಜದಲ್ಲಿ ಹೆಣ್ಣು ಪಡೆಯುವ ಸಾಮಾಜೀಕರಣ, ಸ್ವಸಮರ್ಥನೆಗಳಾಗಲಿ ಏನನ್ನಾದರೂ ಪ್ರತಿಭಟಿಸಲು ಸಹಾಯ ಮಾಡುವುದಿಲ್ಲ. ಬೇರೆ ಬಗೆಯ ಹೋರಾಟವಾಗಿರಲಿ ಅನ್ನಿಸಿದ್ದನ್ನು ಸ್ಪಷ್ಟವಾಗಿ ಬಲವಾಗಿ, ಧೈರ್ಯವಾಗಿ ಹೇಳುವುದಕ್ಕೂ ಆಗದಂತೆ ಮಾಡುತ್ತದೆ.

ಒಟ್ಟಿನಲ್ಲಿ ಜಾತಿಯೊಳಗಿನ ಪರಧಿಯು ಏನನ್ನು ಮುಕ್ತವಾಗಿಸಲು ಅವಕಾಶವಿರುವುದಿಲ್ಲ. ಆದರೆ ರುಕ್ಮಿಣಿಯ ವಿಚಾರದಲ್ಲಿ ಮಾತ್ರ ಎಲ್ಲವೂ ಕೂಡ ಪರಿಧಿಯ ಹೊರಗೆ ಬಂದು ಬಯಲಾಗುತ್ತದೆ. ಸಕೇಶಿ ವಿಧವೆ ಎಂಬ ಕಾರಣಕ್ಕೋ ಏನೋ? ಬ್ರಾಹ್ಮಣ ವರ್ಗದವಳಾದರೂ ಕೂಡ ಈ ಹೋಲಿಕೆಯನ್ನು ನೋಡಿದಾಗ ಹೆಣ್ಣಿಗೆ 'ರಕ್ಷಣೆ' ಸಿಗುವಲ್ಲಿ ಯಾವ ಸಂದರ್ಭ ಅವಳ ಪರವಾಗುತ್ತದೆ ಎಂಬುವುದೇ ವಿಪರ್ಯಾಸವಾಗಿದೆ.

ಇದು ಕೇವಲ ರುಕ್ಮಿಣಿಯೊಬ್ಬಳ ಕಥೆಯಾಗಿರದೆ, ಸಮಕಾಲೀನ ಸಂದರ್ಭದಲ್ಲಿ ಇವಳಂತ ಎಷ್ಟೋ ಮಹಿಳೆಯರು ಬಿಡಿಸಲಾಗದ ಬದುಕಿನ ಜಂಜಾಟದಲ್ಲಿ ಸಿಲುಕಿಕೊಂಡಾಗ

ಪರಿಸ್ಥಿತಿಯನ್ನು ಅರ್ಥಮಾಡಿಕೊಂಡು ಅಭಯ ನೀಡುವವರು ಸುತ್ತಮುತ್ತಲಿರುವುದು ಅಪರೂಪವೆನಿಸುತ್ತದೆ. ಇದಕ್ಕೆ ರುಕ್ಮಿಣಿಯ ಪಾತ್ರವೇ ನಿದರ್ಶನವಾಗಿದೆ. ಅವಳ ದುರ್ಬಲ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳುವ ಸಾಂತ್ವನ ನೀಡುವ ಯಾವ ಸನ್ನಿವೇಶವೂ ಕಾದಂಬರಿ ಸೃಷ್ಟಿಸಿಲ್ಲ. ಬಹುಶಃ ಇದಕ್ಕೆ ಕಾರಣ ಅಂದಿನ ಕಾಲಘಟ್ಟ ಬ್ರಾಹ್ಮಣ ಹೆಣ್ಣಿಗೆ ಹಾಕಿರುವ ಭದ್ರಕೋಟೆಯೇ ಮೂಲವೆಂಬುದು ಸ್ಪಷ್ಟವಾಗುತ್ತದೆ

ಹೆಣ್ಣು-ಗಂಡಿನ ಕಾಮ ಸಂಬಂಧಗಳು:

'ವೈಶಾಖ' ಕಾದಂಬರಿಯಲ್ಲಿ ನಡೆಯುವ ಗಂಡು-ಹೆಣ್ಣಿನ ಕಾಮ ಸಂಬಂಧದ ನ್ಯಾಯತೀರ್ಮಾನ ಅಸಮಾನತೆಯಿಂದ ಕೂಡಿದೆ ಎನ್ನುವುದನ್ನು ಹೇಳುತ್ತಾ ಬದುಕಿನ ವಿರೋಧಭಾವಕ್ಕೆ ಕನ್ನಡಿ ಹಿಡಿಯುತ್ತದೆ. ಈ ಅಸಮಾನತೆಯ ನ್ಯಾಯಕ್ಕೆ ಮಾನವನಿಂದ ನಿರ್ಮಿತವಾದ ವರ್ಣ ಮತ್ತು ಜಾತಿಯಿಂದ ಕೂಡಿದ ಸಾಮಾಜಿಕ ವ್ಯವಸ್ಥೆ ಪರಂಪರಾಗತ ಮತೀಯ ನಡವಳಿಕೆಗಳು, ಪರಾವಲಂಬಿ ಆರ್ಥಿಕ ಜೀವನ ಮತ್ತು ಅಧಿಕಾರ ಶೂನ್ಯತೆ ಎಂದು ವ್ಯಾಖ್ಯಾನಿಸಲು ಪ್ರಯತ್ನಿಸಿದೆ.

ಈ ಕಾದಂಬರಿಯಲ್ಲಿ ಮೂಡಿಬರುವ ಹೆಣ್ಣು-ಗಂಡುಗಳ ಕಾಮ ಸಂಬಂಧಗಳನ್ನು ಕುರಿತು ವಿಶ್ಲೇಷಿಸುವುದಾದರೆ ಜನಜೀವನದ ಬದುಕಿನಲ್ಲಿ ವಿವಿಧ ಲೈಂಗಿಕ ಅನುಭವಗಳಲ್ಲಿ ಒಂದಾದ, ಮನುಷ್ಯನಲ್ಲಿ ಗಾಢವಾಗಿರುವ ಕಾಮ ಅಥವಾ ಲೈಂಗಿಕ ಪ್ರಕ್ರಿಯೆಗಳು ಸಹಜವೆಂಬಂತೆ ಕೂಡಿದೆ. ಇಲ್ಲಿನ ಮುಕ್ತ ಲೈಂಗಿಕ ಪರಿಕಲ್ಪನೆಗಳು ಗ್ರಾಮೀಣ ಜನಜೀವನದ ಭಾಗವಾಗಿ ಬಂದಿದೆ. ಬದುಕಿನೊಂದಿಗೆ ನಿರಂತರ ಹೋರಾಟವನ್ನು ನಡೆಸುವುದನ್ನು ಕಾಣಬಹುದಾಗಿದೆ. ಅದರಲ್ಲೂ ಮಹಿಳೆಯರು ಪರಿಸ್ಥಿಯ ಒತ್ತಡಕ್ಕೆ ಸಿಲುಕಿ ಪ್ರತಿಭಟಿಸಲಾಗದೆ ಪುರುಷ ಪ್ರಧಾನ ಸಮಾಜದಲ್ಲಿ ಲೈಂಗಿಕ ಶೋಷಣೆಗೆ, ಅಸಹಾಯಕತೆಗೆ ಒಳಗಾಗಿರುವುದನ್ನು ನೋಡಬಹುದು.

ಎಲ್ಲಾ ವರ್ಗದ ಜನರಿರುವ ಈ ಕಾದಂಬರಿಯಲ್ಲಿ ಅದರಲ್ಲೂ ನೈತಿಕತೆಗೆ, ಹೆಸರಾಗಿರುವ ಬ್ರಾಹ್ಮಣರು ಬೇರೆ ವಿಚಾರಗಳಲ್ಲಿ ಪಾವಿತ್ರ್ಯತೆ, ಮಡಿ, ಮೈಲಿಗೆ, ಆಚಾರ-

ವಿಚಾರಗಳನ್ನು ಎಣಿಸುವ ಮಡಿವಂತರು ಲೈಂಗಿಕ ಕ್ರಿಯೆಯಲ್ಲಿ ಮಾತ್ರ ಜಾತಿಯನ್ನು ಲೆಕ್ಕಿಸದೆ ಅವಕಾಶ ಸಿಕ್ಕಾಗ ಸಾಮಾಜಿಕ ಸಂದರ್ಭದಲ್ಲಿ ಅದೇ ಜಾತಿಯನ್ನು ಕೇರಿಯ ಹೆಣ್ಣುಗಳೊಂದಿಗೆ ಸುಖಿಸುವ ಊರ ಯಜಮಾನರು ಹಗಲಿನಲ್ಲಿ ಶಿವಾಚಾರ ಹೇಳುತ್ತಾರೆ. ಇಂತಹ ಸೂಕ್ಷ್ಮತೆಗಳನ್ನು ಕಾದಂಬರಿ ವಿವಿಧ ಘಟನೆಗಳ ಹಿನ್ನೆಲೆಯಲ್ಲಿ ಕಟ್ಟಿರುವುದು ಗಮನ ಸೆಳೆಯುವಂತಿದೆ.

ಹೆಣ್ಣು-ಗಂಡಿನ ಕಾಮ ಸಂಬಂಧವೂ ಬದುಕಿನ ಒಂದು ಭಾಗವಾಗಿ ನಿಸರ್ಗದತ್ತವಾಗಿ ಮೂಡಿಬಂದದ್ದಾಗಿದೆ. ಲೌಕಿಕ ಬಂಧನದಲ್ಲಿರುವ ಪ್ರತಿಯೊಬ್ಬ ಮನುಷ್ಯನನ್ನು ಕಾಡುವಂತದ್ದು. ಸಾರ್ವಕಾಲಿಕವಾದಂತಹ ಒಂದು ಅನುಭವವಾಗಿರುವಂತದ್ದು. ಕಾಮಕ್ಕೆ ಕಟ್ಟಳೆಗಳು ಬಂಧನಗಳು ಜಾಸ್ತಿಯಾದಷ್ಟು ಅದರಲ್ಲಿನ ಕುತೂಹಲ ಆಸಕ್ತಿಯೂ ಹೆಚ್ಚಾಗಿ ಅದು ವಿಕೋಪಕ್ಕೆ ತಲುಪುವ ಸಾಧ್ಯತೆಗಳು ಹೆಚ್ಚು. ಈ ಕಾದಂಬರಿಯಲ್ಲಿಯೂ ಕಂಡು ಬರುವುದು ಅಂಥದ್ದೆ ಘಟನೆಗಳು. ಆದರೆ ಅದು ಅಸಮಾನತೆಯಿಂದ ಕೂಡಿದ್ದಾಗ ಅದನ್ನು ಸಹಿಸಲಾರರು.

ಪಾವಿತ್ರ್ಯತೆಯ ಬಗ್ಗೆ ಮಾತನಾಡುವ ನಮ್ಮ ಭಾರತೀಯ ಪರಂಪರೆಯು ಭಾರತೀಯ ಚೌಕಟ್ಟಿನಲ್ಲಿಯೇ ಲೈಂಗಿಕ ಕ್ರಿಯೆಗಳು ನಡೆಯಬೇಕೆಂಬ ನೀತಿಯಿದ್ದರೂ ಅಂತಹ ನೀತಿಯನ್ನು ಅನೀತಿಗೊಳಿಸುತ್ತಾರೆ. ಮೀರಿನಡೆಯುವ ಪ್ರಯತ್ನ ಮಾಡುತ್ತಾರೆ. ಗ್ರಾಮೀಣರು ಆರ್ಥಿಕ ಅಸಮಾನತೆ, ಸಮಾಜಿಕ ಅಸಮಾನತೆಯನ್ನು ಸಹಿಸುತ್ತಾರೆ. ಆದರೆ ಲೈಂಗಿಕ ಅಸಮಾನತೆಯನ್ನು ಸಹಿಸಲಾರರು. ಸಾಮಾಜಿಕ ಧಾರ್ಮಿಕ ಕಟ್ಟಳೆಗಳನ್ನು ಮೀರಿನಿಲ್ಲುವ, ಎಲ್ಲಾ ರೀತಿಯ ಬಂಧನಗಳನ್ನು ಬಿಚ್ಚಿ ಒಗೆಯುವ ಕಾಮದ ಸ್ಥಿತಿಯನ್ನು ಕಾದಂಬರಿಕಾರರು ಬೇರೆ ಬೇರೆ ನೆಲೆಗಳಲ್ಲಿ ನಿರೂಪಿಸಿದ್ದಾರೆ. ನವ್ಯದವರ ಪ್ರಮುಖ ಅಂಶವಾದ ಕಾಮ, ಅನಾಥ ಪ್ರಜ್ಞೆ, ಒಂಟಿತನ ಮತ್ತು ಸಾವು ಇಲ್ಲಿ ಇವು ಹೆಚ್ಚಿನ ಪ್ರಾಮುಖ್ಯತೆಯನ್ನು ಪಡೆಯುತ್ತದೆ. ಆದರೆ ನವ್ಯರ ಹಾಗೆ ಸ್ವೇಚ್ಛಾಚಾರದ ಕಾಮ ಇವರದಾಗಿರದೆ ಬದುಕಿನಲ್ಲಿ ಸಹಜವಾಗಿ ಸ್ಫೋಟಗೊಳ್ಳುವ ನೈಸರ್ಗಿಕ ಕಾಮ ಇದಾಗಿದೆ. ಕಾಮ ಕಥೆಗಳ ಹಿಂದೆ ಹಲವಾರು ಕಾರಣಗಳು ಮಾನಸಿಕ ಸ್ಥಿತಿಗತಿಗಳು, ಅನಿವಾರ್ಯತೆಗಳು, ನೋವಿನ ಕತೆಗಳು

ಹೆಣೆದುಕೊಂಡಿರುತ್ತದೆ. ಕಾಮ ಸಂಬಂಧಗಳನ್ನು ಹೆಚ್ಚು ಪ್ರತಿಬಿಂಬಿಸುವ ವೈಶಾಖ ಕಾದಂಬರಿಯು ಅದನ್ನು ವಿವರಿಸುವ ವಿಶ್ಲೇಸುವ ಸಂದರ್ಭದಲ್ಲಿ ನವ್ಯದವರಿಗಿಂತ ಭಿನ್ನವಾಗಿ ನಿಂತು, ಜೀವಪರ ಕಾಮವನ್ನು ಪ್ರಕಟಿಸಿರುವುದರಿಂದ ಸಹಜವಾಗಿ ಮೂಡಿಬಂದಿರುವ ಲೈಂಗಿಕ ಪರಿಕಲ್ಪನೆಗಳು ಅಧ್ಯಯನ ಯೋಗ್ಯವೆನ್ನಿಸುತ್ತದೆ.

"ಕಾಮಕ್ಕೆ ಕಟ್ಟಳೆ ಬಂಧನಗಳು ಜಾಸ್ತಿಯಾದಂತೆ ಕಿತ್ತೊಗೆಯುವ ಬಿಡುಗಡೆಗೊಳ್ಳುವ ಕ್ರಿಯೆಗಳು ತೀವ್ರವಾಗುತ್ತದೆ."[೧] ಈ ಕಾದಂಬರಿಯಲ್ಲಿ ಕಾಮದ ವಿಚಾರದಲ್ಲಿ ಬಂಧನ ಬಿಡುಗಡೆಯ ಆಶ್ರಯ ಮಾತ್ರವಿರದೆ, ಬದುಕಿನ ಅನಿವಾರ್ಯ ಸತ್ಯಗಳು ಸೇರಿಕೊಂಡಿವೆ. ಈ ಬಂಧನ- ಬಿಡುಗಡೆಯೊಳಗೆ ಜಾತಿ-ವರ್ಗ, ಮೇಲು-ಕೀಳು, ಪಾಪ-ಪುಣ್ಯ, ಹಸಿವು, ದಾಹ, ತೃಪ್ತಿಯಂತಹ ಸಂಗತಿಗಳು ತಳಕುಹಾಕಿಕೊಂಡಿದೆ. ಮಡಿವಂತರೆನಿಸಿಕೊಂಡವರು ಸಂದರ್ಭಕ್ಕನುಗುಣವಾಗಿ ತಮ್ಮ ಮನೋಭಾವನೆಗಳನ್ನು ಬದಲಿಸಿಕೊಂಡು ಸಮರ್ಥಿಸಿಕೊಳ್ಳುವವರಿಗೆ ಈ ಕಾದಂಬರಿಯನ್ನು ಓದಿ ಮೂಗು ಮುರಿಯುವುದಕ್ಕಿಂತ, ಕಾಮ ಸಂಬಂಧಗಳಲ್ಲಿ ಕಾರಣವನ್ನು ಹುಡುಕಬೇಕಾಗುತ್ತದೆ. ಕೌಟುಂಬಿಕವಾಗಿ ಗಂಡ-ಹೆಂಡತಿಯರ ನಡುವೆ ಮಾತ್ರ ಇರಬೇಕಾದ ಈ ಸಂಬಂಧ ಸಾಂಸಾರಿಕ ಜೀವನದಲ್ಲಿ ಸಿಗದಿದ್ದಾಗ ಬೇರೆಡೆಯಲ್ಲಿ ಸುಖಿಸುವ ಅನಿವಾರ್ಯ. ಅಲ್ಲದೆ ಹಸಿವು, ಬಡತನ, ಅಸಾಹಯಕತೆಗಳ ಕಡೆ ಗಮನಹರಿಸುವುದು, ಕಾರಣಗಳನ್ನು ಹುಡುಕುವುದು ಮುಖ್ಯವೆನಿಸುತ್ತದೆ.

"ಕಾಮದ ವಿವಿಧ ವಿಕಾರ, ವೈಫಲ್ಯಗಳ ಬಗ್ಗೆ ಮಾತನಾಡುತ್ತಾ ಜೆ.ಹಚ್. ನಾಯಕರು ಹೀಗೆ ಬರೆಯುತ್ತಾರೆ. ಈ ಲೈಂಗಿಕ ವಿವರಗಳಿಗೆ ಸಂಬಂಧಿಸಿದಂತೆ ಯೋಚಿಸುವ ಊರಿನ ಬಂಜೆತನವನ್ನು ಧ್ವನಿಸುವುದರ ಜೊತೆಗೆ ಆ ಊರಿನ ಕೆಡುಕನ್ನು ಕ್ರೌರ್ಯವನ್ನು ಧ್ವನಿಸುತ್ತಿರುವ ಅನುಭವ ಓದುಗನಿಗಾಗುವಂತಿದೆ".[೨] ಇವರ ಮಾತನ್ನು ಗಮನಿಸಿದಾಗ ಲೈಂಗಿಕತೆಯು ಈ ಕಾದಂಬರಿಯಲ್ಲಿ ಪ್ರೇಮವಾಗಿಯೋ, ಸೃಷ್ಟಿಶೀಲವಾಗಿಯೋ ಹರಿಯದೆ

---

೧) ವೈಶಾಖ ವೈವಿಧ್ಯ-ಡಾ. ಬಸವರಾಜ ಸಬರದ, ಪುಟ ಸಂಖ್ಯೆ:೨೦೭
೨) ವೈಶಾಖ ವೈವಿಧ್ಯ- ಡಾ. ಬಸವರಾಜ ಸಬರದ, ಪುಟ ಸಂಖ್ಯೆ:೬೨

ವಿಕಾರವೂ, ವಿಪರೀತವೂ ಅನೈಸರ್ಗಿಕವಾಗಿ ಹರಿದು ಕೇವಲ ಆ ಕ್ಷಣದ 'ತೀಟೆ'ಯಾಗಿ ಚಿತ್ರಿತವಾಗಿದೆ ಎಂದರೆ ತಪ್ಪಾಗಲಾರದು. ಕಾದಂಬರಿಯಲ್ಲಿ ಕಾಮ ಪ್ರವಾಹವಾಗಿಯೇ ಹರಿದು ಬಂದಂತಿದೆ. ಲಕ್ಕ, ರುಕ್ಮಿಣಿ, ಕೃಷ್ಣಶಾಸ್ತ್ರಿ, ಕೇಶವಯ್ಯ, ನಂಜೇಗೌಡ, ಕೆಂಗಣ್ಣಪ್ಪ, ಗವಿಮಠದಸ್ವಾಮಿ, ಪಾದ್ರಿ ಮುಂತಾದವರಲ್ಲಿ ಕಾಮವು ಶೋಷಣೆಯ ಪ್ರಧಾನಾಂಗವಾಗಿ, ಕಾದಂಬರಿಯ ಪ್ರಬಲ ತಂತ್ರವಾಗಿ ಬಿಡುತ್ತದೆ. ಕಾಮ ಒಗಟು ಹೇಳುವ, ದನಕಾಯುವ ಹೇಳುವ ಕೃಷ್ಣಶಾಸ್ತ್ರಿಯವರೆಗೆ ಪರಿವೃತವಾಗಿ ಹಾದುಬರುತ್ತದೆ. ಎಷ್ಟೋ ಸಂದರ್ಭಗಳಲ್ಲಿ ಲೈಂಗಿಕ ಪ್ರಕ್ರಿಯೆಯು ಅನೈತಿಕ ಸಂಬಂಧಗಳಾಗಿವೆ. ಅದಕ್ಕೆ ಅಸಮಾನತೆ ವ್ಯವಸ್ಥೆಯೇ ಕಾರಣ. ಅದರಲ್ಲೂ ಬಡವರು-ದಲಿತರು ಬಲತ್ಕಾರಕ್ಕೆ ಒಳಗಾಗಿ ಅಮಾಯಕ ಕಣ್ಣೀರಿನ ಶೋಷಣೆಯ ಕತೆಗಳನ್ನು ಕಾಣಬಹುದಾಗಿದೆ. ಇವರಷ್ಟೆ ಅಲ್ಲದೆ ಮಡಿವಂತರೆನಿಸಿಕೊಂಡವರು ಬ್ರಾಹ್ಮಣರೂ ಕೂಡ ಕಾಮದಾಸಗಳಿಗೆ ಒಳಗಾಗಿ ಸಂಬಂಧಗಳನ್ನು ಮುರಿದು ಪಶ್ಚಾತ್ತಾಪಕ್ಕೆ ಒಳಪಟ್ಟವರು ಇದ್ದಾರೆ.

ವೈಶಾಖದಲ್ಲಿ ಲೈಂಗಿಕ ವ್ಯವಹಾರಗಳಿಗೆ ಸಂಬಂಧಿಸಿದಂತೆ ಹಲವಾರು ಸಂಗತಿಗಳು ಬರುತ್ತದೆ. ಕೇಂದ್ರ ಪಾತ್ರಗಳಾದ ಮಾವ ಕೃಷ್ಣಶಾಸ್ತ್ರಿ, ರುಕ್ಮಿಣಿ ಮತ್ತು ಲಕ್ಕ ತ್ರಿಕೋನ ಸಂಬಂಧಗಳಾಗಿ ಈ ಮೂವರ ನಡುವೆ ಅರಿವಿಲ್ಲದೆ ಅನಿವಾರ್ಯಕ್ಕೆ ಒಳಗಾಗಿ ಆಕ್ರಮಣಕಾರಿ ಘಟನೆಗಳು ನಡೆದುಬಿಡುತ್ತವೆ.

ಬ್ರಾಹ್ಮಣ ಸಕೇಶಿ ರುಕ್ಮಿಣಿಯನ್ನು ಮಾವ ಕೃಷ್ಣಶಾಸ್ತ್ರಿಗಳು ಬಲತ್ಕಾರದಿಂದ ಕೂಡುತ್ತಾರೆ. ಕಾಲಾಂತರದಲ್ಲಿ ಈ ಅನುಭವವು ಅವಳಲ್ಲಿರುವ ಸುಪ್ತ ಕಾಮಬಯಕೆಗಳು ಅವಳನ್ನು ಕೆಣಕುತ್ತದೆ. ಮಾವ ಪಶ್ಚಾತ್ತಾಪಕ್ಕೆ ಒಳಪಟ್ಟರು ರುಕ್ಮಿಣಿ ಮಾತ್ರ ತಡೆಹಿಡಿಯಲಾಗದೆ ಲಕ್ಕನನ್ನು ಕೂಡುತ್ತಾಳೆ. ಪರಿಣಾಮ ಗರ್ಭವತಿಯಾದಾಗ ಇದಕ್ಕೆ ಕಾರಣ ಯಾರೆಂಬ ಗೊಂದಲದಲ್ಲಿ ಇಡೀ ಕಾದಂಬರಿಯು ಹಲವು ತೆರೆಗಳಾಗಿ ಬಿಚ್ಚಿಕೊಳ್ಳುತ್ತಾ ಹೋಗುತ್ತದೆ. ಇಂತಹ ಸಂಬಂಧದಿಂದ ಗೊಂದಲಕ್ಕೊಳಗಾದ ಅವಳ ಮನಸ್ಥಿತಿಯು ಓದುಗರನ್ನು ಪ್ರಶ್ನಿಸದೇ ಬಿಡುವುದಿಲ್ಲ. ಕೊನೆಗೂ ಅವಳ ಆಂತರಿಕ ತಳಮಳಕ್ಕೆ ಉತ್ತರಸಿಗುವುದೇ ಇಲ್ಲ. ಇಡೀ ಕಾದಂಬರಿಯಲ್ಲಿ ಇದು ಪ್ರಶ್ನೆಯಾಗಿ ಉಳಿದರೂ ದರುಮನಹಳ್ಳಿ ಇದಕ್ಕೆ ಕಾರಣ ಲಕ್ಕನೇ

ಎಂಬ ಆರೋಪದ ಬಲೆಯನ್ನು ಬೀಸುತ್ತಾರೆ. ಇಲ್ಲಿ ನಿರೂಪಕರ ಉದ್ದೇಶ ರುಕ್ಮಿಣಿಗೆ ನ್ಯಾಯ ಸಿಗಬೇಕು ಎನ್ನುವುದಕ್ಕಿಂತ ದಲಿತ ಮೂಲದ ಲಕ್ಕನನ್ನೆ ಆರೋಪಿಸ್ಥಾನದಲ್ಲಿ ನಿಲ್ಲಿಸಿ ಗಡಿಪಾರು ಮಾಡುವ ಮೂಲಕ ಭ್ರಷ್ಟ ವ್ಯವಸ್ಥೆಗೆ ಧಿಕ್ಕಾರ ಹೇಳಿ ನೂತನ ಬದುಕಿನ ದಾರಿಯನ್ನು ಅರಸುವ ಹಾಗೆ ಮಾಡಿದ್ದಾರೆ.

ಇಲ್ಲಿ ರುಕ್ಮಿಣಿಯ ವಿಚಾರಕ್ಕೆ ಬಂದಾಗ ಅವಳ ಈ ಸ್ಥಿತಿಗೆ ಇವಳೇ ಕಾರಣವೆಂದು ಹೇಳುವುದು ತಪ್ಪಾಗುತ್ತದೆ. ಏಕೆಂದರೆ ಇಂತಹ ಸ್ಥಿತಿಗೆ ಬ್ರಾಹ್ಮಣ ಸಮಾಜವೇ ಮೂಲ ಕಾರಣ. ಹಾಗಾಗಿ ಬಿಡುಗಡೆಯಾದ ಕಾಮಕ್ಕೆ ಅಂತ್ಯವಿದ್ದರೆ ಬಂಧಿತವಾದ ಕಾಮಕ್ಕೆ ಅಂತ್ಯವೆಂಬುದೇ ಇಲ್ಲ. ಅದು ಸೃಷ್ಟಿಶೀಲ ಪ್ರಕ್ರಿಯೆಯ ಸ್ವರೂಪದಲ್ಲ. ಬಲತ್ಕಾರದ ಅನಿವಾರ್ಯ ಕಾಮದ ಮತ್ತೊಂದು ಮುಖವನ್ನು ಪ್ರತಿನಿಧಿಸುತ್ತದಷ್ಟೆ.

ಪುರುಷ ಪ್ರಧಾನ ವ್ಯವಸ್ಥೆಯ ನಿಯಂತ್ರಣಕ್ಕೆ ಒಳಪಟ್ಟು ಬಹುತೇಕ ಹೆಣ್ಣುಗಳ ಪಾಡು ದುರಂತವಾಗಿದೆ. ವೈಶಾಖ ಹೆಣ್ಣನ್ನು ಇತರ ವ್ಯಾಪ್ತಿಯಲ್ಲಿಯೂ ಗ್ರಹಿಸುತ್ತದೆ. ಬುಂಡಮ್ಮನ ಮಗ ಚೆನ್ನೂರನು ಜಗುಲಿಯ ಮೇಲೆ ಮೂರು ಹೊತ್ತು ಕುಡಿದು ಬಿದ್ದುಕೊಂಡಿರುತ್ತಿದ್ದನ್ನು ಕಂಡು ಹೆಂಡತಿ ವೈವಾಹಿಕ ಕಟ್ಟುಪಾಡುಗಳನ್ನು ಕಿತ್ತು ಹಾಕಿ ಕಂಚುಗದ ಸಾಬಿಯ ಜೊತೆಗೆ ಓಡಿಹೋಗುತ್ತಾಳೆ. ಕಡ್ಡಿಯಂತೆ ಬೆಳೆದ ಹನುಮನನ್ನು ಮದುವೆಯಾದ ಎಂಕ್ಟಯು ಬೇರೆಯವನ ಜೊತೆ ಸಂಬಂಧವನ್ನು ಹೊಂದುತ್ತಾಳೆ. “ಈ ಹೆಣ್ಣುಗಳ ಒಳಸಂಬಂಧಗಳ ಧೈರ್ಯ ಧೋರಣೆಗಳನ್ನು ನೋಡಿದರೆ ಪ್ರಕೃತಿ ಸಹಜವಾದ ಕಾಮದ ಕರೆಗೆ ಮೋಸ ಮಾಡಲಾರದ ದಿಟ್ಟ ಮಹಿಳೆಯರಾಗಿ ಕಾಣುತ್ತಾರೆ”.[೧] ಶಿವಾಚಾರದ ಗಂಗಿ, ಶಿವುನಿ ಇವರು ಪರಿಸ್ಥಿತಿಯ ಅನಿವಾರ್ಯಕ್ಕೆ ಒಳಗಾಗಿ ವ್ಯಭಿಚಾರಕ್ಕೆ ಇಳಿಯುತ್ತಾರೆ. ಆದರೆ ಇದರ ಪೂರ್ತಿ ಹೊಣೆಗಾರಿಕೆಯನ್ನು ಅವರ ಮೇಲೆಯೇ ಹಾಕಲು ಸಾಧ್ಯವಿಲ್ಲ. ಏಕೆಂದರೆ ಇಂತಹ ವ್ಯಭಿಚಾರದಂತಹ ಸ್ಥಿತಿಗೆ ಮಹಿಳೆಯನ್ನು ತಳ್ಳಿ ಅಪಮೌಲ್ಯಗೊಳಿಸುವುದು ಪುರುಷ ಪ್ರಧಾನ ಸಮಾಜದ ಸೃಷ್ಟಿಯಾಗಿದೆ. ಸಂಬಂಧಕ್ಕೂ-ವ್ಯಭಿಚಾರಕ್ಕೂ ಅಗಾಧವಾದ ವ್ಯತ್ಯಾಸವಿದೆ.

---

೧)ವೈಶಾಖ ವೈವಿಧ್ಯ-ಡಾ. ಬಸವರಾಜ ಸಬರದ, ಪುಟ ಸಂಖ್ಯೆ:೫೦

'ವೈಶಾಖ' ಗಂಡು-ಹೆಣ್ಣಿನ ಸಂಬಂಧಶೀಲ ಅಶ್ಲೀಲದ ಸಮಸ್ಯೆಗಳನ್ನು ಬೇರೆ ಬೇರೆ ಸಾಮಾಜಿಕ ಸ್ತರಗಳೊಂದಿಗೆ ತಳುಕು ಹಾಕಿಕೊಂಡಿರುವುದನ್ನು ತೋರಿಸುತ್ತದೆ. ಋತುಮತಿಯಾದದ್ದನ್ನು ಸಮಾಜದಿಂದ ಮುಚ್ಚಿಡುವಂತಹ ಜಾನಕಿ ಬಲತ್ಕಾರಕ್ಕೆ ಒಳಗಾದಾಗ ಸಮಾಜಕ್ಕೆ ಗೊತ್ತಾಗದ ಹಾಗೆ ಗುಟ್ಟನ್ನು ಕಾಪಾಡಿಕೊಂಡು ಮದುವೆ ಮಾಡಿಕೊಂಡು ಸಂಸಾರ ನಡೆಸುವುದು. ಶಿವಾಚಾರದ ಗಂಗಿಯಂತಹ ಹೆಣ್ಣುಗಳದು ಅತಿಮಡಿವಂತಿಕೆಯ ಕಾಮಜೀವನ. ಇವರ ವ್ಯಭಿಚಾರದವೆನಿದ್ದರೂ ಕದ್ದು ಮುಚ್ಚಿ ಕಳ್ಳತನದ್ದು. ಶಿವುನಿ ಇನ್ನೂ ಮುಂತಾದವರದು ತೆರೆದಿಟ್ಟ ಪುಸ್ತಕದಂತಹ ಕಾಮಜೀವನ.

ಕುಂಡಿಮಾದಿಯ ಮಗಳು ಋತುಮತಿಯಾಗದ ಸಾವಂತ್ರಿಯನ್ನು ಹಸುಕಾಡಿದ ಕೆಂಗಣ್ಣಪ್ಪನ ನಡವಳಿಕೆಯನ್ನು ಕುರಿತು ದ್ಯಾವಾಜಮ್ಮ ಹೇಳುವ ಮಾತು ಹೀಗಿದೆ... "ನೀನೊಂದು ಪೆದ್ದುಗರ, ಸ್ರಾವಂತಿಗೆ ಯೋಳುಕಡು, ಇನ್ನೊಂದು ದಪ ಇಂಗೇನಾದ್ರೂ ಆಡಕ್ಕೆ ಬಂದ್ರೆ ಮೊದ್ಲು ದುಡ್ಡು ಮಡುಗು ಅನ್ನಲಿ". ನಿತ್ಯ ಅಭದ್ರತೆಗೆ ಒಳಗಾದ ಕೆಳವರ್ಗದ ಹೆಣ್ಣು ಶೀಲವನ್ನು ಒಂದು ಮಾರಾಟದ ವಸ್ತುವನ್ನಾಗಿಸಿಕೊಳ್ಳುವ ಅನಿವಾರ್ಯಕ್ಕೆ ಒಳಗಾಗುತ್ತಾಳೆ. ಅಂಥ ಹೆಣ್ಣು ಶೀಲ ಅಶ್ಲೀಲದ ಮಡಿವಂತಿಕೆಯ ಮನೋಭಾವವನ್ನು ತೆಗೆದುಹಾಕುತ್ತಾಳೆ. ಆದರೆ ಕೆಲ ಸಂದರ್ಭಗಳಲ್ಲಿ ಹೆಣ್ಣು ಗಂಡು ಬೀಸುವ ಬಲೆಗೆ ಸಿಕ್ಕಿ ಬೀಳುವ ಹಕ್ಕಿಯಾಗಿ ಅತಂತ್ರಸ್ಥಿತಿಗೆ ಒಳಗಾಗಬೇಕಾಗುತ್ತದೆ.

ಇವರಷ್ಟೇ ಅಲ್ಲದೆ ಬುಂಡಮ್ಮನ ಸೊಸೆ ಕಟ್ಟಿಕೊಂಡ ಗಂಡನಿಂದ ಸಹಜ ಬಯಕೆಗಳಿಗೆ ಸ್ಪಂದನೆ ಸಿಗದಿದ್ದಾಗ ಕಂಚುಗಾರ ಸಾಬಿಯಾ ಬೆನ್ನು ಹತ್ತಿ ಮನೆ ಬಿಟ್ಟು ಹೋಗುತ್ತಾಳೆ. ಹಾದಿ ಬೀದಿಯಲ್ಲಿ ಹಾದು ಹೋಗುವ ಗಂಡಸರನ್ನು ವಾರೆಗಣ್ಣಿನಲ್ಲಿ ನೋಡುವ ಇವಳ ಮಿಂಡಾಟವನ್ನು ಕಂಡು ಬುಂಡಮ್ಮ "ಜಗಲೀಲಿ ಕುಂತು ಅಲ್ಲೇನು ಪಸದೀಯ?" ಎಂದು ಕೇಳಿದಾಗ ಬುಂಡಮ್ಮನ ಸೊಸೆ ಕೊಡುವ ಉತ್ತರ ನೇರ ಹಾಗೂ ಸ್ಪಷ್ಟವಾಗಿದೆ. ತೆಗಿ, ತೆಗಿ, ಈ ಅಟ್ಟೀಲಿ ಅದ್ಯಾವ ಕೇಮ ಇದ್ದದು?... ಇಲ್ಲೇನು ಊಟದ ಸುಖವಾ? ನ್ಯಾಟದ ಸುಕವಾ? ಇಲ್ಲ ವೋಗ್ಲೀಂದ್ರೆ ಆಸಿಗೆ ಸುಖವಾ?.. ಎಂದು ಪ್ರಶ್ನಿಸುವ ಮಾತಿನ ಹಿಂದೆ ಸಾಂಸಾರಿಕ ಜೀವನದ ಒಂದು ಭಾಗವಾಗಿರುವ ಲೈಂಗಿಕ ಬಯಕೆಗಳನ್ನು

ಬಿಚ್ಚಿಡಲಾಗದ ಮನಸ್ಥಿತಿ ಮತ್ತು ಅದನ್ನು ಮತ್ತೊಂದು ವಿಧದಲ್ಲಿ ಪಡೆದುಕೊಳ್ಳುವ ದಿಟ್ಟ ಹೋರಾಟವನ್ನು ಅವಳ ಸುಪ್ತಮನಸ್ಸು ಆ ದಾರಿಗೆ ಕೊಂಡೊಯ್ಯುವ ಹಾಗೆ ಮಾಡಿದೆ. ಸೃಷ್ಟಿಶೀಲತೆಗೆ ಮೂಲವಾಗಿರುವ ಕಾಮ ಅದು ಕೆಲ ಸಂದರ್ಭದಲ್ಲಿ ಹಸಿವಾಗಿಯೂ ಪರಿಣಮಿಸುವುದನ್ನು ಇವಳ ಮಾತಿನಲ್ಲಿ ಕಾಣುಬಹುದು.

ಕಾಮ ನಿಸರ್ಗ ಸಹಜವಾಗಿ ಮೂಡಿಬಂದಿದೆ ಎನ್ನುವುದಕ್ಕಿಂತ ವಿಕೃತ ಮತ್ತು ಅತಿರೇಕದ ರೂಪಗಳನ್ನು ದ್ವಿಲಿಂಗ ಕಾಮದ ಜೊತೆಗೆ ಸಲಿಂಗ ಕಾಮವೂ ಕಾಣಿಸಿಕೊಂಡಿದೆ. ಜಾತಿಭೇದ, ವರ್ಣಭೇದ, ಲಿಂಗಭೇದ, ವಯಸ್ಸಿನ ಭೇದಗಳನ್ನು ಮೀರಿ ಕಾದಂಬರಿಯ ಸುತ್ತ ಕಾಮ ಸಂಬಂಧಗಳು ಮುಕ್ತವಾಗಿ ಸರಪಳಿಯ ಹಾಗೆ ಸುತ್ತಿಕೊಂಡಿದೆ. ಅವಕಾಶ ಸಿಕ್ಕಾಗಲೆಲ್ಲಾ ಸಂಬಂಧಗಳ ಬೆಲೆ ಇಲ್ಲದೆ ಮನವೀಯತೆಯನ್ನು ನೈತಿಕತೆಯನ್ನು ಮರೆತು ಯಾರ ಮೇಲಾದರೂ ಬಲತ್ಕಾರ, ಆಕ್ರಮಣ ನಡೆಸಬಹುದಾದ ವ್ಯಕ್ತಿತ್ವವುಳ್ಳ ಪಾತ್ರಗಳ ಗೋಚರವಾಗುತ್ತದೆ. ವ್ಯವಸ್ಥೆಯ ಕ್ರೂರ ಒಳಮುಖಗಳನ್ನು ಬದುಕಿನ ಸಂಕೀರ್ಣತೆಯನ್ನು ಹಿಡಿದಿಡುವಲ್ಲಿ ಲೈಂಗಿಕ ಪರಿಕಲ್ಪನೆಗಳು ವಸ್ತುನಿಷ್ಠವಾಗಿ ರೂಪುಗೊಂಡಿದೆ.

ನಯವಂಚಕ ಪಂಡಾಟದಿಂದ ಮೆರೆಯುವ ನಂಜೇಗೌಡ ಪಂಚಾಯಿತಿಯ ಮುಖಂಡ, ಆದರೆ ಆತನಿಗೆ ಕಾಮದ ಹಲವಾರು ಮುಖವಾಡಗಳಿವೆ. ಎಷ್ಟು ಹೆಣ್ಣುಗಳನ್ನು ಸುಖಿಸಿದರು ಕೇಳುವವರಿಲ್ಲ. ಆದರೆ ತನ್ನ ಹೆಂಡತಿಗೆ ಹಾಕಿರುವ ಬಂಧನ ಮಾತ್ರ ಬಿಡಿಸಿಹೋಗಲಾರದಂತದ್ದು. ಯಾವ ಗಂಡಸಿನೊಂದಿಗೂ ಮಾತನಾಡಬಾರದು, ನಗಬಾರದು, ಆದರೆ ಇವನು ಮಾತ್ರ ಎಷ್ಟು ಹೆಣ್ಣುಗಳನ್ನು ಮಾತ್ರ ಬೇಕಾದರೂ ಸಂಭೋಗಿಸಿ ಬಸುರಿಯನ್ನಾಗಿ ಮಾಡಬಹುದು ಇವನ ಜೊತೆಗೆ ಕೆಂಗಣ್ಣಪ್ಪ, ಕೇಶವಯ್ಯ, ಮುಂತಾದವರು ಸಾವಂತ್ರಿ, ಸಿವುನಿಯಂತವರನ್ನು ಬಳಸಿಕೊಳ್ಳುವುದು ಇವರ ಕ್ರೂರತನವನ್ನು ಚರ್ಚಿಸಿದಾಗ ಕ್ಷಣಿಕ ಸುಖ ಎಂತವರನ್ನು ಯಾವ ಮಟ್ಟಕ್ಕೆ ಬೇಕಾದರು ಕೊಂಡೊಯ್ಯುತ್ತದೆ. ಎಂಬುವುದನ್ನು ಲೇಖಕರು ಈ ಕಾದಂಬರಿಯ ಮೂಲಕ ವ್ಯಕ್ತಪಡಿಸಿದ್ದಾರೆ.

ಪುರುಷ ಪ್ರಧಾನ ಸಮಾಜದಲ್ಲಿ ಪುರುಷರು ಮಾಡಿದೆಲ್ಲಾ ಸರಿ, ಎಂಬ ಧೋರಣೆ ಎಲ್ಲಾ ಕಾಲಕ್ಕೂ ಅದು ಮುಂದುವರೆದುಕೊಂಡು ಬಂದಿದೆ. ತನ್ನ ಅಗತ್ಯಕ್ಕೆ ಅನುಗುಣವಾಗಿ

ವ್ಯವಸ್ಥೆಯನ್ನು ರೂಪಿಸಿಕೊಂಡು ಎಲ್ಲದ್ದಕ್ಕೂ ಮಿತಿ ಇದೆ ಎಂಬುದನ್ನು ಮರೆತು ಪಶುವಿನ ಹಾಗೆ ವರ್ತಿಸುವಲ್ಲಿ ಯಾವ ಮಾನವೀಯತೆಯೂ ಇಲ್ಲ, ಮನುಷ್ಯತ್ವ ಇಲ್ಲ, ನೈತಿಕತೆಗಿಂತ ಅನೈತಿಕತೆ ಹೆಚ್ಚಾಗಿದೆ. ಲೈಂಗಿಕತೆಗೆ ಸಂಬಂಧಪಟ್ಟಂತೆ ಮಿತಿ ಸಾಧ್ಯತೆಗಳನ್ನು ಕುರಿತು ಸೂಕ್ಷವಾಗಿ ಅಧ್ಯಯನ ನಡೆಸಿದಾಗ ಅದರ ಒಳಿತುಗಳೇನು? ಎಂಬುದು ಗೊಂದಲಕ್ಕೀಡು ಮಾಡುತ್ತದೆ.? ಇಂಥ ವಿಚಾರ ಕಾದಂಬರಿಯ ಸುತ್ತ ಆವರಿಸಿಕೊಡಿರುವಾಗ ಈ ಲೈಂಗಿಕ ಸುಖವೇ ಬದುಕಲ್ಲ ಅದಕ್ಕೂ ಮೀರಿದ ಬೇರೆಯದೇ ಆದ ಸಾಧಕ – ಭಾದಕಗಳ ಹೊಸ ಅನುಭವದ ಪ್ರಪಂಚವಿದೆ. ತನ್ನ ಅಸ್ತಿತ್ವವನ್ನು ಕಾಪಾಡಿಕೊಳ್ಳುವವರು.. ಸೃಜನಾತ್ಮಕತೆಯನ್ನು ಸೃಷ್ಟಿಸಿಕೊಂಡು ಆದರ್ಶ ಬದುಕನ್ನು ಕಟ್ಟಿಕೊಳ್ಳುವ ಬಯಕೆ, ಸಾರ್ಥಕತೆಗೆ ನಡೆಸುವ ಹೋರಾಟವಾಗಲಿ ಯಾವ ಪಾತ್ರಗಳಲ್ಲೂ ಅಭಿವ್ಯಕ್ತವಾಗಿಲ್ಲ. ಕೊನೆ ಸಂದರ್ಭದಲ್ಲಿ ಲಕ್ಕನನ್ನು ಹೊರತುಪಡಿಸಿ, ಆದರೆ ಎಷ್ಟೋ ಸನ್ನಿವೇಶಗಳಲ್ಲಿ ಪರೋಕ್ಷವಾಗಿ ಕಾಮ ಇವನನ್ನು ಬಿಟ್ಟಿಲ್ಲ ತನಗಿಷ್ಟದಿಲ್ಲದಿದ್ದರೂ ಹೇಗೋ ಇವನನ್ನು ಕೂಡ ಅದರಲ್ಲೂ ಭಾಗಿಯಾಗುವ ಹಾಗಿ ಮಾಡುತ್ತದೆ.

ವೈಶಾಖ ಕಾದಂಬರಿಯಲ್ಲಿ ಚಿತ್ರಿತವಾಗಿರುವ ಮಠ, ಮಠಕ್ಕೆ ಸಂಬಂಧಪಟ್ಟ ವ್ಯಕ್ತಿಗಳು ಧಾರ್ಮಿಕತೆ ಹಾಗೂ ಜನರ ನಂಬಿಕೆಯೇ ಮೂಲ ಬಂಡವಾಳವಾಗಿಸಿಕೊಡು ಪವಿತ್ರವಾದ ಮಠದ ಹೆಸರಿಗೆ ಕಳಂಕ ತರುವಂತಹ ಅನೈತಿಕ ಚಟುವಟಿಕೆಗಳ ತಾಣವನ್ನಾಗಿ ಮಾಡಿಕೊಂಡು ಸ್ವೇಚ್ಛಾರದ ಕೇಂದ್ರವಾಗಿದೆ. ನೈತಿಕ ಕೇಂದ್ರ ಖಿಲಗೊಂಡಿದೆ. ಕುಡಿತ, ಹಾದರಗಳು ನಿತ್ಯದ ವ್ಯವಹಾರಗಳಾಗಿವೆ. ಮಠದ ಸ್ವಾಮೀಜಿಯೊಡನೆ ಕೇಶವಯ್ಯ, ನಂಜೇಗೌಡ, ಕೆಂಗಣ್ಣಪ್ಪ ಮುಂತಾದವರೆಲ್ಲ ಇವನೊಡನೆ ಸೇರಿ ದರುಮನಹಳ್ಳಿಯಲ್ಲಿ ನೀತಿ ಬಾಹಿರ ಕಾರ್ಯಗಳಲ್ಲಿ ಭಾಗಿಯಾಗಿರುವವರು. ಕೊಳೆತುನಾರುವ ವ್ಯವಸ್ಥೆಯನ್ನು ಸೃಷ್ಟಿಸುವ ಕಾಮುಕರಂತೆ ವರ್ತಿಸುವರು. ಇದು ಇವತ್ತಿನ ಪ್ರಸ್ತುತ ಮಠ ಮಾನ್ಯಗಳ ಪರಿಸ್ಥಿತಿಯನ್ನು ಪ್ರತಿಬಿಂಬಿಸುತ್ತದೆ.ದರುಮನಹಳ್ಳಿಯ ಸಾಂಸ್ಕೃತಿಕ ಧಾರ್ಮಿಕ ಕೇಂದ್ರಸ್ಥಾನವಾಗಬೇಕಾಗಿದ್ದ ಹಾಗೂ ಜನರಲ್ಲಿ ಸಾಂಸ್ಕೃತಿಕ, ಧಾರ್ಮಿಕ ಪ್ರಜ್ಞೆಯನ್ನು ಜಾಗೃತಗೊಳಿಸಬೇಕಾದ್ದ ಮಠದ ಸ್ಥಿತಿಯೇ ಹದಗೆಟ್ಟಿರುವಾಗ ಜನಸಾಮಾನ್ಯರ ಪರಿಸ್ಥಿತಿ ಎಂತಹದ್ದಿದ್ದರಬಹುದು?

ಇಡೀ ಗ್ರಾಮದ ಕಳಶ ಪ್ರಾಯವಾಗಿರಬೇಕಗಿದ್ದ ಮಠದಲ್ಲೇ ಲೈಂಗಿಕ ಕ್ರಿಯೆ ನಡೆಯುತ್ತಿದ್ದರೆ ಇಡೀ ಗ್ರಾಮವೇ ಹಳಿತಪ್ಪಿದ ರೈಲಿನಂತಾಗಿ ಅಧೋಗತಿಯತ್ತ ವಾಲುತ್ತದೆ. ಇದನ್ನು ಮಾರ್ಮಿಕವಾಗಿ ಲೇಖಕರು 'ಪ್ಲೇಗ್' ರೋಗದ ಹೆಸರಿನಲ್ಲಿ ನಿರೂಪಕರು ಚಿತ್ರಿಸುತ್ತಾರೆ. ಅಂದರೆ ಇಡೀ ಊರನ್ನು ಈ ಪ್ಲೇಗ್ ಮಾರಿ ಹೇಗೆ ಆವರಿಸುತ್ತಾಳೆ ಅದೇ ರೀತಿಯಲ್ಲಿ ಅನೈತಿಕ ತಾಂಡವವಾಡುತ್ತದೆ. ಅವರನ್ನು ಅಂಧಕಾರದ ಕೂಪಕ್ಕೆ ತಳ್ಳುತ್ತದೆ.ಮನುಷ್ಯ ಇಡೀ ಪ್ರಾಣಿಸಂಕುಲದಲ್ಲೇ ಶ್ರೇಷ್ಠನೆನಿಸಿರುವನು ಕಾರಣ ಅವನ ಆಲೋಚನಾ ಶಕ್ತಿಯ ಮೂಲಕ ತಪ್ಪು ಸರಿಗಳ ವಿಮರ್ಶೆ ಅವನಿಗೆ ಮಾತ್ರ ಸಾಧ್ಯ ಈ ಒಂದು ಗುಣದಿಂದಲೇ ಅವನು ಅದ್ಭುತ ಸೃಷ್ಟಿಯೆನಿಸಿಕೊಳ್ಳುತ್ತಾನೆ. ನಿದ್ದೆ, ಆಹಾರ, ಮೈಥುನ, ಇದು ಪ್ರತಿಯೊಂದು ಜೀವಿಯಲ್ಲಿ ಕಾಣಸಿಗುವ ಮೂಲಭೂತ ಅವಶ್ಯಕತೆಗಳು, ಆದರೆ ಮನುಷ್ಯ ಕೇವಲ ಈ ಮೂರಕ್ಕೆ ಮಾತ್ರ ತನನ್ನು ಸೀಮಿತಗೊಳಿಸದೆ ಅದನ್ನು ಮೀರಿ ನಿಲ್ಲಬೇಕು ಇಲ್ಲವಾದರೆ ಅವನಿಗೂ ಪ್ರಾಣಿಗಳಿಗೂ ಯಾವುದೇ ರೀತಿಯ ವ್ಯತ್ಯಾಸವಿರುವುದಿಲ್ಲ.

ಒಟ್ಟಾರೆಯಾಗಿ ಕಾದಂಬರಿಯಲ್ಲಿ ಕಾಮಸಂಬಂಧಗಳು ಅನಿವಾರ್ಯಕ್ಕೋ, ಅಸಹಾಯಕತೆಗೋ ಹುಟ್ಟಿಕೊಳ್ಳುವುದು ಒಂದೆಡೆಯಾದರೆ, ಕ್ಷಣಿಕಸುಖದ ಲೈಂಗಿಕಾಸಕ್ತರಾಗಿ ಮನಸ್ಸಿಗೆ ಲಗಾಮು ಹಾಕದೆ ಮೃಗೀಯರಾಗಿ ವರ್ತಿಸುವವರು ಒಂದು ಕಡೆ. ಏನೇ ಆದರೂ ಇದು ಈ ಇಡೀ ಹಳ್ಳಿಯ ಮೇಲೆ ಜನರ ಬದುಕಿನ ಮೇಲೆ ವ್ಯತಿರಿಕ್ತಪರಿಣಾಮವನ್ನು ಉಂಟುಮಾಡುವುದು. ಇದು ಕೇವಲ ದರುಮನಹಳ್ಳಿಯ ಕತೆಯಷ್ಟೇ ಅಲ್ಲದೇ ಗ್ರಾಮಭಾರತದ ಕತೆ ಇದನ್ನೇ ಸಾರುತ್ತದೆ. ಇಲ್ಲಿ ನಡೆಯುತ್ತಿರುವ ಅನಾಹುತಗಳು ಗಾಬರಿಯನ್ನು ಹುಟ್ಟಿಸುವಂತಿದೆ. ಭ್ರಷ್ಟಮುಕ್ತ ಭಾರತವನ್ನು ಕಟ್ಟಬೇಕಾಗಿರುವ ಗ್ರಾಮಭಾರತ ಕಟ್ಟಿಕೊಳ್ಳುವುದಕ್ಕೆ ಆಗದೆ ಭ್ರಷ್ಟಾಚಾರಕ್ಕೀಡಾಗಿದೆ. ಭ್ರಷ್ಟಮುಕ್ತ ದೇಶವನ್ನು ನಿರ್ಮಾಣಮಾಡಬೇಕಾದರೆ ಪ್ರತಿಯೊಬ್ಬರೂ ಮಾನವೀಯತೆ, ಮನಷ್ಯತ್ವವನ್ನು, ನೈತಿಕತೆಯನ್ನು ಬೆಳೆಸಿಕೊಳ್ಳುವುದು ಮುಖ್ಯವಾಗುತ್ತದೆ.

ಅಧ್ಯಾಯ-೫

ಕಾದಂಬರಿಯಲ್ಲಿ ಕಂಡು ಬರುವ ಭಾಷಾ ಸ್ವರೂಪ

ಅಧ್ಯಾಯ – ೫

ಕಾದಂಬರಿಯಲ್ಲಿ ಕಂಡು ಬರುವ ಭಾಷಾ ಸ್ವರೂಪ

ಭಾಷೆ ಸಮಾಜದ ಒಂದು ಅವಿಭಾಜ್ಯ ಅಂಗ ಮತ್ತು ಅಭಿವ್ಯಕ್ತಿಯ ಸಾಧನ. ಮೌಖಿಕವಾಗಿದ್ದ ಭಾಷೆ ಕಾಲಾಂತರದಲ್ಲಿ ಬರವಣಿಗೆಯ ರೂಪ ಪಡೆದುಕೊಂಡಿತು. ಮನುಷ್ಯ ತನ್ನ ಭಾವನೆಗಳನ್ನು ಅನುಭವಗಳನ್ನು ವ್ಯಕ್ತಪಡಿಸಲು ಭಾಷೆ ಬಹಳ ಮುಖ್ಯ. ಭಾಷೆ ಇಲ್ಲದೆ ಭಾವನೆಗಳಿಗೆ ನಿರ್ದಿಷ್ಟ ರೂಪ ಕೊಡಲು ಸಾಧ್ಯವಿಲ್ಲ. ಹಾಗಾಗಿ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಭಾಷಾ ಸ್ವರೂಪ ಬದಲಾಗುತ್ತದೆ. ಪ್ರಾದೇಶಿಕತೆ ಮತ್ತು ಸ್ಥಳೀಯತೆಯನ್ನು ಸಾಂಸ್ಕೃತಿಕವಾಗಿ ನಿರ್ಧರಿಸುವಲ್ಲಿ ಭಾಷೆ ಒಂದು ಊರುಗೋಲು. ಸಾಹಿತ್ಯಕ್ಕೂ ಮತ್ತು ಭಾಷೆಗೂ ಅವಿನಾಭಾವ ಸಂಬಂಧವಿದೆ. ಏಕೆಂದರೆ ಸಾಹಿತ್ಯ ಸಂಭವಿಸುವುದೇ ಭಾಷೆಯ ಮೂಲಕ.

ಭಾಷೆ ಕಾದಂಬರಿ ಸೃಷ್ಟಿಗೆ ಅನಿವಾರ್ಯ ಅದರ ಜೀವಂತಿಕೆ ಇರುವುದೇ ಭಾಷೆಯಲ್ಲಿ. ಕಾದಂಬರಿಯಲ್ಲಿ ಸಂಭವಿಸುವ ಘಟನೆಗಳನ್ನು ತಾರ್ಕಿಕವಾಗಿ, ಭಾಷಿಕವಾಗಿ ವಿವರಿಸಿಕೊಳ್ಳಲು ಭಾಷಾ ಪರಿಕರಗಳು ನೆರವು ನೀಡುತ್ತದೆ ಮತ್ತು ಗ್ರಹಿಸಬೇಕಾದ ನೆಲೆಯನ್ನು ತಾನೇ ಸೂಚಿಸುತ್ತದೆ. ತಂತ್ರ, ಶೈಲಿ, ನಿರೂಪಣಾ ವಿಧಾನ, ಸಂಕೇತ, ಪ್ರತಿಮೆಗಳು, ಅಲಂಕಾರಗಳು, ಗಾದೆ, ಒಗಟು, ನುಡಿಗಟ್ಟು ವರ್ಣನೆಗಳು ಮುಂತಾದ ಭಾಷಾ ಪರಿಕರಗಳ ಬಳಕೆಯಿಂದ ಕಾದಂಬರಿಯ ತೂಕ ಹೆಚ್ಚಾಗುತ್ತದೆ ದೃಶ್ಯ ನಿರ್ಮಾಣ, ಪಾತ್ರಸೃಷ್ಟಿಯಲ್ಲಿ ಇವುಗಳನ್ನು ಬಳಸಿಕೊಂಡಾಗ ಭಾಷೆಯ ಶಕ್ತಿ ಮತ್ತು ಕೃತಿಯ ಮೌಲ್ಯವೂ ಕೂಡ ಹೆಚ್ಚಾಗುತ್ತದೆ. ಹಾಗಾಗಿ ಒಟ್ಟಾರೆಯಾಗಿ ಅಧ್ಯಯನ ಮಾಡಲು ಭಾಷಿಕ ಸ್ವರೂಪ ಬಹಳ ಮುಖ್ಯವೆನಿಸುತ್ತದೆ.

ವೈಶಾಖ ಕಾದಂಬರಿಯಲ್ಲಿ ಕಂಡು ಬರುವ ಭಾಷಾ ಸ್ವರೂಪವನ್ನು ಕುರಿತು ಹೇಳುವುದಾದರೆ ಜನ ಭಾಷೆಯ ಅತ್ಯಂತ ಯಶಸ್ವಿ ಬಳಕೆ ಈ ಕಾದಂಬರಿಯಲ್ಲಿದೆ. ಭಾಷೆ ಕೆಲವೊಮ್ಮೆ ತೀರ ಪ್ರಾದೇಶಿಕವೆನ್ನಿಸಿದರೂ ಅದು ಕಾದಂಬರಿಯ ವೈಶಿಷ್ಟ್ಯವಾಗಿದೆ. ಓದುಗ ಈ ಪ್ರಾದೇಶಿಕತೆಯ ಕೋಟೆಯನ್ನು ಬೇದಿಸಿಕೊಂಡು ಒಳಹೊಕ್ಕರೆ ಮಾತ್ರ ಅಲ್ಲಿ

ಹುದುಗಿರುವ ನಿಜವಾದ ಆನಂದಾನುಭವವನ್ನು ಪಡೆಯುತ್ತಾರೆ. ಅಪೂರ್ವ, ಇಸ್ಯ, ಅಪಾದ, ಅಲ್ಲಂಡೆ ಆಗು, ಆಟಗುಳಿ, ಆತುಮಕೆ, ಉಡಕಂಡು, ಉತ್ಪತ್ತಗರು, ಉಬ್ಬರಣ, ಎಕ್ಕಾಸ, ಎಡಗೋಲು ಒಕ್ಕರೆ ತೊದರೆ, ಕಜೆ, ಕ್ಯಾತೆ, ಗೆಪ್ಪೆ, ಚಿಕ್ಕೊಂಡು, ಜಪಾಲೆ, ಜಂಬರ, ಜೆಯಿಕ, ಗ್ವಾಮಾಳೆ, ಜೀವಣಿಸು, ತಟಾಯಿತ್ತಿದ್ದಂಗೆ, ತೊಂಟೆ, ದಂಧರಾಳಿ, ದೊಣು, ನೆಪ್ಪು, ಬಿಮ್ಮನಸೆ, ಭ್ರಾಂತು, ಬುದ್ಯೆ, ಬೆಳ್ಳು, ಯತೆ, ಮೆಡ್ಡರಿಸು, ಮಡೋಗಾರಿಕೆ, ಮಳ್ಳದ್ದ, ಹೈಲಾಟ, ಹ್ಯಾಪಮ್ವಾರ, ಸೆಡೀದು, ಸರಣ, ವಮನ, ರುದ್ಧಿ, ರಾವುಟ, ಸಾಜ, ಸಿಂಡು, ಸುಂಗಾರ, ಸೊಂಪಲು, ಫಲಾತ, ಪರಿಯಾರ, ನಾಚಾರ್ಲು, ಮುಕ್ಕಾದಾತ, ಭೂಪತನ, ದಾವು, ದಂಧರಾಳಿ, ಅಣಬರಾವೆ, ಅತಾವಿಗಂಟ, ಈತೋರ, ಉತ್ಪತ್ತಗರು, ಎಕ್ಕಾಸ, ಉಮೇದು, ಕುಸುಮತ್ತು, ಕ್ಯಾಣ, ಕವಕನೆ, ಬೇಳುಗರೆ, ಬೆಳ್ಳು, ಸಸನೆ, ಸಿಳ್ಳೆಕ್ಯಾತ, ಹೆಬಗ, ಹೈಲಾಟ, ಸೆಡೀದು, ಹೊಳ್ಳಂಡೊಳ್ಳೆ, ಅಸಾಮಿ, ಇತ್ಯಾದಿ ಗ್ರಾಮ್ಯ ಶಬ್ದಗಳೊಂದಿಗೆ ಗ್ರಾಮೀಣ ಸಂಸ್ಕಾರ ಪಡೆದ ನಿಮಾನಿ, ಪಳಿಗು, ರಿಪೇರಿ, ಪಾಳುಸ್ವರು, ಟವನ್, ಸೆಪೊಲ್ಪು ಮುಂತಾದ ಇಂಗ್ಲೀಷ್ ಪದಗಳು ಸಮರಸವಾಗಿ ಬೆರತುಕೊಂಡಿದೆ. ಇಲ್ಲಿಯ ಭಾಷೆ ಎರಡು ಪ್ರಮುಖ ಪ್ರವಾಹಗಳಾಗಿ ಹರಿದಿದೆ. ಒಂದು ಬ್ರಾಹ್ಮ ವರ್ಗಕ್ಕೆ ಸೇರಿದ ಶಿಷ್ಟ ಭಾಷೆ ಮತ್ತೊಂದು ದಲಿತ ವರ್ಗಕ್ಕೆ ಸೇರಿದ ಗ್ರಾಮ್ಯ ಭಾಷೆ. ಅವರವರು ಬಳಸಿದ ಭಾಷೆಯ ಮೇಲಿಂದಲೇ ಅವರ ಜಾತಿಗಳನ್ನು ಗುರುತಿಸಬಹುದು.

ಗ್ರಾಮ ಜೀವನದ ಗಾಢ ಸಂಪರ್ಕ ಕಾದಂಬರಿಯ ಭಾಷೆಗಿರುವುದರಿಂದ ಗಾದೆಗಳು, ಒಗಟುಗಳು, ನುಡಿಗಟ್ಟುಗಳು ಬರವಣಿಗೆ ಶೈಲಿಯಲ್ಲಿ ಆಕರ್ಷಣೆಯನ್ನು ಮೂಡಿಸುತ್ತದೆ. ಇವುಗಳನ್ನು ನಿರೂಪಕರು ಸಮಯೋಚಿತವಾಗಿ ಬಳಸಿಕೊಂಡು ಕಾದಂಬರಿಗೊಂದು ಮೆರಗನ್ನು ಮತ್ತು ಕಲಾತ್ಮಕತೆಯನ್ನು ನೀಡಿದ್ದಾರೆ. ಪ್ರಾರಂಭದಲ್ಲಿ ಗ್ರಾಮ್ಯ ಭಾಷಾ ಬಳಕೆ ಓದುಗರಿಗೆ ಕ್ಲಿಷ್ಟವೆನಿಸಿದರೂ ತದನಂತರದಲ್ಲಿ ಅದರ ಆಳಕ್ಕೆ ಇಳಿದಾಗ ಅದರಲ್ಲಿರುವ ಜ್ವಲಂತ ಗುಣಾತ್ಮಕ ಅಂಶಗಳು, ಹೃದಯವಂತಿಕೆ ಮಾನವೀಯ ಅನುಭವ, ಅನುಕಂಪಗಳ, ನೆಲೆಯಿಂದ ಉಕ್ಕಿ ಬಂದಂಥ ಸೃಜನಾತ್ಮಕ ಕೃತಿಯಾಗಿ, ಆ ಭಾಷೆಯು ಸಹಜ ಕಾವ್ಯಮಯತೆಯಿಂದ ಕೂಡಿದೆ ಎಂದನ್ನೆಸುತ್ತದೆ.

"ವೈಶಾಖ ರೂಪಿಸಿಕೊಂಡಿರುವ ಭಾಷೆಯ ಹದಕ್ಕೆ ಸಂಬಂಧಿಸಿದಂತೆ ಎರಡು ವಿಚಾರಗಳು ಹೇಳುವುದು ಅವಶ್ಯವೆನಿಸುತ್ತದೆ. ಲಕ್ಕನೊಂದಿಗೆ ಪ್ರಕಟಗೊಳ್ಳುವ ದಲಿತ ಲೋಕದ ಭಾಷೆ ಮತ್ತು ರುಕ್ಮಿಣಿಯೊಂದಿಗೆ ಪ್ರಕಟವಾಗುವ ಶಿಷ್ಟಲೋಕದ ಭಾಷೆ ಪ್ರಯೋಗದ ರೀತಿಯಿಂದ ಆಕರ್ಷಕವಾಗಿದೆ ಲಕ್ಕನ ಲೋಕದ ಭಾಷೆಯಲ್ಲಿ ವ್ಯಕ್ತವಾಗಿರುವ ಜೀವಂತಿಕೆ ಜೀವನಾನುಭವ ರುಕ್ಮಿಣಿಯ ಶಿಷ್ಟ ಲೋಕದ ಭಾಷೆಯಲಿಲ್ಲ. ದಲಿತರು ತಮ್ಮ ಆಡು ಭಾಷೆಯ ಕುರಿತು ತಾಳಿದ ಸ್ವಾಭಿಮಾನ, ಅನುಮಾನ, ಸಂಕೋಚ ಹಾಗೂ ಸಂದಿಗ್ಧತೆ ಎಂಬ ಅನುಭವದ ರೂಪಕ್ಕೆ ದೂಕುತ್ತದೆ. ಶಿಷ್ಟರ ಆಡು ಭಾಷೆಯೊಂದಿಗೆ ದಲಿತರ ಆಡುಭಾಷೆಯನ್ನು ಅಕ್ಕಪಕ್ಕದಲ್ಲಿಯೇ ದಾಖಲಾಗುವುದರಿಂದ ಲಕ್ಕನ ಲೋಕದ ಭಾಷೆಯಲ್ಲಾಗುವ ಉಚ್ಚಾರದ ಲೋಪದೋಷಗಳು ಕಾದಂಬರಿಯ ಉದ್ದಕ್ಕೂ ಕಣ್ಣಿಗೆ ರಾಚುವಂತೆ ಕಾಣುತ್ತದೆ. ಕಾದಂಬರಿಯಲ್ಲಿ ಕಂಡು ಬರುವ "ಘಟಸ್ಫೋಟ' ಕರ್ಮಾಚರಣೆಯ ಸಂದರ್ಭದಲ್ಲಿ ಸೇವಕಿಯಾದ ಸಾಕಿಯ ಮೂಲಕ ವೆಂಕಣ್ಣ ಜೋಯಿಸರೇ ತಾವು ಹೇಳಿಸಿದಂತೆ ಹೇಳಿಸುವ ಪ್ರಸಂಗ ಹಾಸ್ಯವೆನಿಸಿದರೂ ಕೈಯಲ್ಲಿ ಕನ್ನಡಿಕೊಟ್ಟು ಮುಖ ನೋಡಿಕೊಳ್ಳಲು ಹೇಳಿದಂತಹ ಅನುಭವವಾಗುತ್ತದೆ. ಸತ್ಯ ಯಾವಾಗಲೂ ಕಹಿಯಾಗಿಯೇ ಇರುತ್ತದೆ. ಅದನ್ನು ಸ್ವೀಕರಿಸುವ ಅನಿವಾರ್ಯವೇನೋ ಎನಿಸುತ್ತದೆ. ದಲಿತರ ಕೃತಿಗಳಲ್ಲಿಯೇ ವ್ಯಕ್ತವಾಗುವ ದಲಿತೀಯ ಭಾಷೆ ಒಂದೇ ಸ್ವರೂಪದ್ದಾಗಿರುವುದರಿಂದ ಅಲ್ಲಿ ಮೂಡುವ ಭಾಷಾಭಿಮಾನ, ವ್ಯಾಮೋಹವನ್ನು ಬೆಳಸುತ್ತದೆ."[೧]

ಒಂದು ಭಾಷೆ ಕೃತಿಯಲ್ಲಿ ದಾಖಲಾದಾಗ ಅಲ್ಲಿ ಕೇವಲ ಭಾಷೆ ಮಾತ್ರ ಮೂಡಿ ಬರುವುದಿಲ್ಲ. ಬದಲಾಗಿ ಭಾಷೆಯೊಂದಿಗೆ ಆಯಾ ಜನಾಂಗದ ಸಂಸ್ಕೃತಿಯು ಮೂಡಿಬರುತ್ತದೆ. ಪ್ರತಿ ಜನಾಂಗವೂ ತನ್ನದೇ ಆದ ಭಾಷಾ ಸ್ವರೂಪವನ್ನು ಹೊಂದಿರುತ್ತದೆ. ಈ ಕಾದಂಬರಿಯಲ್ಲಿ ಪಾತ್ರಗಳ ಮನೋಜಗತ್ತನ್ನು ಮಂಡಿಸುವಾಗ ಶಿಷ್ಟಭಾಷೆಯ ವಾಕ್ಯಗಳುಪದರಚನೆ, ಸಾಮಾಜಿಕ ಉಪಭಾಷೆ ದಾಖಲಾಗುತ್ತದೆ. ಈ ವಿಭಜನೆ

೧) ವೈಶಾಖ ವೈವಿಧ್ಯ–ಡಾ.ಬಸವರಾಜ ಸಬರದ,ಪು.ಸಂ.೨೩೭

ಕಾದಂಬರಿಯ ಶೈಲಿಗೆ ಬಹುತ್ವವನ್ನು ತಂದಿದೆ. ಆದರೆ ಈ ರೀತಿಯ ಬಹುತ್ವ, ಭಾಷೆ ತಾಳುವ ವಿವಿಧರೂಪದ ಬಗ್ಗೆ ಅರಿವಿದ್ದರಿಗೆ ತೊಡಕಾಗುವುದಿಲ್ಲ. ಏನೇ ಆದರೂ ಶಿಷ್ಟ ಮತ್ತು ಗ್ರಾಮ್ಯಭಾಷೆ ಓದುಗರಲ್ಲಿ ಚಿತ್ತಾಕರ್ಷಕ ಶಕ್ತಿಯನ್ನು ಉಂಟುಮಾಡುತ್ತದೆ ಮತ್ತು ಕಾದಂಬರಿಯಲ್ಲಿನ ಪಾತ್ರಗಳ ಮನೋಜಗತ್ತನ್ನು ವಿಶ್ಲೇಷಿಸುವಲ್ಲಿ ತನ್ನದೇ ಆದ ಭಿನ್ನ ಸ್ವರೂಪವನ್ನು ರೂಪಿಸಿಕೊಂಡಿದೆ ಎಂದರೆ ತಪ್ಪಾಗಲಾರದು.

ಕಾದಂಬರಿಯ ತಂತ್ರಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ ನಿರೂಪಕರು ಕಥೆಯನ್ನು ನೇರವಾಗಿ ಹೇಳುತ್ತಾ ಹೋಗುವುದಿಲ್ಲ. ಕಾದಂಬರಿಯಲ್ಲಿ ಮುಖ್ಯವಾದ ಪಾತ್ರಗಳು ಮನಸ್ಸಿನ ಸಂದರ್ಭದಲ್ಲಿ ಸನ್ನಿವೇಶಗಳು ಕಾಣಿಸಿಕೊಳ್ಳುತ್ತದೆ. ಹೆಚ್ಚು ಸಂದರ್ಭಗಳಲ್ಲಿ ನೆನಪುಗಳಾಗಿ ಕಾಣಿಸಿಕೊಳ್ಳುತ್ತದೆ. ಮತ್ತೊಂದು ಸಂದರ್ಭದಲ್ಲಿ ನೇರ, ಮುಖಾಮುಖಿ ಸಂಭಾಷಣೆ ಮೂಢಿ ಬಂದಿರುತ್ತದೆ. ಎದುರುಗಡೆ ಘಟನೆಗಳು ನಡೆಯುತ್ತಿರುವಾಗ ಯಾವ ಪಾತ್ರದ ಮನಸ್ಸು ಅದಕ್ಕೆ ಸ್ಪಂದಿಸುತ್ತಿರುವಂಥ ತಂತ್ರ ಯೋಜನೆ ಇದೆಯೋ ಆ ಪಾತ್ರಕ್ಕೆ ನಿತ್ಯ ಜೀವನದ ಸಂದರ್ಭದಲ್ಲಿ ಸಹಜವಾದ ಭಾಷಾ ರೂಪಗಳನ್ನು ಇಲ್ಲಿ ಬಳಸಲಾಗಿದೆ.

ಹೊಲೆಯರ ಹುಡುಗ ಲಕ್ಕ ಇಲ್ಲಿ ಬಹಳ ಮುಖ್ಯವಾದ ಪಾತ್ರ, ಇನ್ನೊಂದು ಮುಖ್ಯ ಪಾತ್ರ ಒಬ್ಬ ಬ್ರಾಹ್ಮಣ ಸಕೇಶಿ ವಿಧವೆ ರುಕ್ಮಿಣಿ, ಲಕ್ಕ ಸಂಗತಿಗಳನ್ನು ಘಟನೆಗಳನ್ನು ಗ್ರಹಿಸುತ್ತಿರುವಂತ ಕಡೆಗಳಲ್ಲೆಲ್ಲ ಅವನ ದಿನ ನಿತ್ಯದ ಆಡು ಭಾಷೆಯ ಅಂದರೆ ಗ್ರಾಮ್ಯ ಭಾಷೆಯ ಮೂಲಕವೇ ಸಂಗತಿಗಳು ಘಟನೆಗಳು ದಾಖಲಾಗುತ್ತದೆ. ರುಕ್ಮಿಣಿಯಲ್ಲಿ ಶಿಷ್ಟ ಭಾಷೆಯ ಮೂಲಕ ದಾಖಲಾಗುತ್ತದೆ. ಆ ಎರಡು ಸಂದರ್ಭಗಳಲ್ಲಿಯೂ ಬಳಕೆಯಾಗುವ ಭಾಷೆ ಆಯಾ ಪಾತ್ರಗಳ ಸಾಂಸ್ಕೃತಿಕ ಸಾಮಾಜಿಕ ಮತ್ತು ವೈಯಕ್ತಿಕ ಪರಿಸರಕ್ಕೆ ಇರುವಿಕೆಗೆ ಸಹಜವೆಂಬಂಥ ಹದದಲ್ಲಿಯೇ ಇವೆ. ಭಾಷೆಗೆ ಅಂಥ ಪಾಕ ಬಂದಿದೆ. ರುಕ್ಮಿಣಿಯ ಮಾವ ಕೃಷ್ಣಶಾಸ್ತ್ರಿಗಳ ರುಕ್ಮಿಣಿಯನ್ನು ಕೂಡಿದ, ಅನಂತರದ ಸ್ವಲ್ಪ ಭಾಗದ ಬರವಣಿಗೆಯ ವಿವರ ಅವನ ಮನಸ್ಸಿನ ಒಳಗೆ ಅವನ ಗ್ರಹಿಕೆಯ ಚೌಕಟ್ಟಿನಲ್ಲಿ ನಡೆಯುತ್ತದೆ. ಇದು ನಿರೂಪಕರ ತಂತ್ರ ವಿಧಾನವೂ ಆಗಿರಬಹುದು.

ಈಗಾಗಲೇ ಹೇಳಿದ ಹಾಗೆ ಗ್ರಾಮ್ಯ ಭಾಷೆ ಓದುಗರಲ್ಲಿ ತೊಡಕೆನಿಸಿದರೂ ಲಕ್ಕನ ಪ್ರಜ್ಞೆಯಲ್ಲಿ ಸೋಸಿ ಸೋಸಿ ಬರುವ ಅನುಭವಗಳು, ಆ ಅನುಭವಗಳು ಅವನ ಮನಸ್ಸಿನ ಸಿದ್ಧತೆ ಸಂಸ್ಕಾರದ ಹದ, ಪಾಕ ಕಡೆದಂತೆ ಪಡದುಕೊಳ್ಳುವ ನುಡಿಕಟ್ಟು ಅಭಿವ್ಯಕ್ತಿ ಗದ್ಯದಲ್ಲಿದ್ದರೂ ಹಲವು ಕಡೆಗಳಲ್ಲಿ ಕಾವ್ಯಗಂಧಿಯಾಗಿದೆ. ಇಲ್ಲಿ ಗ್ರಾಮ್ಯ ಭಾಷೆ ಬಳಕೆ ಮತ್ತು ಘಟನೆಗಳಿಗೆ ಸಂಬಂಧಿಸಿದಂತೆ ದೇವನೂರು ಮಹಾದೇವರ ಬರವಣಿಗೆಯ ನೆನಪು ಈ ಕಾದಂಬರಿಯನ್ನು ಓದುತ್ತಿರುವಾಗ ಸ್ವಲ್ಪಮಟ್ಟಿಗಾದರೂ ಎಂತವರಿಗೂ ಆಗಿದ್ದರೂ ಆಶ್ಚರ್ಯವಿಲ್ಲ. ಅದೇನೇ ಇದ್ದರೂ ಚದುರಂಗರೂ ಆಡುನುಡಿಯ ನಾಡಿ ಹಿಡಿದು ಅದರ ಸಹಜಲಯದಲ್ಲಿ ತಮ್ಮದೇ ಆದ ವಿಶಿಷ್ಟ ಬಗೆಯಲ್ಲಿ ಬಳಸಿದ್ದಾರೆ. ಆಡುನುಡಿಯನ್ನು ಯಾವ ಹದದಲ್ಲಿ, ಎಷ್ಟು ಸಹಜತೆಯಲ್ಲಿ ಮನವರಿಕೆಯಾಗುವ ರೀತಿಯಲ್ಲಿ ಚದುರಂಗರು ದುಡಿಸಿಕೊಂಡಿದ್ದಾರೆ ಎಂಬುದು ಓದಿ ಅನುಭವಿಸಿ ಮೆಚ್ಚಬೇಕಾದ ಅಂಶ. ಅದು ಅವರ ನಿರೂಪಣಾ ಶೈಲಿಯಲ್ಲಿಯೇ ಸ್ಪಷ್ಟವಾಗುತ್ತಾ ಹೋಗುತ್ತದೆ.

"ವೈಶಾಖ ತನ್ನ ಮಹತ್ವಾಕಾಂಕ್ಷೆ ಮತ್ತು ತಂತ್ರದ ದೃಷ್ಟಿಯಿಂದ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ಪ್ರಭಾವದಲ್ಲಿ ಮೂಡಿಬಂದಿದ್ದೆಂದು ಅನಿಸುತ್ತದೆ. ಲಕ್ಕನ ನಾಯಿ ಬೊಡ್ಡನ ಲೆಕ್ಕದಿಂದ ಈ ಮಾತು ಹೇಳುತ್ತಿಲ್ಲ. 'ಮಲೆಗಳಲ್ಲಿ ಮದುಮಗಳು' ಕಾದಂಬರಿಯಲ್ಲಿ ಗಂಡು–ಹೆಣ್ಣಿನ ಲೈಂಗಿಕ ಸಂಬಂಧದ ಘಟನಾವಳಿಗಳು ಬರುತ್ತದೆ. ಅನುಭವ ಸಮೃದ್ಧಿಯ ಹಿನ್ನೆಲೆಯಲ್ಲಿ ಕೂಡ ಹೋಲಿಕೆ ಕಂಡುಬರುತ್ತದೆ.

ವಸ್ತುವಿನ ಗಾಢತೆಯಲ್ಲಿ ಅದು ಹೊಳೆಯುವ Tragic Optimism ನಲ್ಲಿ ಇತ್ತೀಚಿನ ತುಂಬ ಮಹತ್ವದ್ದೆನಿಸುವ ವೈಶಾಖ ಭಾಷೆಯ ಬಳಕೆಯಲ್ಲಿ ವಿಶೇಷ ಸೃಜನಶೀಲತೆಯನ್ನು ತೋರುತ್ತಾದರೂ ಅದು ತನ್ನ ಬಂಧದಿಂದ ನಮ್ಮಲ್ಲಿ ಒಂದಿನಿತು ಅತೃಪ್ತಿಯನ್ನು ಉಂಟು ಮಾಡುತ್ತದೆ. ವಿವರಗಳು ಅನೇಕ ಕಡೆ ಕೇಂದ್ರೀಯವಾಗಿ ಹೊಂದಿಕೊಳ್ಳದೆ ಮಾತುಗಾರಿಕೆಯ ಚಪಲವಾಗಿಯೋ, ಗೊತ್ತಿರುವುದನ್ನೆಲ್ಲಾ ಹೇಳುವ ಪ್ರಯಾಸಕರ, ಪ್ರಯತ್ನವಾಗಿಯೂ ಮೂಢಿಬರುತ್ತದೆ. ಚದುರಂಗರದು ಮೂಲಭೂತವಾಗಿ ನವೋದಯದ ರಮ್ಯ ಮನೋಭಾವದ ಶೈಲಿ, ಅದು ಸಂಕ್ಷೇಪತೆಗಿಂತ ಸಮೃದ್ಧತೆಗೆ ಒಲಿಯುವಂಥದು.

ಇದಲ್ಲದೆ ಅನುಭವದ ಒಂದೊಂದು ವಿವರನ್ನು ಕಾದಂಬರಿಯ ಹರಹಿನಲ್ಲಿ ಹೊಂದಿಸುವ ಎಳೆದಾಟದ ಪ್ಲ್ಯಾಶ್ ಬ್ಯಾಕ್ ತಂತ್ರ ಪ್ರಯಾಣ ಮೀರಿ ದುಡಿದಂತೆ ತೋರುತ್ತದೆ. ಈ ಹಿನ್ನೆಲೆಯಲ್ಲಿ ವಾಸ್ತವ ಮಾರ್ಗದ ವೈಶಾಖ ಕಾದಂಬರಿ ವಸ್ತುವಿನ ದೃಷ್ಟಿಯಿಂದ ಬಹುಮುಖ್ಯವಾದ ಪ್ರಶ್ನೆಗಳನ್ನು ಎತ್ತುತ್ತ ಮಹತ್ವಾಕಾಂಕ್ಷೆಯ ಕಾದಂಬರಿಯಾಗುತ್ತದಾದರೂ ತಂತ್ರದ ಸಡಿಲತನದಿಂದ ನಮ್ಮಲ್ಲಿ ಅತೃಪ್ತಿಯನ್ನುಂಟು ಮಾಡುತ್ತದೆ".[೧]

ಹೀಗೆ ಕಾದಂಬರಿಯಲ್ಲಿ ಭಾಷೆಯ ಸತ್ವವನ್ನು ಸಶಕ್ತವಾಗಿ ದುಡಿಸಿಕೊಂಡಿದ್ದಾರೆ. ಭಾಷಾ ಬಳಕೆ ಕಾವ್ಯಕ್ಕೆ ಹತ್ತಿರವಾಗುವ ಗುಣಗಳನ್ನು ಒಳಗೊಳ್ಳುತ್ತದೆ. ಗಾದೆಗಳು, ಒಗಟುಗಳು, ನುಡಿಗಟ್ಟುಗಳು, ಚದುರಂಗರ ಭಾಷೆಯ ಸಾಧ್ಯತೆಗಳನ್ನು ಹೆಚ್ಚಿಸುತ್ತದೆ. ಇವುಗಳ ಬಳಕೆ ಕಾದಂಬರಿಯಲ್ಲಿ ಇಲ್ಲದಿದ್ದರೆ ಎಲ್ಲೋ ಒಂದು ಕಡೆ ಅದು ಸಪ್ಪೆ ಎಂದೆನ್ನಿಸಿಕೊಳ್ಳುತ್ತಿತ್ತೇನೋ. ಇವುಗಳ ಬಳಕೆಯಿಂದ ಕಾದಂಬರಿಗೊಂದು ಮಹತ್ವದಸ್ಥಾನ ಮತ್ತು ಪ್ರಭಾವಶಾಲಿಯಾದ ಭಾಷಾ ಶೈಲಿ ಗೋಚರವಾಗುತ್ತದೆ ಎಂದುರೆ ತಪ್ಪಾಗಲಾರದು.

ಚದುರಂಗರು ವೈಶಾಖದಲ್ಲಿ ಸನ್ನಿವೇಶಕ್ಕೆ ಪಾತ್ರಕ್ಕೆ ತಕ್ಕಂತೆ ಆಕರ್ಷಣಿಯವಾಗಿ ಗಾದೆ ಮಾತುಗಳನ್ನು ಬಳಸಿಕೊಂಡಿದ್ದಾರೆ. 'ಹೆಣ್ಣು ಎಂದರೆ ಹೆಬಗನೂ ನಕ್ಕ' ಅನ್ನ ಅದೇಂತ ತಿಂದೋನು ಕೆಟ್ಟ, ಎಣ್ಣು ಅವಳೇಂತ ವೋದೋನು ಕೆಟ್ಟ', 'ಯಾರ್ದೋ ಹೆಸರು ಯಾರ್ದೋ ಬಸುರು', ಪಗಡಿ ಆಡಿ ಪಾಂಡವರು ಕೆಟ್ರು, ಇಸ್ಪೀಟಾಡಿ ಇದ್ದ ಬಿದ್ದವರೆಲ್ಲ ಕೆಟ್ರು, ಈ ಗಳಿಗೆಗೆ ಮೋಡ ಇನ್ನೊಂದು ಗಳಿಗೆಗೆ ಬಿಸಿಲು, ಇಲ್ಲದೇ ಇಲ್ಲದ್ಕೆ ಅಲ್ಲು ಬೀರನೇ ಗಂಡ ಅಂತ, 'ಕಳ್ಳನ ಹೆಂಡತಿ ಎಂದಿದ್ದರೂ ಮುಂಡೇಯ', 'ದನ ತಿನ್ನೋನಿಗೆ ಗೊಬ್ಬರದ ಆಣೆ', ಊರು ಸೂರೆ ಹೋದ ಬಳಿಕ ಕೋಟೆ ಬಾಗಿಲು ಹಾಕುವ ಯತ್ನ ಮಾಡಿದಂತೆ, 'ಮಂತ್ರಿಸಿದರೆ ಮಾವಿನ ಕಾಯಿ ಉದುರುತ್ತೆ', 'ಒಂದು ತುರುಬಿಗೆ ಒಂದೇ ಊವು', ಮನುಸನಿಗೆ ಬರದೆ ಮರಕ್ಕೆ ಬಂದಾತ', ರಾವಳಾಸೂರನ ಹೊಟ್ಟೆಗೆ ಅರೆಕಾಸಿನ ಮಜ್ಜಿಗೇಂತ', ನಮಾಜು ಮಾಡೋಕ್ಕೋಗಿ ಮಸೀದ ತಲೆ ಮ್ಯಾಲೆ ಕೆಡೀಕಂಡಗಾಯ್ತು, "ಮುತ್ತಿನಂತಾ ಮಾತ ತಂದ್ಯಲ್ಲೊ ಮಗನೆ", 'ಹೂಸೋದು ತಡ ಅಂದ್ರೆ', 'ನಾರೋದು

---

೧) ವೈಶಾಖ ವೈವಿಧ್ಯ–ಡಾ: ಬಸವರಾಜ ಸಬರದ, ಪುಟ ಸಂಖ್ಯೆ: ೫೬

ತಡವ?', ನಮ್ಮ ಊರಿಗೆ ಯಾರ್ದೊ ಹೆಸರು, ಇನ್ಯಾರ್ದೊ ಬೊಸರು', ಸಂದೀಲೇ ಅವರೇಕಾಯಿ ಕುಯ್ಯೋ ಆಸಾಮಿ. ಈ ಮುಂತಾದ ಗಾದೆಗಳಲ್ಲಿ ಅಪಾರವಾದ ಅರ್ಥ ಹಾಗೂ ಜೀವನಾನುಭವದ ಮುದ್ರೆಯಿದೆ. ಹಾಗೂ ಹೆಚ್ಚು ವ್ಯಾಪಕವಾದ, ಜನಸಮ್ಮುಖವಾದ, ವಸ್ತುವೈವಿಧ್ಯತೆಗೆ, ಸಂಸ್ಕೃತಿ ಸಂಪನ್ನತೆ, ವಿಚಾರ ವೈಭವ, ಬದುಕಿನ ವಿಶ್ಲೇಷಣೆ, ದುರುಮನಹಳ್ಳಿಯ ಜನರ ಬದುಕಿನ ಬವಣೆಗಳು, ಅನುಭವ ಸಾಂದ್ರತೆ ಇವೆಲ್ಲವೂ ಕಾದಂಬರಿ ಬಲಗೊಳಿಸಲು ಸಹಾಯಕವಾಗಿದೆ.

ವೈಶಾಖದಲ್ಲಿ ಒಗಟುಗಳು ಕೂಡ ಮಕ್ಕಳಾಟದಲ್ಲಿ ಸಂದರ್ಭಕ್ಕನುಗುಣವಾಗಿ ಬಳಕೆಗೊಂಡಿದೆ. ಊರಿನ ಮಕ್ಕಳು ಒಗಟು ಬಿಡಿಸುವ ಆಟವನ್ನು ನಿರೂಪಕರೂ ಇದನ್ನು ಗ್ರಾಮ್ಯ ಭಾಷೆಯಲ್ಲಿ 'ಒಂಟು ಒಡಿಯೋ ಆಟ' ಎಂದು ನಿರೂಪಿಸಿದ್ದಾರೆ. ಈ ಒಗಟುಗಳು ದರುಮನಹಳ್ಳಿಯಲ್ಲಿ ನಡೆಯುವ ಘಟನೆಗಳಿಗೆ, ವಿಪರ್ಯಾಸಗಳ ಬಗೆಗೆ ಬೆಳಕು ಚೆಲ್ಲುತ್ತದೆ. "ಪಂಚ ಮೊಕದ ಕುದುರೆ ಪಾರ ತಿರುಗ್ತದೆ", "ಕತ್ತಲೆ ಮನೇನೆ ಕರಿಯಪ್ಪ ಗುಟರಾಕ್ತಾನೆ", "ಇಟ್ಟು ಆಯಿತ್ಲೆ ಜುಟ್ಟು ಕುಣಿಸ್ತು", "ಉತ್ತ ವೊಲದಲ್ಲಿ ತೆಕ್ಕೆ ಮೂಡಿಸಿ ಬಿದ್ದದೆ", ಗುಡು ಗುಡು ಬಂತು, ಗೂಡಿನ ತುಂಬ ಮೊಟ್ಟೆ ಇಕ್ತು", ಏಳದೇ ಇದ್ದೋರಿ ಮುಕುಳಿಗೆ ಚೂರೆ ಈ ಒಂಟಿಗೇನಪ್ಪ ಅರ್ತ?, ಅಡಿಕೆ ಆಯನಾರಿ, ಚಾಪೆ ಮೊಡಸನಾರಿ, ಕತ್ತಲೆ ಮನೇಲಿ ಮುದುಕಿ ಕುಯ್ತವ್ರೆ. ಈ ಮುಂತಾದ ಒಡಪುಗಳು ಮೂಡಿ ಬಂದಿದೆ. ಇವು ಸಾಮಾಜಿಕ ಸಂದರ್ಭದಲ್ಲಿ ಮನೋರಂಜನೆ ಅಷ್ಟೆ ಅಲ್ಲದೆ ಭಾಷೆಯ ಸಾಂಕೇತಿಕತೆ ಅರ್ಥಗುಂಭತೆಯನ್ನು ಒಳಗೊಂಡಿದೆ. ಕಥೆಗೆ ಸಾಂಸ್ಕೃತಿಕ ವೈಭವವನ್ನು ಕಟ್ಟಿಕೊಟ್ಟಿದೆ.

ಇವುಗಳ ಜೊತೆಗೆ ಬದುಕಿನ ಇನ್ನೊಂದು ಭಾಗವಾದ ದಿನ ನಿತ್ಯದ ಚಟುವಟಿಕೆಗಳು ಕೂಡ ಅದರದೇ ಆದ ಮಜಲುಗಳನ್ನು ಪಡೆದುಕೊಂಡಿದೆ. ಹೊಲದಲ್ಲಿ ದುಡಿಯುವುದು, ಚಾಪೆ ಹೆಣೆಯುವುದು, ಹರಟೆ ಹೊಡೆಯುವುದು, ಒಡಪು ಹೇಳುವುದು, ಧರ್ಮೋಪದೇಶ, ಪಂಚಾಯಿತಿ, ಹಬ್ಬ ಹರಿದಿನ, ಇಸ್ಪೀಟಾಟ, ಹೆಣ್ಣು ಮಕ್ಕಳು ಬಹಿರ್ದೆಸೆಗೆ ಹೋದಾಗ ಹರಟುವುದು – ಹಿಗೆ ಎಲ್ಲಾ ಸಣ್ಣ ಪುಟ್ಟ ಗ್ರಾಮೀಣಾ ಘಟನಾವಳಿಗಳಿಗೂ ಇಲ್ಲಿ ಎಡೆಯಿದೆ. 'ಹಡಸಿ ಕೊಂಡ ಮ್ಯಾಲೆ ಯೋಳಿಕೋ ಬ್ಯಾಡದು', ಗುಟುಕಿದ್ರೆ ಮಿಟುಕು, ಮಿಟಿಕಿದ್ರೆ

ಮಿಂಡಾಟ', ನೆರೆಮನೆ ಹೆಂಗಸಿಗೆ ಮುತ್ತು ಕೊಡುವ ಜಾತಿ', ಹೊಟ್ಟೆ ತುಂಬ ಅಂಬಳಿ, ಮೈತುಂಬ ಕಂಬಳಿ ಅನ್ನ ಬಟ್ಟೆ ಆಸ್ತಿ ಮಿಕ್ಕಿದೆಲ್ಲ ಜಾಸ್ತಿ, ಮೀಸೆ ಬಂದರೆ ದೇಸಿ ಕಾಣಕ್ಕಿಲ್ಲ, ಮೊಲೆ ಬಂದರೆ ನೆಲ ಕಾಣಕ್ಕಿಲ್ಲ, ಮುಂತಾದ ಅಪ್ಪಟ ಜನಪದ ಜೀವನಾನುಭವದ ಮಾತುಗಳು ಕಾದಂಬರಿಯ ಮೆರಗನ್ನು ಹೆಚ್ಚಿಸಿದೆ.

ಈ ಮೇಲಿನ ಮಾತುಗಳು ಓದುಗರಿಗೆ ಎಲ್ಲಿಯೂ ಅಶ್ಲೀಲತೆಯ ಭಾವನೆಯನ್ನು ಮೂಡಿಸಿಲ್ಲ. ಸಹಜವೆಂಬಂತೆ ಗುರುತಿಸಿಕೊಳ್ಳುತ್ತದೆ. ಹಗಲು ಹಾದರಗಿತಿ, ಮುಂಡೆ, ಅರಾಮಿರಂಡೆ, ಲೌಡಿ, ಹೆತ್ತ ತಾಯಿ ಲಾಡಿ ಬಿಚ್ಚೋ ಲೌಡಿ ಮಕ್ಕಳು, ಹಾರುವ ಹಕ್ಕಿಗೆ ಹಾದರ ಕಟ್ಟುವ ಜಾತಿ, ನೆಕ್ಕುವ ನಾಯಿಗೆ ಲಿಂಗವೇನು?, ಪಾಣೆಯ ಬಟ್ಟಲೇನು? ಇವೆಲ್ಲ ಬೈಗುಳಗಳು, 'ನೀರಿಗೆ ಬೆಟ್ಟು ಚೀಪಿದಂತೆ, ಎಂಬವು ಸನ್ನಿವೇಶದ ಅರ್ಥವನ್ನು ಸ್ಪುಟಗೊಳಿಸಬಲ್ಲ ಉತ್ಕೃಷ್ಟ ಉಪಮೆಗಳು ರಚನಾತ್ಮಕವಾಗಿ, ಮಾರ್ಮಿಕವಾಗಿ ಭಾಷೆಯ ಎಲ್ಲಾ ಪರಿಕರಗಳು ಸರ್ವಾಂಗ ಸುಂದರ ಎಂಬಂತೆ ಚಿತ್ರತವಾಗಿದೆ.

ವೈಶಾಖದಲ್ಲಿ ಸಾಂದರ್ಭಿಕಗನುಗುಣವಾಗಿ ಪ್ರತಿಮೆಗಳು ಸಂಕೇತಗಳು ಅದ್ಭುತವಾಗಿ ಗೋಚರಿಸುತ್ತವೆ. ಲಕ್ಕ ಊರು ಬಿಟ್ಟು ಹೋಗುವ ಸಂದರ್ಭವನ್ನು ಗಮನಿಸಿದಾಗ ಹುಳಿತು ಹೋದ ಸಂಸ್ಕೃತಿ ನಾಗರೀಕತೆಗಳನ್ನು ತ್ಯಜಿಸಿದ್ದಾನೆ. ನೀರವತೆ, ನಿರ್ಜನತೆ, ಇದಕ್ಕೆ ಪೂರ್ವಭೂಮಿಕೆಯಾಗಿ ಅರ್ಥೈಸಿಕೊಳ್ಳಬಹುದು. ಈ ಸನ್ನಿವೇಶವನ್ನು ಚದುರಂಗರು ಅರ್ಥಪೂರ್ಣತೆಯಿಂದ ಬೀಗಿದ ಪ್ರತೀಕ ಪ್ರತಿಮೆಗಳಿಂದ ಸಮೃದ್ಧಗೊಳಿಸಿದ್ದಾರೆ. ಇವೆಲ್ಲವೂ ಮಾಗುವುದು ಲಕ್ಕನ ದೇಹದ ಆರೋಗ್ಯ-ಲವಲವಿಕೆ, ಚುರುಕು, ಉತ್ಸಾಹ, ಆಶಾವಾದಿತನ, ಮಾನಸಿಕ ದೃಢತೆ, ಇವೆಲ್ಲವೂ ಪ್ರತೀಕವೊ? ಪ್ರತಿಮೆಯೋ? ಎಂಬ ಗೊಂದಲಗಳು ಉಂಟಾಗುವುದು ಸಹಜವಾದರೂ ಅದು ಓದುಗನಿಗೆ ಅರ್ಥಸಮೃದ್ಧಿಯಿಂದ ಪ್ರತೀಕವಾಗಿ ಕಾಣಿಸುವುದು ಸ್ವಾಭಾವಿಕ. ಕಾದಂಬರಿಯ ಎಷ್ಟೋ ಚಿತ್ರಣಗಳು ಪ್ರತೀಕತೆಗಳಂತೆ ತೋರುವ ಪ್ರತಿಮೆಗಳನ್ನು ಓದುಗನಿಗೆ ಕೊಟ್ಟ ಪ್ರಚೋದನೆಯ ಅಂಶಗಳನ್ನು ಈ ರೀತಿಯಾಗಿ ಗುರುತಿಸಬಹುದು.

ಲಕ್ಕನಿಗೆ ಹಾಲಕ್ಕಿ ಮಾತು ಕೇಳುತ್ತ ಕುಳಿತ ಬುಡಬುಡಿಕೆಯ ದಾಸಯ್ಯ ಮೊದಲು ದೆವ್ವದ ಹಾಗೆ ತೋರುತ್ತಾರೆ. ಹಾಲಕ್ಕಿ ಶಕುನ ನುಡಿ ಕೇಳಲು ಬಂದಿದ್ದ ಇವನ ಬಗ್ಗೆ ಪ್ರಾರಂಭದಲ್ಲಿ ಗೌರವ ಇದ್ದು, ಊರಿನವರಿಗೆ ಹೇಳಿ ಹೊಟ್ಟೆ ಹೊರೆಯುತ್ತಾನೆ, ಮುಂದೆ ಇದೇ ನಂಬಿಕೆ ಕಲ್ಪನೆಯಿಂದ ಲಕ್ಕ ಜಿಗುಪ್ಸೆ ಪಡುತ್ತಾನೆ. ತನ್ನ ಭವಿಷ್ಯದ ಬಗ್ಗೆ ಚಿಂತಿಸುತ್ತಾನೆ ಎಂದು ಭಾವಿಸುವುದು ಅನಿವಾರ್ಯ, ಆದರೆ ಮುಂದೆ ಅವನ ಬದುಕಿನಲ್ಲಿ ಸಂಭವಿಸುವ ದುರಂತ ಮೂಢನಂಬಿಕೆಗಳನ್ನೇ ಮೀರಿದ್ದಾನೆಂದು ಅರ್ಥೈಸಿಕೊಳ್ಳಬಹುದು.

ಮುನೀಶ್ವರ (ಕೊಳ್ಳಿದೆವ್ವ):– ಲಕ್ಕ ಆತಂಕ, ಭಯದಿಂದ ಸಾಮಾಜಿಕವಾಗಿ ಬುಡ ಕಿತ್ತ ಬಳ್ಳಿಯಂತಾಗಿದ್ದ. ಆದರೆ ಆ ಭಯ ಆತಂಕವನ್ನು ಮೀರಿ ನಿಂತಿದ್ದಾನೆ. ಏನೇ ಆದರೂ ಎದುರಿಸುವ ಧೈರ್ಯ ಛಲ ಅವನಲ್ಲಿರುವುದನ್ನು ಗಮನಿಸಬಹುದು.

ಹಾವಿನ ಪೊರೆ:– ಲಕ್ಕನ ನಾಯಿ ಬೊಡ್ಡ ಹಾವಿನ ಪೊರೆಯನ್ನು ಕಚ್ಚಿಕೊಂಡು ಬರುತ್ತದೆ. ಹಾವಿನ ಪೊರೆಯನ್ನು ಸಾಮಾಜಿಕ ಬಂಧನದಿಂದ ಬಿಡುಗಡೆ ಪಡೆದುಕೊಂಡು ಲಕ್ಕ ಊರು ಬಿಟ್ಟು ಹೊರಟ್ಟಿದ್ದರ ಸಂಕೇತವೆಂದು ಅರ್ಥೈಸಿಕೊಳ್ಳಬಹುದು.

ಕೆಂಪು ಹಣ್ಣಿನಿಂದ ಬೀಗಿನಿಂತ ಪಾಪಾಸುಕಳ್ಳಿಯ ಸಂಕೇತಾರ್ಥ ಹಸಿದ ಲಕ್ಕನ ಹೊಟ್ಟೆಯ ಬಯಕೆಯನ್ನೇ ಹಣ್ಣುಗಳು ನೀಗಿಸುತ್ತದೆ.

ಪ್ರಕೃತಿಯಲ್ಲಿ ಆನೆ ಮರಿ ಹಾಕುವ ದೃಶ್ಯ ಲಕ್ಕನಿಗೆ ಸೃಷ್ಟಿಯ ಅದ್ಭುತ ವಿಸ್ಮಯದ ಸಂಕೇತ ಮತ್ತು ಸ್ವಾವಲಂಭನೆಯ ಪಾಠದಂತಗೆ ಕಾಣುವುದು ಸಹಜ.

ಹದ್ದನ್ನು ಕಾಮ ಮತ್ತು ದುರಾಶೆಯ ಸಂಕೇತವಾಗಿರುವುದನ್ನು ಇಲ್ಲಿ ಗಮನಿಸಿಬೇಕು. ಲಕ್ಕ ಕಂಡ ರಣ ಹದ್ದುಗಳ ಗರ್ಭಿಣಿ ಹೆಂಗಸಿನ ತೊಡೆ ಮೆಟ್ಟಿ ಗುಂಡಿಗೆ ಕಿತ್ತು ಕುಕ್ಕಿ ಕುಕ್ಕಿ ತಿನ್ನುವ ದೃಶ್ಯ ದರುಮನಹಳ್ಳಿಯ ಶೋಷಕ ಕಾಮ ದುರಾಶೆಗಳ ವ್ಯವಹಾರದ ಸಂಕೇತವಾಗಿದೆ. ಇದಕ್ಕೆ ಸಂವಾದಿಯಾಗಿ ಗರುಡ ಪ್ರೇಮವನ್ನು ಸಂಕೇತಿಸಿದರೆ, ಹಾವು ಕಾಮ, ಲೈಂಗಿಕತೆಯನ್ನು ಪ್ರತಿನಿಧಿಸುತ್ತದೆ. ಇದು ಮುಂದೆ ಮಾರಕ ಶಕ್ತಿಯಾಗಿ ಹರಿದು ಬರುತ್ತದೆ.

ಲಕ್ಕನಿಗೆ ಮೊದಲು ಹಾವಿನ ಭಯ ಕಾಡುವುದು ಅವನು ಕಕ್ಕಸ್ಸಿಗೆ ಕೂರುತ್ತ ಜಂತುಹುಳುವನ್ನು ಹಾವೆಂದು ಭಯ ಪಡುತ್ತಾ ಚಡಪಡಿಸುವುದು, ಈ ಹಾವಿನ ಸಂಕೇತಗಳು, ಸುಶೀಲತ್ತೆ ಬಟ್ಟೆ ಒಗೆಯುತ್ತಿರುವ ಸಂದರ್ಭದಲ್ಲಿ ಎದುರಾಗಿ ಕಚ್ಚಲ್ಪಡುವುದು, ಕಳ್ಳನಾದ ರುದ್ರನಿಗೆ ಹಗ್ಗ ಹಾವಿನ ಭಯವಾಗಿ ಹೆದರಿಕೆ ಹುಟ್ಟಿಸುವುದು, ರುಕ್ಮಿಣಿಯ ಮಾನಭಂಗ ಸಮಯದಲ್ಲಿ ಅವಳಿಗೆ ರಕ್ಷೆಯಾಗಿ ಬರಬಹುದಾಗಿದ್ದ ಕೃಷ್ಣಶಾಸ್ತ್ರಗಳು ಹಾವಾಗಿ ಅಡ್ಡಬರುವುದು, ಕಡೆಯಲ್ಲಿ ಗಡೀಪಾರಾಗಿ ಬಿಡುಗಡೆಯ ಹಾದಿಯಲ್ಲಿ ಹೊಗುತ್ತಿರುವ ಲಕ್ಕನಿಗೆ ಸಾವಿರಾರು ಇರುವೆಗಳ ದಂಡಿನಿಂದ ಕಚ್ಚಿಸಿಕೊಂಡು ಒದ್ದಾಡುತ್ತಾ ಸಾಯುವ ಹಾವಾಗಿ ಉದ್ದಕ್ಕೂ ಸರ್ಪ ಭಯ ಕಾಡುವುದು. ಇದು ನೊಂದವರೆಲ್ಲ ಸೇರಿ ಸಂಘಟಿತರಾದರೆ ಸಮಾಜದ ದುಷ್ಟ ಶಕ್ತಿಗಳನ್ನು ದಮನಮಾಡಬಲ್ಲವು ಎಂಬ ಸಂಕೇತಾರ್ಥ, ಮತ್ತು ದೊಡ್ಡವರು ಸಣ್ಣವರನ್ನು ರಕ್ಷಿಸಬೇಕೆಂಬ ಸಂಸ್ಕೃತಿಯ ಪಾರಮ್ಯವನ್ನು ಸೂಚಿಸುವುದು.

ಹಾವಿನ ಮತ್ತು ಹದ್ದಿನ ಸಂಕೇತಗಳಿಂದ ದರುಮನಹಳ್ಳಿಯು ನಾನಾ ರೀತಿಯಲ್ಲಿ ಶೋಷಣೆಗೆ ಒಳಪಟ್ಟಿರುವುದು ಸ್ಪಷ್ಟವಾಗುತ್ತದೆ. ಹದ್ದು ನೇರವಾದ ಹಿಂಸೆಯ ಶೋಷಣೆಯಾದರೆ, ಹಾವು ಸುಖದ ಸೋಗಿನ ಐಂದ್ರಿಯ ಭೋಗವಾಗಿ ಮುಂದೆ ವೇದನೆಯ ಪರಾಕಾಷ್ಠೆ ಮತ್ತು ಹಿಂಸೆಯ ಪರಮಾವಧಿಯಾಗಿರುತ್ತದೆ. ಆತ್ಮ ಹಿಂಸೆಯ ಜೊತೆಗೆ ದೈಹಿಕ ಹಿಂಸೆಯು ಕಾಡುತ್ತದೆ. ಗರ್ಭಿಣಿಯೊಬ್ಬಳ ಹೆಣವನ್ನು ಹದ್ದುಗಳು ಕುಕ್ಕಿ ಕುಕ್ಕಿ ತಿನ್ನುವ ಭೀಕರ ದೃಶ್ಯವೇ ಬಹುಶ: ಇದು ಭೀಭತ್ಸ ಸಂಕೇತ ಕಾದಂಬರಿಯ ಮುಖಪುಟದ ಮೇಲೆ ಮೂಡಿದೆ. ಇದು ಸಾಮಾಜಿಕ ವ್ಯವಸ್ಥೆಯ ಅಥವಾ ಶೋಷಣೆಯ ಸಮಗ್ರ ವಿವರಣೆ ನೀಡುವುದಷ್ಟು ಶಕ್ತವಾಗಿದೆ. ಪ್ರಬಲರು ದುರ್ಬಲರನ್ನು ಹಿಂಡುವುದು, ಗಂಡು ಹೆಣ್ಣನ್ನು ದುರುಪಯೋಗಪಡಿಸಿಕೊಳ್ಳುವುದು, ಶೋಷಕರೆನ್ನಿಸಿಕೊಂಡವರು ತಮ್ಮ ತಮ್ಮಲ್ಲೆ ಬಡಿದಾಡಿ ಸಾಯುವುದು ಇತ್ಯಾದಿ ಅನೇಕ ಅರ್ಥದ ಸುರುಳಿ ಬಿಚ್ಚುತ್ತಾ ಸಾಗುತ್ತದೆ.

ಕಾದಂಬರಿಯು ಚಿತ್ರ ಮೂಲನ ಕೋಟೆ ಸಂಸ್ಕೃತಿಯ ಬಂಧನದ ಸಂಕೇತ. 'ಮೋಸ ಮಾಡದಿದ್ರೆ ಈ ಜೀವನದಲ್ಲಿ ಗೆಲ್ಲಲಿಕ್ಕೆ ಆಗತ್ಯೆ? ಇಡೀ ಮಹಾಭಾರತದ ಕಥೆಯಲ್ಲಿ

ನಾವು ಕಾಣುವುದೇನು? ಉದ್ದಕ್ಕೂ ಮೋಸ. ಅದೂ ಶ್ರೀಕೃಷ್ಣ ಪರಮಾತ್ಮನಿಂದಲೇ ಅದೆಲ್ಲ ನಡೆಯಿತು ಅಂದ ಮೇಲೆ' ಎಂಬ ಮಾತಿನ ಕ್ರಿಯಾ ರೂಪ ಸಾಕ್ಷಾತ್ಕಾರವಾಗಿದೆ. ಇದೇ ಚಿತ್ರ ಮೂಲನ ಕೋಟೆ. ರುಕ್ಮಿಣಿಯ ಬದುಕಿನಲ್ಲಿ ಕನಸಿನ ರೂಪವಾಗಿ ಕೊಟೆಯೊಳಗಡೆ ದಾರಿ ತಪ್ಪಿಸಿಕೊಂಡ ಅನುಭವ, ಸರಸಿಗೆ ಹೇಳುವ ಜಾನಪದದ ರಾಜಕುಮಾರಿಯ ಕತೆ, ಕೃಷ್ಣಶಾಸ್ತ್ರಿಗಳಿಂದ ಆಕ್ರಮಣಕ್ಕೆ ಒಳಪಟ್ಟಾಗ, ರುಕ್ಮಿಣಿ ಅಹಲ್ಯೆ ಕೂಡಿದ ಇಂದ್ರನ ಜ್ಞಾಪಕ ತರುವುದು ಆಕೆ ಆ ಘಟನೆಗೆ ತೋರುವ ಪ್ರತಿಕ್ರಿಯೆ ಆಗಿದೆ. ಇನ್ನೂ ಭೀಮಹಳ್ಳಿಗೆ ಪ್ರಯಾಣ ಮಾಡುವ ಸಂದರ್ಭದಲ್ಲಿ ಇದೇ ಕತ್ತಲ ನೀರವತೆಯ ಮಳೆ ಗುಡುಗು ಮಿಂಚಿನ ವಾತಾವರಣವು ಅವಳಲ್ಲಿದ್ದ ಸುಪ್ತ ಕಾಮ ಭಾವನೆಯು ಕೆರಳಿ ಲಕ್ಕನ ಮೇಲೆ ಬಲತ್ಕಾರ ಮಾಡುವ ಹಾಗೆ ಮಾಡುವ ಆ ಸನ್ನಿವೇಶವೂ ಕೂಡ ಸಂಕೇತಾರ್ಥವಾಗಿದೆ.

ಕಾದಂಬರಿಯ ಕೊನೆಗೆ ಕಾಡಿನಲ್ಲಿ ಹೊರಟ ಲಕ್ಕ ಅಲ್ಲಿಯ ವಿಚಿತ್ರ ದೃಶ್ಯಗಳನ್ನು ನೋಡುವುದು, ಅವನ ಬದುಕಿಗೆ ಹೊಸ ತಿರುವು ಪಡೆದು ಹೃದಯದ ಮೇಲೆ ಮೂಢಿಸುತ್ತಿದ್ದ ಅರ್ಥ ಅವನಿಗೆ ವೇದ್ಯ. ಧೂಪದ ಮರದ ಮೇಲೆ ಕುಳಿತ ಬೂದು ಬಣ್ಣದ ಸೋರೆಕಟ್ಟೆ ಹಕ್ಕಿ 'ಪುರ್‍ರಂತ' ಹಾರಿತು. ಲಕ್ಕನ ದೃಷ್ಟಿ ಅದನ್ನು ಹಿಂಬಾಲಿಸಿತು. ಹಕ್ಕಿ ಅಲ್ಲಿ ಇಲ್ಲಿ ಹಾರಿ ಎಲ್ಲಿಗೋ ಹೋಯಿತು. 'ಲಕ್ಕ ಅಂಗೇ ಇನ್ನೂ ಮ್ಯಾಕೆ ಕತ್ತೆತ್ತಿದ. ಆಕಾಶ ತೊಳುದಂಗಿತ್ತು, ಅಲ್ಲೊಂದು ಗರುಡಾಳ ಪಕ್ಷಿ ತೇಲ್ತಾ ವಾಲ್ತಾ ಹಾರಾಡಿತ್ತು, ಲಕ್ಕನ ಮನಸ್ಸೂ ವೆ ಅದರ ವಂದಗುಟ್ಟಗೆಯ ತೇಲ್ತಾ ತೇಲ್ತಾ ವಾಲ್ತಾ ಹಾರಾಡಕ್ಕೆ ಮುಟ್ಟಿಗಂತು ಅದರಾಗ ದ್ರುಸ್ಟಿ ನೆಟ್ಟು ಲಕ್ಕ ತಳತಳಾರ್‍ವ್ಾಗಿ ಎಜ್ಜೆಯ ಮುಂದ ಮುಂದ್ಕಿಟ್ಟ. ಮುಂದೆ ಲಕ್ಕನಿಗೆ ಈ ಅನುಭವವೂ ರೋಮಾಂಚನಕಾರಿಯಾಗಿ ನಿರ್ಭೀತಾನಾಗಿ ಮುಕ್ತ ಪಕ್ಷಿಯಂತೆ ಬದುಕು ಸಾಗಿಸಬಹುದೆಂಬ ಕಾದಂಬರಿಯ ಆಶಾಭಾವನೆಯ ಆಂತರ್ಯ.

ಹೀಗೆ ಕಾದಂಬರಿಯ ಉದ್ದಕ್ಕೂ ಹಲವು ಬಗೆಯ ಸಂಕೇತಗಳು, ಪ್ರತೀಕಗಳು ಪ್ರತಿಮೆಗಳು ಬಳಕೆಗೊಂಡು ಪಾತ್ರಗಳ ವ್ಯಕ್ತಿತ್ವ ವಿಕಾಸವನ್ನು, ಪರಾಧೀನತೆಯ ಬಂಧನವನ್ನು ಗಮನಿಸುತ್ತಾ ಹೋಗಬಹುದು. ಇದು ನಿಸರ್ಗ ಸಂಬಂಧಿಯಾಗಿ ಕಾದಂಬರಿಯ ಮೆರಗನ್ನು ಹೆಚ್ಚಿಸುತ್ತಿದೆ.

ಶಿಷ್ಟ ಮತ್ತು ಶಿಷ್ಟೇತರ ಭಾಷೆಗಳು ಕಲಾತ್ಮಕತೆ ಎಂಬಂತೆ ಹೊರ ಬೀಳುತ್ತದೆ. ರುಕ್ಮಿಣಿ, ಕೃಷ್ಣಶಾಸ್ತ್ರಿ, ಮುಂತಾದವರಲ್ಲಿ ಶಿಷ್ಟರೂಪ ಕಂಡ ಬಂದರೆ, ಲಕ್ಕನಂತವರಲ್ಲಿ ಶಿಷ್ಟೇತರ ರೂಪ ಅಂದರೆ ಗ್ರಾಮ್ಯ ಭಾಷೆ ಕಾಣಿಸಿಕೊಳ್ಳುತ್ತದೆ. ನಿರೂಪಕರು ಒಂದು ಅಧ್ಯಾಯ ಗ್ರಾಮ್ಯದಿಂದ ಬಳಕೆಗೊಂಡಿದ್ದರೆ ಮತ್ತೊಂದು ಅಧ್ಯಾಯ ಶಿಷ್ಟದಿಂದ ಬಳಕೆಗೊಂಡಿದೆ. ಸಾಮಾಜಿಕ ಉಪ ಭಾಷೆ ಕಥಾ ಹಂದರಕ್ಕೆ ಅದ್ಭುತ ಜೀವಂತಿಕೆಯನ್ನು ಆಳವಾದ ಜೀವನಾನುಭವಗಳನ್ನು ವ್ಯಕ್ತಪಡಿಸುವಲ್ಲಿ ಸಾರ್ಥಕ್ಯವನ್ನು ಪಡೆದುಕೊಂಡಿದೆ. ಗ್ರಾಮೀಣ ಪ್ರದೇಶದ ಸಂಸ್ಕೃತಿಯ ಅವಿಭಾಜ್ಯ ಅಂಗವಾದ ಗ್ರಾಮ್ಯಭಾಷೆ ಶಿಷ್ಟ ಭಾಷೆಗಿಂತ ಎಷ್ಟು ಶಕ್ತಿ ಪೂರ್ಣವಾಗಿ ಬಳಕೆಯಾಗಿದೆ ಎನ್ನುವುದಕ್ಕೆ ಸಂಭಾಷಣೆಗಳ ಮೂಲಕ ವ್ಯತ್ಯಾಸಗಳನ್ನು ಕಾಣಬಹುದು.

ಲಕ್ಕ: "ಬೆದೆಗೆ ಬಂದಿರೋ ಕಡಸಿಗೆ ಹೋರಿ ಕೊಡಿಸದೆ ಹಾಗೆ ಬಿಟ್ಟರೆ, ಅದಿನ್ನೇನು ಮಾಡುತ್ತೆ? ತನ್ನ ತೀಟೆ ತೀರಿಸಿ ಕೊಳ್ಳದೆ ಸಿಕ್ಕ ಸಿಕ್ಕಿದ ಹಸುಗಳ ಮೇಲೆ ಹಾರುತ್ತೆ, ಆ ಕಡಸನ್ನು ಸಾಕ್ತಿರೋ ಜನಕ್ಕೆ ಗ್ಯಾನ ಇರಬೇಕು".

ಬುಂಡಮ್ಮ: "ಏನ್ಲ, ಈ ನಮ್ಮಟ್ಟಿ ಕಟ್ಟಿದೋನು ನಿಮ್ಮಪ್ನೊ? ನಿಮ್ಮಜ್ನೋ? ನಿಸೂರಾಗಿ ನನ್ನ ಗ್ವಾಡೇ ನಿನ್ನ ಚಿರುಕಿ ತಿರುಗುಸ್ತ ನಿಂತು ಬುಟ್ಯಲ್ಲ!".

ಶಿವಭಕ್ತನೋರು: "ನಿಮ್ಮ ಪಾದಕೆ ಇದ್ಯಾವ ಮಹಾ ಸ್ಯಾಟ ಬುಡಿ ನನ್ನೊಡೆಯ ಬೇಕಾದರೆ, ಇವ್ರ ಅತ್ತರೋಟು ಹೂವ ನಿಮ್ಮ ಪಾದಕೆ ತಂದು ಎರೀತೀನಿ".

ಎಂಕ್ಟಿ: ಯಾವ ಸೀಮೆ ಗಂಡಿಸ ಅವ್ನು?—ಮಗ್ಗಲಲ್ಲಿ ಮನಿಸಿಕಂಡ್ರೆ ಒಂದ್ ಎಳೆಕೂಸ ತಬ್ಕಂಡು ಮನಕ್ಕಂಡಗಾಯ್ತಿತ್ತು. ಅದರಾಗ ಯಾವ ಸುಕ ತಗೀರಿ, ಬರಿ ನೀರಿಗೆ ಬೆಟ್ಟು ಅದ್ದಿ ಚೀಪಿದಂಗೆ, ಅಸ್ಪೇಯ—ಅಯ್ಯೋ, ಪರ್ಪಂಚಕೆ ಗ್ವತ್ತಿರ್ಲ್ವಾಗ ನಿಮ್ಮ ತಾವು ಮುಚ್ಚಕ್ಕೆ ಹ್ವಾದರೆ ತಿಕಬುಟ್ಟು ಸ್ವಾಲೆ ಸುತ್ತಿ ಗಂಡಂಗೆ ಆಯ್ತದೆ—ಕ್ಯಾಳಿ ನಿಮ್ಮ ತಾವು ಯೊಳಕ್ಕೇನು –ನಂದೂ ಎಣ್ಣುಜಲ್ಮ, ತಡೀ ನಿಲ್ಲ. ಅವನ್ನ ಬುಟ್ಟು ಬುಟ್ಟು ಬ್ಯಾರೆ ಒಬ್ನ ಮಡೀಕಂಡಿವ್ನಿ" ಇದನ್ನು ಗಮನಿಸಿದರೆ ಈ ಉಪಭಾಷೆಯ ಮೊನಚು, ದಿಟ್ಟತನ, ಸೋಗಲಾಡಿತನ ಮುಖವಾಡದ

ಬೋಳೆ ಮಾತಿನಲ್ಲಿ ಕ್ರಿಯೆಯ ಮೂಲ ರೂಪವಾಗಿ ಸೇರಿಕೊಂಡಿದೆ. ಈ ಪರಿಶಿಷ್ಟತೆಯಲ್ಲಿ ಪ್ರಧಾನವಾಗಿ ನುಡಿಗಟ್ಟಿನ ಶಬ್ಧದಲ್ಲಿ ಸಾಚಾತನವಿದೆ. ಸಂಸ್ಕೃತಿಯ ಅರಿವು, ಪ್ರಾಕೃತಿಕ ದನಿಯಿದೆ. ಮುಗ್ಧತೆ ಜೀವಂತಕ್ರಿಯೆಯಾಗಿ, ಛಲವಾಗಿ, ಸಾರ್ಥಕವಾಗಿ ಯಾವ ಮುಲಾಜಿಲ್ಲದೆ, ಮುಕ್ತವಾಗಿ ನಿಷ್ಕಲ್ಮಶವಾಗಿ ಶಿಷ್ಟ ಸಂಸ್ಕೃತಿಗೆ ಸವಾಲೆನಿಸುವ ಹಾಗೆ ಹೊರಬೀಳುತ್ತದೆ.

ಶಿಷ್ಟ ಭಾಷೆಯು ಪಾತ್ರಗಳಲ್ಲಿ ಅಂತರ್ಗತವಾಗಿ ನಿರರ್ಗಳವಾಗಿ ಸರಳ ಸುಲಭವಾಗಿ ಅರ್ಥವಾಗುವಂತೆ ಸಹಜವೆಂಬಂತೆ ಪ್ರತ್ಯಕ್ಷವಾಗುತ್ತದೆ.

ಸಾವಿತ್ರಿ: "ನಾನಿರುವಾಗ ನೀನ್ಯಾಕೆ ವೃಥಾ ಅಡಿಗೆ ಮಾಡಬೇಕು? -- ನನಗೆ ಅಡಿಗೆ ಮಾಡಲಿಕ್ಕೆ ಬಲು ಇಷ್ಟ, ಹೇಗೂ ಸಕೇಶಿಯಾದ ನೀನು ಮಾಡುವ ಅಡಿಗೆಯನ್ನು ನಾನು ಊಟ ಮಾಡುವುದಿಲ್ಲ"

ರುಕ್ಮಿಣಿ: "ನೀವು –ಗಂಡಸರು ಇದ್ದೀರಲ್ಲಾ ಶುದ್ಧಾಂಗ ಮೋಸಗಾರರು"... ಬೆರಳಿನಿಂದ ಮಿಡಿಯುತ್ತ ಸಿಟ್ಟಿನಿಂದಲೆ ನುಡಿದ ರುಕ್ಮಿಣಿಯ ಮಾತು ಶಿಷ್ಟ ಭಾಷೆಯಿಂದಲೇ ಕೂಡಿದೆ. "ಶಾಸ್ತ್ರಿಗಳು ಕೆದಕಿ ಕೆರಳಿಸಿದ ಅಂದಿನಿಂದ ಅವಳ ನರನರವೂ ಉದ್ರೇಕಗೊಂಡಿತ್ತು" .... ರಾತ್ರಿ ಕಾಲಿಟ್ಟೊಡನೆ ಅವಳ ಒಳಗಿನ ತಳಮಳ ಆರಂಭವಾಗುವುದು. ಅನೇಕ ದಿನಗಳಿಂದ ಉಪಯೋಗಿಸದೆ ಮೂಲೆಗೆ ಒರಗಿಸಿದ ತಂಬೂರಿಯನ್ನು ಯಾರೋ ಕೈಗೆತ್ತಿ ಶ್ರುತಿಮಾಡಿ ಬಿಗಿದ ತಂತಿಯನ್ನೊಮ್ಮೆ ಮೀಟಿ ಹೋದಂತಾಗಿತ್ತು. ಅವಳಿಗೆ ಅರಿವಿಲ್ಲದಂತೆ ಅವಳೊಳಗೆ ಪಲ್ಲವಿಸಿದ ಬಯಕೆ ಅದಮ್ಯವಾಗಿ ಬೆಳೆದು ಹೆಮ್ಮರವಾಗಿತ್ತು. ಇದನ್ನು ಗಮನಿಸಿದಾಗ ತೀರ ಸಾಧಾರಣ ವಾಕ್ಯ ರಚನೆ ಎನ್ನಿಸಿದರೂ ಅವಳ ತಲ್ಲಣ, ತಳಮಳ, ವಿಕಾರ, ಸ್ಪಂದನ, ವರ್ತನೆಯಲ್ಲಿ ಕ್ರಿಯೆಯಲ್ಲಿ ಮೂಡಿ ಕೊನೆಗೆ ಆಕೃತಿಕೊಳ್ಳುತ್ತದೆ.

ಘಟಶ್ರಾದ್ಧವನ್ನು ಕುರಿತು ಕೇಶವಯ್ಯ ಹೇಳುವ ಮಾತಿಗೆ ಪ್ರತ್ಯುತ್ತರವಾಗಿ ಶಾಸ್ತ್ರಿಗಳು "ಎಲ್ಲರ ಮನೇಲು ಇದೇ ಗೋಳೂ ಈ ಶಾಪದಿಂದ ನಮ್ಮ ಸಮಾಜಕ್ಕೆ ಎಂದು ಮುಕ್ತಿ ದೊರೆಯುತ್ತೋ, ಆ ಪರಮಾತ್ಮನಿಗೆ ಗೊತ್ತು".

ಒಟ್ಟಾರೆಯಾಗಿ ಈ ಮೇಲಿನ ಎಲ್ಲಾ ಸಂಭಾಷಣೆಗಳು ಭಿನ್ನ ಭಾಷಾ ರೂಪವನ್ನು ಪಡೆದು ಕ್ರಿಯೆಯಲ್ಲಿ ಮೇಳೈಸಿಕೊಂಡಿದೆ. ಹಾಗೂ ಭಾಷಾಲಹರಿಯ ನಿಯೋಜನೆ ಕೃತಿಯ ಅಂತಃಸತ್ವವನ್ನು ಸಮಗ್ರತೆಯಲ್ಲಿ ಪ್ರತಿಬಿಂಬಿಸಲು ನೆರವಾಗಿದೆ ಎಂದರೆ ಅತಿಶಯೋಕ್ತಿಯಾಗಲಾರದು.

ಅಧ್ಯಾಯ-೬

ಸಮಾರೋಪ

ಅಧ್ಯಾಯ-೬

ಸಮಾರೋಪ

ಹೊಸಗನ್ನಡ ಸಾಹಿತ್ಯ ಕ್ಷೇತ್ರದಲ್ಲಿ ತಮ್ಮದೇ ಆದ ವಿಶಿಷ್ಟ ಬರವಣಿಗೆಯ ಮೂಲಕ ನವೋದಯ, ಪ್ರಗತಿಶೀಲ, ನವ್ಯ ಮತ್ತು ದಲಿತ ಬಂಡಾಯ ಹೀಗೆ ಎಲ್ಲಾ ಕಾಲಘಟ್ಟಗಳಲ್ಲೂ ಸಾಹಿತ್ಯ ಸಂಚಲನವನ್ನು ಉಂಟುಮಾಡಿದ ಚದುರಂಗರು ಮಹತ್ವದ ಸ್ಥಾನವನ್ನು ಪಡೆದುಕೊಂಡಿದ್ದಾರೆ.

ಪ್ರಸ್ತುತ ವೈಶಾಖ ಕಾದಂಬರಿಯಲ್ಲಿ ಬ್ರಾಹ್ಮಣರು-ಬ್ರಾಹ್ಮಣೇತರರು ಮತ್ತು ದಲಿತರ ಜೀವನಾನುಭವಗಳನ್ನು ತಮ್ಮ ವಿಭಿನ್ನ ಬರವಣಿಗೆಯ ಶೈಲಿಯೊಂದಿಗೆ ನಿರೂಪಿಸಿರುವುದು ಕಣ್ಣಿಗೆ ಕಟ್ಟುವಂತಿದೆ. ಶಿಷ್ಟ ಭಾಷೆ ಮತ್ತು ದಲಿತಭಾಷೆಯ ಪ್ರಯೋಗಶೀಲಗುಣ ಮತ್ತು ಅನುಭವಸಾಂದ್ರತೆಗಳು ಕಾದಂಬರಿಗೆ ಕಿಂಚಿತ್ತೂ ಕೂಡ ಕುಂದುಬರದ ಹಾಗೆ ಹಾಸುಹೊಕ್ಕಾಗಿದೆ. ವೈಶಾಖದಲ್ಲಿ ಅನೈತಿಕ ಚಟುವಟಿಕೆಗಳ ಭ್ರಷ್ಟವ್ಯವಸ್ಥೆಯ ಹಲವಾರು ಮುಖವಾಡಗಳನ್ನು ತರೆದಿಡುತ್ತಾರೆ. ಅಲ್ಲದೆ ಅಲ್ಲಿನ ಘಟನೆಗಳು ವಾಸ್ತವಕ್ಕೆ ಕನ್ನಡಿಹಿಡಿದಂತಿದೆ.

ಶತಶತಮಾನಗಳಿಂದ ಇವತ್ತಿನ ಇಪ್ಪತ್ತೊಂದನೆಯ ಶತಮಾನದವರೆಗೂ ಬ್ರಾಹ್ಮಣರ ಮಡಿವಂತಿಕೆ, ಅಧಿಕಾರಶಾಹಿ ವ್ಯವಸ್ಥೆಯಲ್ಲಿ ಧಮನಕ್ಕೆ ಒಳಗಾದಂತ ದಲಿತರ ಬದುಕಿಗೆ ನಿರ್ದಿಷ್ಟ ನೆಲೆಯಲ್ಲದೆ ಅತಂತ್ರಸ್ಥಿತಿಗೆ, ದುರಂತಕ್ಕೆ ಈಡಾಗಿದ್ದಾರೆ. ಜಾತಿಯಾಧಾರಿತವಾಗಿ, ಲಿಂಗಾಧಾರಿತವಾಗಿ ಹಾಗೂ ಆರ್ಥಿಕವಾಗಿ ಶೋಷಣೆಗೆ ದಬ್ಬಾಳಿಕೆಗೆ ಒಳಗಾಗುತ್ತಿರುವುದು ಸರ್ವೇಸಾಮಾನ್ಯ ಸಹಜವೆಂಬಂತೆ ಮೂಡಿಬಂದಿದೆ. ಮಾನವ ಸಂಬಂಧಗಳಲ್ಲಿ ಸಂಘರ್ಷಗಳು ಒಂದಲ್ಲ ಒಂದು ಕಾರಣಕ್ಕೆ ಏರ್ಪಡುವುದನ್ನು ಸಾಮಾಜಿಕ ಆಯಾಮಗಳ ಭಿನ್ನ ಸ್ವರೂಪವನ್ನು ವೈಶಾಖ ಕಾದಂಬರಿಯಲ್ಲಿ ಹಿಡಿದಿಟ್ಟಿದ್ದಾರೆ.

ನವ್ಯೋತ್ತರ ಆಶಯಗಳನ್ನು ಒಳಗೊಂಡ ವೈಶಾಖವೂ ಜೀವನದ ಅದ್ಭುತ ವಿಸ್ತಾರವನ್ನು ದುರಂತ ಘಟನೆಗಳ ಪರಮಾವಧಿಯನ್ನು ಮೂರ್ತರೂಪದಲ್ಲಿ ಪ್ರತಿಸೃಷ್ಟಿಸಿದೆ.

ಇಲ್ಲಿನ ದರುಮನಹಳ್ಳಿಯ ಜನರ ಅಂತರಂಗದಲ್ಲಿ ಹುದುಗಿಸಿಕೊಂಡಿರುವ ಹಲವಾರು ಸಮಸ್ಯೆಗಳು, ಚದುರಂಗರು ಆಯ್ದುಕೊಂಡ ವಸ್ತು ಬ್ರಾಹ್ಮಣರಿಂದ ದಮನಕ್ಕೆ ಒಳಗಾದ ಗುಲಾಮರಾದ ದಲಿತರು, ಮೇಲುಜಾತಿಯ ಹೆಣ್ಣು ಕೆಳಜಾತಿಯ ಗಂಡನೊಂದಿಗೆ ಪಡೆದುಕೊಳ್ಳುವ ಸಂಬಂಧ, ಕಡಿವಾಣವಿಲ್ಲದೆ ಹರಿಯುವ ಕಾಮಸಂಬಂಧಗಳು ವಿಚಿತ್ರ ನಿಲುವುಗಳನ್ನು ಸಾಂಸ್ಕೃತಿಕ ಸಂದರ್ಭದಲ್ಲಿ ತಾತ್ವಿಕವಾಗಿ ಚರ್ಚೆಗೆ ಒಳಪಡಿಸಲಾಗಿದೆ.

ದರುಮನಹಳ್ಳಿ ಅಧರ್ಮ ಅನ್ಯಾಯವೇ ತಾಂಡವಾಡುತ್ತಿರುವ ಸಂದರ್ಭದಲ್ಲಿ ಅದನ್ನು ಪ್ರತಿಭಟಿಸುವ, ಪ್ರಶ್ನಿಸುವ, ಭ್ರಷ್ಟವ್ಯವಸ್ಥೆಗೆ ಮುಕ್ತಾಯ ಹಾಡುವ ಪ್ರಬಲ ವ್ಯವಸ್ಥೆಯ ಜೊತೆಗೆ ಕ್ರಾಂತಿಕಾರಕ ಪುರುಷನ ಅವಶ್ಯಕತೆ ಇದೆಯೆಂಬುದು ಕಾದಂಬರಿಯ ಅಂತ್ಯವನ್ನು ಸೂಚಿಸುತ್ತದೆ. ಚಾರಿತ್ರಿಕವಾದ ಸಾಮಾಜಿಕ ಧೋರಣೆಗಳು ಸೂಕ್ತವಾಗಿ ಕಾದಂಬರಿಯ ಬೆಂಗಾವಲಾಗಿ ಕೆಲಸ ಮಾಡುತ್ತದೆ ಎಂಬುವುದಕ್ಕೆ ಮೂಕ ಪ್ರತಿಭಟನೆಗಳು ನಿದರ್ಶನಗಳಾಗಿವೆ. ಆದರೆ ಇಲ್ಲಿನ ಘಟನೆಗಳ ಪರಿಣಾಮ ಮತ್ತು ಅನಾಹುತಗಳು ಇಂದಿನ ಭಾರತೀಯ ವ್ಯವಸ್ಥೆಯ ಸ್ಥಿತಿಗತಿಗೆ ಪ್ರತಿರೂಪವೆಂಬಂತಿದೆ. ಪ್ರತಿಭಟನೆ ಪಾತ್ರಗಳ ಮೂಲಕ ಕ್ರಿಯಾತ್ಮಕವಾಗಿ ಕಾಣಿಸಿಕೊಳ್ಳದೆ ಸಾಂಕೇತಿಕವಾಗಿ ಹಿಡಿದಿಟ್ಟಿದ್ದಾರೆ. ಇದರ ಹಿಂದಿನ ಸ್ವರೂಪ ಉದ್ದೇಶವಿಷ್ಟೆ ಆರೋಗ್ಯಕರ ಸಮಾಜದ ನಿರ್ಮಾಣವಾಗಿದೆ.

ಗ್ರಂಥ ಋಣ

ಗ್ರಂಥ ಋಣ

೧) ಚದುರಂಗರ ಸಮಗ್ರ ಕಾದಂಬರಿಗಳು : **ಚದುರಂಗ**
ಅಭಿರುಚಿ ಪ್ರಕಾಶನ
ನಂ: ೩೮೬, ೧೪ನೇ ರಸ್ತೆ,
೩ನೇ ಅಡ್ಡ ರಸ್ತೆ,
ಸರಸ್ವತಿಪುರಂ,
ಮೈಸೂರು-೯. ಮುದ್ರಣ-೨೦೦೪

೨) ವೈಶಾಖ ವೈವಿಧ್ಯ : **ಡಾ.ಬಸವರಾಜ ಸಬರದ,**
ವೈದ್ಯಾವಾರ್ತಾ ಪ್ರಕಾಶನ,
೧೧೦೪, ವಿದ್ಯಾರಣ್ಯಪುರಂ,
ಮೈಸೂರು.೫೭೦೦೦೮
ಮುದ್ರಣ-೧೯೯೫

೩) ಚದುರಂಗ : **ಡಾ. ಎಂ.ಎಸ್. ವೇದ**
ನವಕರ್ನಾಟಕ ಪಬ್ಲಿಕೇಶನ್ಸ್
ಪ್ರೈವೇಟ್ ಲಿಮಿಟೆಡ್,
ಎಂಬೆಸಿ ಸೆಂಟರ್, ಕ್ರಿಸೆಂಟ್ ರಸ್ತೆ,
ಬೆಂಗಳೂರು-೫೬೦೦೦೧
ಮುದ್ರಣ-೨೦೧೧

೪) ನಾರಿ ದಾರಿ ದಿಗಂತ : **ವಿಜಯಾದಬ್ಬೆ**
ರಚನಾ ಪ್ರಕಾಶನ
೩೫೪, ಹೊಸ ಕಾಳಿದಾಸ,
೪ನೇ ಮುಖ್ಯ ರಸ್ತೆ,
ವಿಜಯನಗರ, ಮೊದಲಹಂತ,
ಮೈಸೂರು-೫೭೦ ೦೦೭.
ಮುದ್ರಣ-೧೯೯೭

೫) ಕನ್ನಡ ಕಾದಂಬರಿಗಳಲ್ಲಿ ವರ್ಣ ಮತ್ತು ವರ್ಗ ಸಂಘರ್ಷ : **ಆರ್.ವಿ.ಭಂಡಾರಿ**
ರಾಘವೇಂದ್ರ ಪ್ರಕಾಶನ
ಅಂಕೋಲ-೫೮೧೩೧೪.
ಮುದ್ರಣ-೨೦೦೩

೬) ಅಮೃತ ಮತ್ತು ಗರುಡ	:	ಡಿ.ಆರ್. ನಾಗರಾಜ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಬೆಂಗಳೂರು. ಮುದ್ರಣ-೧೯೯೦.
೭) ಸಮ್ಮುಖ	:	ಕೆ.ನರಸಿಂಹಮೂರ್ತಿ ವಸಂತ ಪ್ರಕಾಶನ, ನಂ:೧೦, ತುಳಸಿವನಂ, ಬೆಂಗಳೂರು. ಮುದ್ರಣ-೨೦೦೨.
೮) ವಿಮರ್ಶೆಯ ಪರಿಭಾಷೆ	:	ಓ.ಎಲ್.ನಾಗಭೂಷಣಸ್ವಾಮಿ ಪರಿಸರ ಪ್ರಕಾಶನ, ಶಿವಮೊಗ್ಗ ಮುದ್ರಣ-೧೯೮೫
೯) ಎದೆಗೆ ಬಿದ್ದ ಅಕ್ಷರ	:	ದೇವನೂರು ಮಹಾದೇವ ಅಭಿನವ ಪ್ರಕಾಶನ ೧೭/೧೮-೨, ಮೊದಲನೆಯ ಮುಖ್ಯ ರಸ್ತೆ, ಮಾರೇನಹಳ್ಳಿ, ವಿಜಯನಗರ, ಬೆಂಗಳೂರು-೪೦. ಮುದ್ರಣ-೨೦೧೩
೧೦) ಕನ್ನಡ ಸಾಹಿತ್ಯ ಸಂಸ್ಕೃತಿ ಕೋಶ	:	ಚಿ.ಸಿ.ನಿಂಗಣ್ಣ ಶ್ರೀ ಸಿದ್ಧಲಿಂಗೇಶ್ವರ ಪ್ರಕಾಶನ ಸರಸ್ವತಿ ಗೋದಾಮ, ಗುಲ್ಬರ್ಗಾ-೫೮೫೧೦೧ ಮುದ್ರಣ-೨೦೦೫
೧೧) ವೇಣುಗೋಪಾಲ ~~ಸರೋಜ~~ ಶೋಭ ಅವರ ಆಯ್ದು ಲೇಖನಗಳು	:	ಮಲ್ಲೇಪುರಂ ಜಿ.ವೆಂಕಟೇಶ್ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಮುದ್ರಣ-೧೯೯೫.

೧೨) ಬಯಲು ರೂಪ : ಸಿ.ಎನ್.ರಾಮಚಂದ್ರನ್,
ಸ್ವಪ್ನ ಬುಕ್ ಹೌಸ್,
ಗಾಂಧಿನಗರ,
ಬೆಂಗಳೂರು-೫೬೦೦೦೯.
ಮುದ್ರಣ-೨೦೦೬.

೧೩) ಮಹಿಳೆ ಸಾಹಿತ್ಯ ಸಮಾಜ : ವಿಜಯಾ ದಬ್ಬೆ,
ರಚನಾ ಪ್ರಕಾಶನ
ಮೈಸೂರು.
ಮುದ್ರಣ-೧೯೮೯.

೧೪) ಸಾಹಿತ್ಯ ವಿಮರ್ಶೆ : ಡಾ:: ಸಿ.ಎನ್. ರಾಮಚಂದ್ರನ್,
ಕರ್ನಾಟಕ ಸಾಹಿತ್ಯ ಅಕಾಡೆಮಿ,
ಬೆಂಗಳೂರು.
ಮುದ್ರಣ-೧೯೮೯.

೧೫) ಸಮಗ್ರ ವಿಚಾರ ವಿಮರ್ಶೆ : ಹರಿಹರ ಪ್ರಿಯ
ಸಂಪುಟ-೨.

೧೬) ಬೇರು-ಕಾಂಡ-ಚಿಗುರು : ಕೆ.ವಿ.ನಾರಾಯಣ್.

೧೭) ಪ್ರಸಂಗ-ತರಂಗ : ಬಿ.ಎಸ್. ಕೇಶವರಾವ್.